# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜೂನ್ ೨೦೧೩ (‘ನವ **ಮಾನವ** ಮಾಸಿಕ’ದ ನೋಂದಿತ ಆವೃತ್ತಿ) ಸಂಪುಟ: ೨ ಸಂಚಿಕೆ: ೧೧

**ಸಂಪಾದಕ : ಡಿ.ಎಸ್.ನಾಗಭೂಷಣ**

**ಚಂದಾ** ವಾರ್ಷಿಕ: ರೂ.೧೨೫/-(ವ್ಯಕ್ತಿಗಳಿಗೆ) ರೂ.೨೦೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ.೧೨/-

**ವಿಳಾಸ:** ಎಚ್.ಐ.ಜಿ-೫, ‘ನುಡಿ’, ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ದೂ:** ೦೮೧೮೨-೨೪೮೫೭೪ **ಸಂಚಾರಿ:** ೯೪೪೯೨ ೪೨೨೮೪ **ಈ ಮೇಲ್:** dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ರಾಜ್ಯ ವಿಧಾನ ಸಭಾ ಚುನಾವಣೆಗಳು ಮುಗಿದಿವೆ. ಬಹುಜನರ ನಿರೀಕ್ಷೆಯಂತೆಯೇ ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆದು ಕಳೆದ ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ಧರಾಮಯ್ಯ ಈಗ ಮುಖ್ಯಮಂತ್ರಿಯಾಗಿ ತಮ್ಮ ಸಚಿವ ಸಂಪುಟವನ್ನೂ ರಚಿಸಿದ್ದಾಗಿದೆ. ಸಿದ್ಧರಾಮಯ್ಯನವರ ನೇತೃತ್ವದ ಈ ಸರ್ಕಾರಕ್ಕೆ ಪತ್ರಿಕೆಯ ಎಲ್ಲ ಓದುಗರ ಪರವಾಗಿ ಈ ಮೂಲಕ ಶುಭ ಹಾರೈಕೆಗಳು!

ಈ ಬಾರಿಯ ವಿಧಾನಸಭಾ ಚುನಾವಣೆ ಹಲವು ರೀತಿಯಲ್ಲಿ ವಿಶಿಷ್ಟವೆನ್ನಿಸಿದೆ. ಮುಖ್ಯವಾಗಿ, ಜನತೆ ಮನಸ್ಸು ಮಾಡಿದರೆ ಜಾತಿ, ಹಣ ಮತ್ತು ತೋಳ್ಬಲಗಳನ್ನು ಮೆಟ್ಟಿ ನಿಲ್ಲಬಹುದು ಎಂಬುದರ ಸೂಚನೆಗಳನ್ನು ಈ ಚುನಾವಣೆ ನೀಡಿದೆ. ಆ ಮೂಲಕ ಸಂಸದೀಯ ಪ್ರಜಾಪ್ರಭುತ್ವದಲ್ಲೇ ಕಳೆದು ಹೋಗುತ್ತಿದ್ದ ಜನರ ನಂಬಿಕೆ ಸ್ವಲ್ಪಮಟ್ಟಿಗಾದರೂ ಪುನರ್ಸ್ಥಾಪಿತಬಾಗಿದೆ ಎಂದು ಹೇಳಬಹುದು. ಇಂತಹ ನಿರ್ಣಾಯಕ ಮತದಾನಕ್ಕೆ ತಕ್ಕುನಾದ ಪರಿಸ್ಥಿತಿಯನ್ನು ಬಿಜೆಪಿ ತನ್ನ ಐದು ವರ್ಷಗಳ ಭ್ರಷ್ಟ ಮತ್ತು ದುಷ್ಟ ರಾಜಕಾರಣದ ಮೂಲಕ ನಿರ್ಮಿಸಿತ್ತೆಂಬುದೂ ನಿಜವೇ. ಅದರ ಪರೋಕ್ಷ ಫಲ ಕಾಂಗ್ರೆಸ್ಸಿಗೆ ದಕ್ಕಿದೆ.

ಮುಖ್ಯವಾಗಿ ಯಡ್ಯೂರಪ್ಪನವರ ಸಮಯಸಾಧಕ ಮತ್ತು ವೈಯುಕ್ತಿಕ ಶೈಲಿಯ ರಾಜಕಾರಣಕ್ಕೆ, ಜಾತ್ಯತೀತ ಜನತಾದಳವೆಂಬ ಅಪದ್ಧ ಹೆಸರಿನ ಅಪ್ಪ-ಮಕ್ಕಳ ಊಳಿಗಮಾನ್ಯಶಾಹಿ ರಾಜಕೀಯ ಪಕ್ಷಕ್ಕೆ ಮತ್ತು ಬಿಜೆಪಿಯ ಭಂಡ ನೈತಿಕತೆಯ ಘೋಷಣೆಗಳಿಗೆ ರಾಜ್ಯದ ಜನತೆ ನೀಡಿರುವ ಪೆಟ್ಟು ಕಾಂಗ್ರೆಸ್ ಕೂಡ ಒಮ್ಮೆ ಮುಟ್ಟಿ ನೋಡಿಕೊಳ್ಳುವಂತಹುದಾಗಿದೆ. ಏಕೆಂದರೆ ಕಾಂಗ್ರೆಸ್ಸಿಗೆ ಸಿಕ್ಕಿರುವ ಇಂದಿನ ಜಯ ಅದರ ಸ್ವಂತ ವರ್ಚಸ್ಸಿನಿಂದಲ್ಲ ಎಂಬುದು ಅದಕ್ಕೆ ಆದಷ್ಟು ಬೇಗ ಗೊತ್ತಾಗಬೇಕಿದೆ. ಜನತೆ ಬೇರೆ ಪರ್ಯಾಯವಿಲ್ಲದೆ, ಮತ್ತೊಂದು ಅವಕಾಶವನ್ನು ಅದಕ್ಕೆ ನೀಡಿದೆ ಅಷ್ಟೆ.

ಈ ಬಾರಿಯ ಚುನಾವಣೆಗಳಲ್ಲಿ ಜನತೆ ಎಲ್ಲ ಜಾತಿ ಮತ್ತು ಹಣಬಲಗಳೆದುರು ಕಿಮ್ಮನೆ ರತ್ನಾಕರ, ಪ್ರಸನ್ನ ಕುಮಾರ್, ವೈ.ಎಸ್.ವಿ. ದತ್ತ, ಕೆ.ಎಸ್. ಪುಟ್ಟಣ್ಣಯ್ಯನವರಂತಹವರನ್ನು ಗೆಲ್ಲಿಸಿರುವುದೂ, ಈಶ್ವರಪ್ಪ, ಉದಾಸಿ, ಅನಿತಾ ಕುಮಾರಸ್ವಾಮಿ, ರೇಣುಕಾಚಾರ್ಯರಂತಹವರನ್ನು ಸೋಲಿಸಿರುವುದು ನಮ್ಮ ಪ್ರಜಾಪ್ರಭುತ್ವದ ಒಳತಿರುಳು ನಿಜವಾದ ಸತ್ವ ಗಳಿಸಿಕೊಳ್ಳುತ್ತಿರುವುದರ ಶುಭ ಸೂಚನೆಯಾಗಿದೆ. ಹಾಗೇ ಯೋಗೀಶ್ವರ, ಕೆ.ಜಿ. ಬೋಪಯ್ಯ, ಡಿ.ಕೆ.ಶಿವಕುಮಾರ್, ಅನಿಲ್ ಲಾಡ್ ಮುಂತಾದವರ ಗೆಲವೂ ಪ್ರಜಾಪ್ರಭುತ್ವದ ನೆಲ ಸಂಪೂರ್ಣ ಹದಗೊಳ್ಳಲು ಜನತೆ ಕಲಿಯಬೇಕಾದ ಪಾಠಗಳು ಇನ್ನೂ ಇವೆ ಎಂಬುದನ್ನೂ ಸೂಚಿಸುತ್ತಿದೆ.

ಹಾಗೆ ನೋಡಿದರೆ ಇದೆಲ್ಲವೂ ಸಿದ್ಧರಾಮಯ್ಯನವರು ರಾಜ್ಯದಲ್ಲಿ ಹೊಸ ರಾಜಕೀಯ ಸಂಸ್ಕೃತಿಯೊಂದನ್ನು ಬೆಳೆಸಲು ಸೂಕ್ತ ಪರಿಸ್ಥಿತಿಯನ್ನು ನಿರ್ಮಿಸಿ ಕೊಟ್ಟಿದೆ ಎಂದೇ ಹೇಳಬೇಕು.

## ಸಮಾಜವಾದಿ ಸಿದ್ಧರಾಮಯ್ಯ



ಸಿದ್ಧರಾಮಯ್ಯ ತಮ್ಮನ್ನು ತಾವು ರಾಜಕೀಯವಾಗಿ ಸಮಾಜವಾದಿ ಎಂದು ಕರೆದುಕೊಳ್ಳಬಯಸುವವರು. ಅದರಲ್ಲೂ ಲೋಹಿಯಾ ಸಮಾಜವಾದಿದಿ ಎಂದು ಗುರುತಿಸಿಕೊಳ್ಳಲು ಅವರಿಗೆ ಹೆಚ್ಚಿನ ಹೆಮ್ಮೆ. ಇದು ಅವರನ್ನು ಮುಖ್ಯಮಂತ್ರಿಯಾಗಿಸಲು ದೆಹಲಿ ಹೈಕಮಾಂಡ್ ವಲಯದಲ್ಲಿ ಸಹಾಯ ಮಾಡಿರದಿದ್ದರೂ, ಅವರು ಕಳೆದ ಮುವ್ವತ್ತು ವರ್ಷಗಳಲ್ಲಿ ರಾಜಕೀಯವಾಗಿ ಮೇಲೇರಲು ಮತ್ತು ಈಗ ಜನತೆ ಮತ್ತು ಶಾಸಕಾಂಗದ ಸ್ತರಗಳಲ್ಲಿ ಹೆಚ್ಚಿನ ಮಾನ್ಯತೆ ಗಳಿಸಿಕೊಳ್ಳಲು ಸಹಾಯ ಮಾಡಿರಬಹುದು.ಸಮಾಜವಾದಿ ಹಿನ್ನೆಲೆಯಿಂದ ಬಂದ ಈ ಹಿಂದಿನ ಮುಖ್ಯಮಂತ್ರಿಗಳಾದ ಎಸ್. ಬಂಗಾರಪ್ಪ, ಎಸ್.ಎಂ. ಕೃಷ್ಣ ಮತ್ತು ಜೆ.ಎಚ್.ಪಟೇಲರು ಸಮಾಜವಾದಕ್ಕೆ ವಿಶೇಷ ಮರ್ಯಾದೆ ತರುವಂತಹ ಕೆಲಸವನ್ನೇನೂ ಮಾಡದಿದ್ದರೂ, ಸಿದ್ಧರಾಮಯ್ಯ ಅಂತಹ ಕೆಲಸ ಮಾಡುವರೆಂಬ ಆಸೆ ಜನತೆಯಲ್ಲಿದ್ದರೆ ಅದಕ್ಕೆ ಕಾರಣ ಅವರು ಸಮಾಜವಾದಿ ಪಕ್ಷ ರಾಜಕಾರಣದ ಹಿನ್ನೆಲೆಯಿಂದ ಬರದೆ, ಅದರ ತತ್ವ ರಾಜಕಾರಣದ ಹಿನ್ನೆಲೆಯಿಂದ ಬಂದವರು ಎಂಬುದೇ ಆಗಿದೆ.

ಸಿದ್ಧರಾಮಯ್ಯ ಕಳೆದ ಮುವ್ವತ್ತು-ಮುವ್ವತ್ತೈದು ವರ್ಷಗಳಿಂದ ನನಗೆ ಪರಿಚಿತರು. ನಾವು ಕೆಲವರು-ಮುಖ್ಯವಾಗಿ ಪ್ರೊ. ನಂಜುಂಡಸ್ವಾಮಿ, ಕೆ. ರಾಮದಾಸ್, ಬಿ.ಎನ್. ಶ್ರೀರಾಂ, ಟಿ.ಎನ್. ನಾಗರಾಜ್, ದೇವನೂರ ಮಹಾದೇವ, ನೆಲೆಮನೆ ದೇವೇಗೌಡ, ರಾಜಶೇಖರ ಕೋಟಿ, ಎಚ್. ಗೋವಿಂದಯ್ಯ , ಶಿವರಾಮು ಕಾಡನಕುಪ್ಪೆ, ವೈ. ಮಹೇಶ್ ಮುಂತಾದವರು-ಸಮಾಜವಾದಿ ಯುವಜನಾ ಸಭಾದ ಅಡಿಯಲ್ಲಿ ಮೈಸೂರಿನ ಕನ್ನೇಗೌಡನ ಕೊಪ್ಪಲಿನ ನೆಲೆಮನೆ ಪ್ರಕಾಶನದ ಬಾಡಿಗೆ ಮನೆಯಲ್ಲಿ ಆಗಾಗ್ಗೆ ಸೇರಿ ಸಮಾಜವಾದಿ ಚರ್ಚೆಗಳನ್ನು ನಡೆಸುತ್ತಿದ್ದಾಗ ಆಗ ಕಿರಿಯ ವಕೀಲರಾಗಿದ್ದ ಯುವ ಸಿದ್ಧರಾಮಯ್ಯ ಒಂದೆರಡು ಬಾರಿ ಬಂದು ಹಣಕಿ ಹೋಗಿದ್ದು ನೆನಪಿದೆ. ಆದರೆ ನನಗೆ ವೈಯುಕ್ತಿಕವಾಗಿ ಪರಿಚಯವಾದದ್ದು ೧೯೮೦ರಲ್ಲಿ ಅವರು ಲೋಕಸಭಾ ಚುನಾವಣೆಗಳಲ್ಲಿ ಈ ಎಲ್ಲ ಸಮಾಜವಾದಿಗಳ ಬೆಂಬಲದೊಂದಿಗೇ ಲೋಕದಳದ ಅಭ್ಯರ್ಥಿಯಾಗಿ ಸ್ಪರ್ಧಿಸಿದಾಗ, ಆಗ ನಾನು ಸಂಪಾದಿಸುತ್ತಿದ್ದ ‘ಮಾನವ’ ಪತ್ರಿಕೆಗೆ ನೂರು ರೂಪಾಯಿಗಳನ್ನು ಕೊಟ್ಟು ಜಾಹೀರಾತು ನೀಡುವ ಮೂಲಕ.

ಅಲ್ಲಿಂದಾಚೆಗೆ ಅವರನ್ನು ನಾನು ಹಲವು ಬಾರಿ ಭೇಟಿಯಾಗಿದ್ದೇನೆ. ನಾನಾಗಿ, ವೈಯುಕ್ತಿಕವಾಗಿ ಅಲ್ಲ. ಸ್ನೇಹಿತರೊಂದಿಗೆ ಇಲ್ಲವೇ ಆಹ್ವಾನಿತನಾಗಿ ಸಮಾರಂಭಗಳಲ್ಲಿ. ಅವರು ೨೦೦೪ರಲ್ಲಿ

ಜೆಡಿಎಸ್‌ನಲ್ಲಿದ್ದು, ಕಾಂಗ್ರೆಸ್ಸಿನೊಂದಿಗೆ ಅವರ ಪಕ್ಷ ಸಮ್ಮಿಶ್ರ ಸರ್ಕಾರ ರಚಿಸುವ ಸಂದರ್ಭದಲ್ಲಿ ಅವರ ಮತ್ತು ನನ್ನ ಆಪ್ತ ಗೆಳೆಯರ ಸಲಹೆಯ ಮೇರೆಗೆ ನಾನು 'ನೀವು ಮುಖ್ಯಮಂತ್ರಿಯಾಗುವುದಿದ್ದರೆ ಮಾತ್ರ ಸರ್ಕಾರದಲ್ಲಿ ಭಾಗವಹಿಸಿ' ಎಂದು ಸೂಚಿಸಿದ್ದೆ. ಅವರೂ ತಮ್ಮ ನಿಲುವೂ ಅದೇ ಆಗಿದೆ ಎಂದು ಹೇಳಿದ್ದರು. ಏಕೆಂದರೆ, ಆ ಹೊತ್ತಿಗಾಗಲೇ ಸಿದ್ಧರಾಮಯ್ಯ ರಾಜಕೀಯವನ್ನು ಪ್ರವೇಶಿಸಿದ ಮತ್ತು ಅದರಲ್ಲಿ ಅವರು ಯಾವುದೇ ಹೆಚ್ಚಿನ ಸವಾಲಿಲ್ಲದೆ ಸರಸರನೆ ಬೆಳೆಯಲು ನೆರವಾದ ಅಂದಿನ ರಾಜಕಾರಣದ ಬಹು ಮುಖ್ಯ ಅಂಗಶಕ್ತಿಯಾಗಿದ್ದ ಸಾಮಾಜಿಕ ನ್ಯಾಯ ರಾಜಕಾರಣ ಅವರಲ್ಲಿ ಮುಖ್ಯ ಮಂತ್ರಿಯ ಕನಸನ್ನು ಚಿಗುರಿಸಿತ್ತು.

ಆದರೆ ಅವರು ಆಗ ಉಪ ಮುಖ್ಯಮಂತ್ರಿ ಸ್ಥಾನವನ್ನು ಒಪ್ಪಿಕೊಳ್ಳಬೇಕಾಗಿ ಬಂದು, ನಂತರ ಪಡಬಾರದ ಪಾಡುಪಟ್ಟು, ಕೊನೆಗೆ ಪಕ್ಷ ತೊರೆಯಬೇಕಾಗಿ ಬಂತು. ಆಗಲೂ ಕೂಡ ನಾವು ಕೆಲವು ಗೆಳೆಯರು ಅವರಿಗೆ ತಾವು ನಂಬಿರುವ ಸಮಾಜವಾದಿ ತತ್ವದ ಆಧಾರದ ಮೇಲೆ ಹೊಸ ಪಕ್ಷ ಕಟ್ಟಲು ಸೂಚಿಸಿದೆವು. ಅವರು ಆ ಸಂದರ್ಭದಲ್ಲಿ ಸಂಘಟಿಸಿದ್ದ 'ಅಹಿಂದ' ಸಮಾವೇಶಕ್ಕೆ ನಾನೂ ಆಹ್ವಾನಿತನಾಗಿ ಹೋಗಿ, ಲೋಹಿಯಾ ಪ್ರತಿಪಾದಿಸಿದಂತೆ ಸಾಮಾಜಿಕ ನ್ಯಾಯ ರಾಜಕಾರಣವೆಂಬುದು ಹೇಗೆ ಜಾತಿ ರಾಜಕಾರಣವನ್ನು ಮೀರಿದ ಒಂದು ದೊಡ್ಡ ಗುರಿಯುಳ್ಳ ಸಂಕೀರ್ಣ ರಾಜಕಾರಣವಾಗಿದೆ ಹಾಗೂ ಅದು ಜಾತಿ ನ್ಯಾಯ ರಾಜಕಾರಣ ಮಾತ್ರವಾಗಿ ಕುಬ್ಜಗೊಂಡರೆ ಎಂತಹ ಅಪಾಯಕಾರಿ ರಾಜಕಾರಣಕ್ಕೆ ದಾರಿ ಮಾಡಿಕೊಡಬಹುದು ಎಂಬುದನ್ನು ವಿವರಿಸಿದ್ದೆ.

ಆದರೆ ಆ ಹೊತ್ತಿಗೆ ಕಾಂಗ್ರೆಸ್‌ಗೆ ನಿಜವಾದ ಜನ ನಾಯಕನೇ ಇಲ್ಲವಾಗಿ ಅದು ಸಿದ್ಧರಾಮಯ್ಯನವರಿಗೆ ಅವರ ಸ್ವಜಾತಿ ಬಂಧುಗಳಾದ ಎಚ್.ವಿಶ್ವನಾಥ್ ಮತ್ತು ಎಚ್.ಎಂ. ರೇವಣ್ಣನವರ ಮೂಲಕ ಬಲೆ ಬೀಸಿತ್ತು. ಅವರು, ಮುಖ್ಯಮಂತ್ರಿಯಾಗುವ ಅವರ ಕನಸು ಕಾಂಗ್ರೆಸ್ ಮೂಲಕ ಮಾತ್ರ ನನಸಾಗಲು ಸಾಧ್ಯ ಎಂಬ ನಂಬಿಕೆಯನ್ನು ಅವರ ಮನಸ್ಸಿನಲ್ಲಿ ಬಿತ್ತಿಬಿಟ್ಟಿದ್ದರು. ಹಾಗಾಗಿ ಸಿದ್ಧರಾಮಯ್ಯ ತಮ್ಮ ಸ್ವಂತ ಬಲದ ಮೇಲೆ ಪಕ್ಷ ಕಟ್ಟುವ ಆತ್ಮವಿಶ್ವಾಸ ತೋರಲಿಲ್ಲ. ಗೆಳೆಯ ದೇವನೂರ ಮಹಾದೇವ ಅವರೂ ಅದೇ ಹೊತ್ತಿಗೆ 'ಸರ್ವೋದಯ ಕರ್ನಾಟಕ ಪಕ್ಷ' ರಚಿಸಿ ಸಿದ್ಧರಾಮಯ್ಯ ಅವರನ್ನು ಸೆಳೆಯುವ ಪ್ರಯತ್ನ ಮಾಡಿದರಾದರೂ, ನಮ್ಮ ಹಾಗೆ ಬರೀ ತತ್ವ ರಾಜಕಾರಣದಲ್ಲೇ ಮುಳುಗದೆ ವ್ಯಾವಹಾರಿಕ ರಾಜಕಾರಣದ ಪಟ್ಟುಗಳನ್ನು ಅರಿತಿದ್ದ ಅವರು ಅರೆ ಮನಸ್ಸಿನಲ್ಲೇ ಕಾಂಗ್ರೆಸ್ ಸೇರಿದರು. ಆಗೊಮ್ಮೆ ನಾನು ಅವರನ್ನು 'ಕಾಂಗ್ರೆಸ್ಸಿನಲ್ಲಿ ಹೊಸ್ತಿಲು ಪೂಜೆ ಯಶಸ್ವಿಯಾಗಿ ನಡೆಯಿತೇ? ಎಂದು ಕೇಳಿದ್ದೆ. ಅವರು ನಕ್ಕು 'ಒಳಗೆ ಹೋಗಿಯಾಗಿದೆ, ಕಾದು ನೋಡಬೇಕು' ಎಂದಿದ್ದರು.

ಸಿದ್ಧರಾಮಯ್ಯನವರ ಸ್ವಾಭಿಮಾನಿ ವ್ಯಕ್ತಿತ್ವವನ್ನು ಬಲ್ಲ ನಾವು ಕೆಲವರು ಕಾಂಗ್ರೆಸ್ಸಿನಲ್ಲಿ ಅವರ ಗತಿ ಏನೋ ಎಂತೋ ಎಂದು ಆತಂಕಪಟ್ಟಿದ್ದೆವು. ಆದರೆ ಅವರು ಎಲ್ಲರ ಆತಂಕಗಳನ್ನು ಮೀರಿ ಆ ಪಕ್ಷದಲ್ಲಿ ತಮ್ಮನ್ನು ತಾವು ನಾಯಕರಾಗಿ ಯಶಸ್ವಿಯಾಗಿ ಸ್ಥಾಪಿಸಿಕೊಂಡರು.. ಹಾಗೇ ತಮ್ಮ ಸ್ವಚ್ಛ ರಾಜಕೀಯ ಬಿಂಬ ಸ್ವಲ್ಪವೂ ಮಸುಕಾಗದಂತೆ ಕೂಡ ಎಚ್ಚರ ವಹಿಸಿದರು. ಅದು ಅವರ ನಿಜವಾದ ಸಾಧನೆ. ಅದೇ ಅವರನ್ನು ಅವರ ಜೀವನದ ಮಹದೋದ್ದೇಶವಾದ ಮುಖ್ಯಮಂತ್ರಿಯಾಗುವ ಗುರಿಗೂ ತಲುಪಿಸಿರುವುದು. ಅವರು ಮುಖ್ಯ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದಾಗ ಕೆಲವೆಡೆ ನಡೆದ ಪ್ರತಿಭಟನೆಗಳಾದರೂ ಅವರಿಗೆ ಸಾಮಾಜಿಕ ನ್ಯಾಯ ರಾಜಕಾರಣದ ಸ್ಥೂಲತೆಯ ಪರಿಣಾಮಗಳ ಪರಿಚಯ ಮಾಡಿಕೊಟ್ಟಿರಬೇಕು. ಅದು ಅವರಿಗೆ, ತಮ್ಮ ಜೀವನದ ಮಹದೋದ್ದೇಶ ಈಡೇರುವುದಷ್ಟೇ ಅಲ್ಲ, ಅದು ಸಾರ್ಥಕವೂ ಆಗಬೇಕಾದರೆ ಮಾಡಬೇಕಾದ ರಾಜಕಾರಣ ದಿಟ್ಟ, ನೇರ ಮಾತ್ರವಲ್ಲ, ಎಷ್ಟು ಆಳವೂ ಆಗಿರಬೇಕೆಂಬುದನ್ನು ಕಲಿಸಿರಬೇಕು.

ಸಿದ್ಧರಾಮಯ್ಯ ಅವರು ಈಗ ರಚಿಸಿರುವ ಮಂತ್ರಿಮಂಡಲ ಮತ್ತು ಈ ಮಂತ್ರಿಮಂಡಲಕ್ಕೆ ಅವರು ನೀಡಿರುವ ಆರಂಭಿಕ ಸೂಚನೆಗಳು ಇಂತಹ ರಾಜಕಾರಣದ ಒಂದು ಒಳ್ಳೆಯ ಆರಂಭದಂತೆಯೇ ಕಾಣುತ್ತದೆ. ಆದರೆ, ಚಿಂಚನಸೂರು, ತಂಗಡಗಿಗಳಂತಹ ಅನುಮಾನಾಸ್ಪದ ವ್ಯಕ್ತಿಗಳನ್ನು ಮತ್ತು ರಾಮಲಿಂಗಾರೆಡ್ಡಿ, ದೇಶಪಾಂಡೆಯವರಂತಹ ತಿಮಿಂಗಿಲಗಳನ್ನು ದೂರವಿಡುವ ಧೈರ್ಯ ಮಾಡಿದ್ದರೆ ಚೆನ್ನಿರುತ್ತಿತ್ತು ಎಂದೂ ಎನ್ನಿಸದಿರದು. ಹಾಗೇ ಅವರು ಮುಖ್ಯ ಮಂತ್ರಿಯಾದ ಕೂಡಲೇ ಮಾಡಿದ ರೂಪಾಯಿಗೆ ಕೇಜಿ ಅಕ್ಕಿ ಮತ್ತು ಕೆಲವು ವರ್ಗಗಳ ಸಾಲ ಮನ್ನಾದಂತಹ ಕಾರ್ಯಕ್ರಮಗಳ ಘೋಷಣೆ ಖಂಡಿತ ಶೈಲಿಯಲ್ಲಾಗಲೀ, ಸತ್ವದಲ್ಲಾಗಲೀ ಸಮಾಜವಾದಿ ಕಾರ್ಯಕ್ರಮಗಳಲ್ಲ ಎಂಬುದನ್ನು ಯಾರಾದರೂ ಅವರಿಗೆ ಹೇಳಬೇಕಿದೆ.

ಅದೇನೇ ಇರಲಿ, ಸಿದ್ಧರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಮಾಡಲೇಬೇಕೆಂದು ಅವರ ಸಮಾಜವಾದಿ ಮಿತ್ರರು ಆಗ್ರಹಿಸುವ ಮೂರು ಮುಖ್ಯ ಕೆಲಸಗಳೆಂದರೆ:

**೧. ರಾಜ್ಯದ ಜನಜೀವನದ ಮೂಲ ಮೌಲ್ಯಗಳನ್ನೇ ಬುಡಮೇಲುಗೊಳಿಸಿರುವ ಗಣಿಗಾರಿಕೆ ಮತ್ತು ಭೂ ವ್ಯವಹಾರಗಳ ದಂಧೆಗಳನ್ನು ಮಟ್ಟ ಹಾಕುವುದು ಮತ್ತು ಈ ದಂಧೆಗೆ ಕಾರಣರಾಗಿರುವ ಆರೋಪಿಗಳ ಮೇಲಿನ ಮೊಕದ್ದಮೆಗಳನ್ನು ಬಲಗೊಳಿಸಿ ಅವರಿಗೆ ಶಿಕ್ಷೆಯಾಗುವುದನ್ನು ಖಚಿತಪಡಿಸಿಕೊಳ್ಳುವುದು.**

**೨. ಶಿಕ್ಷಣ ಮತ್ತು ಸಾಂಸ್ಕೃತಿಕ ಕ್ಷೇತ್ರಗಳನ್ನು ನಾಗರಿಕ ಮೂಲ ಸೌಲಭ್ಯ ಕ್ಷೇತ್ರಗಳಷ್ಟೇ ಮುಖ್ಯ ಮತ್ತು ನಿರ್ಣಾಯಕ ಕ್ಷೇತ್ರಗಳೆಂದು ಪರಿಗಣಿಸಿ ಅಲ್ಲಿ ಹಲವು ನೆಲೆಗಳಲಲ್ಲಾಗಿರುವ ಅವುಗಳ ಅಪಮೌಲ್ಯೀಕರಣವನ್ನು ಪ್ರಜ್ಞಾವಂತರ ನೆರವು ಪಡೆದು ಆದ್ಯತೆಯ ಮೇಲೆ ಸರಪಡಿಸುವುದು.**

**೩.ಸಮಾಜವಾದದ ಆಧಾರ ತತ್ವವಾದ ಸರ್ವವ್ಯಾಪಕವಾದ ವಿಕೇಂದ್ರೀಕರಣವನ್ನು ಸಾಧಿಸಲು, ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪುರ್ನಸಂಘಟಿಸಿ ಅದನ್ನು ಬಲಪಡಿಸಲು ಕ್ರಮಗಳನ್ನು ಕೈಗೊಳ್ಳುವುದು.**

**–ಸಂಪಾದಕ**

## ನಿಮ್ಮ ಮಾತು

ಪ್ರಿಯ ಸಂಪಾದಕರೇ,

ತಪ್ಪದೇ ಕೈಸೇರುವ 'ಹೊಸ ಮನುಷ್ಯ' ಪ್ರತಿ ತಿಂಗಳೂ ನನ್ನ ಅಜ್ಞಾನವನ್ನು ಹೀಯಾಳಿಸಿ, ಜ್ಞಾನದ ಎಲ್ಲೆಗಳನ್ನು ಹಿಗ್ಗಿಸುತ್ತಲೇ ಇದ್ದಾನೆ. ಅವನ ಪ್ರಗತಿ ಉಜ್ವಲ ದಾರಿಯಲ್ಲಿ ಸಾಗಲಿ.

**–ಡಾ॥ ಡಿ.ಬಿ. ರಾಮಚಂದ್ರಾಚಾರ್**, ಬೆಂಗಳೂರು

ಮೇ ಸಂಚಿಕಯದು ಅರ್ಥಪೂರ್ಣ ಸಂಪಾದಕೀಯ. ಹಾಗೇ ಎಂ.ಡಿ.ಎನ್. ಕುರಿತ ಲೇಖನ ಮನಮುಟ್ಟುವಂತಿದೆ. ಇಂದಿರಾ ಲಂಕೇಶ್ ಅವರ ಪುಸ್ತಕ ಕುರಿತ ಸವಿತಾ ಮೇಡಂ ಅವರ ಅವಲೋಕನ ಆ ಪುಸ್ತಕವನ್ನು ಕೊಂಡು ಓದುವಂತೆ ಪ್ರೇರೇಪಿಸಿದೆ. ಚಂದ್ರೇಗೌಡರ ನಾಟಕಗಳ ನಿಮ್ಮ ವಿಮರ್ಶೆ ನಮ್ಮಂತಹ ಎಳೆಯರಿಗೆ ನಾಟಕಗಳನ್ನು ನೋಡುವ ಬಗೆಗಳನ್ನು ಕುರಿತ ಪಾಠದಂತಿದೆ. ಆದರೆ ಬುದ್ಧನನ್ನು ಕುರಿತ ಲೇಖನಗಳಿಗೆ ಮೀಸಲಿಟ್ಟ ಪುಟಗಳು ಜಾಸ್ತಿ ಎನ್ನಿಸಿತು.

**–ಬಿ.ರಾಜೇಶ್**, ಮೈಸೂರು

ಬಾಲಗಂಗಾಧರರು ಇತ್ತೀಚೆಗೆ ಮಂಡಿಸಿರುವ ವಾದಗಳು ಹಿಂದೂ ಭಾರತೀಯ ಪರಂಪರೆ ಕುರಿತು ಮರುಚಿಂತನೆಗೆ ಪ್ರೇರಣೆ ನೀಡುವಂತಿವೆ. ಆದರೆ ಈ ವಾದವನ್ನು ವಾದದಿಂದ ಎದುರಿಸದೆ ಸಂಘ ಪರಿವಾರ, ಮೂಲಭೂತವಾದಿ ಹುನ್ನಾರ, ರಾಷ್ಟ್ರೋತ್ಥಾನ ಪರಿಷತ್ತಿನ ವಾಣಿ ಎಂದೆಲ್ಲ ಹೇಳಿದರೆ ಏನು ಹೇಳಿದಂತಾಯಿತು?

ಬುದ್ಧನನ್ನು ಕುರಿತ ಲೇಖನದಲ್ಲಿ ಪ್ರಗತಿಪರತೆಯ ಹೆಸರಿನಲ್ಲಿ ಭಾರತದ ಚರಿತ್ರೆಯನ್ನು ವಿಕೃತಗೊಳಿಸುವ ಎಡಪಂಥೀಯ ಹುನ್ನಾರಗಳನ್ನು ದಿಟ್ಟವಾಗಿ ಪ್ರಶ್ನಿಸಿರುವುದಕ್ಕಾಗಿ ನಿಮಗೆ ಅಭಿನಂದನೆಗಳು. ಆದರೆ ಎಚ್ಚರಿಕೆ! ನಿಮಗೆ ಬ್ರಾಹ್ಮಣಶಾಹಿಗಳ ಏಜೆಂಟ್ ಎಂಬ ಬಿರುದು ಸದ್ಯದಲ್ಲಿಯೇ ಸಲ್ಲಲಿದೆ!

**–ಡಾ॥ ಎಂ. ಪ್ರಭಾಕರ ಜೋಷಿ,** ಮಂಗಳೂರು

ಬಾಲಗಂಗಾಧರ–ಝಳಕಿಯವರ ವಿಚಾರಗಳನ್ನು ಕುರಿತ ಓದುಗರ ಪ್ರತಿಕ್ರಿಯೆಗಳು ಕುತೂಹಲಕಾರಿಯಾಗಿವೆ. ಅದರಲ್ಲಿ ಓ.ಎಲ್.ಎನ್. ಉಲ್ಲೇಖಿಸಿದ ವಚನ ಸಂದರ್ಭೋಚಿತವಾಗಿದೆ. ಆದರೆ ಬುದ್ಧನನ್ನು ಕುರಿತ ನಮ್ಮ ಲೇಖನದ ಬಗ್ಗೆ ನನಗೆ ಕೆಲವು ಪ್ರಶ್ನೆಗಳಿವೆ.

**–ಡಾ. ಜಿ.ಬಿ. ಹರೀಶ,** ಬೆಂಗಳೂರು

# ನಮ್ಮ ಸಮಾಜವಾದಿಗಳು: ಸರ್ವೋದಯ ಸಮಾಜವಾದಿ ಎನ್. ಈಶ್ವರ್



**ಎನ್.** ಈಶ್ವರ್ ನಿಜ ಅರ್ಥದಲ್ಲಿ ಹುಟ್ಟು ಸಮಾಜವಾದಿ. ಯಾಕೆಂದರೆ ಶಿಕ್ಷಣ, ಓದು ಇವೆಲ್ಲಕ್ಕಿಂತ ಅವರ ವ್ಯಕ್ತಿತ್ವದಲ್ಲೇ ಜಾತಿ-ಅಂತಸ್ತುಗಳನ್ನು ಮೀರಿದ ಮಾನವ ಸಮಾನತೆಯ ತುಡಿತ ಕ್ರಿಯಾಶೀಲವಾಗಿತ್ತು. ಜೊತೆಗೆ ನಿರ್ಭೀತಿ ಅವರ ಸ್ವಭಾವವಾಗಿತ್ತು. ತಂದೆ, ಇ. ಪಿ. ನಂಜಪ್ಪ, ದೊಡ್ಡಪ್ಪ ಶಂಕರಪ್ಪ, ತಾತ ಪುಟ್ಟಮಲ್ಲಯ್ಯ ಇವರೆಲ್ಲ ಕುಟುಂಬದ ವ್ಯಾಪಾರ-ವಹಿವಾಟುಗಳಲ್ಲಿ ಮತ್ತು ಅಂದಿನ ಮೈಸೂರಿನ ಸಾಮಾಜಿಕ, ರಾಜಕೀಯ ವಲಯಗಳಲ್ಲಿ ಒಳ್ಳೆಯ ಹೆಸರು ಗಳಿಸಿದ್ದರು. ತಾತ ೧೯೧೭ರ ಹೊತ್ತಿಗೇ ಅಂದಿನ ಮೈಸೂರು ರಾಜ್ಯದ ಕೈಮಗ್ಗದ ಸಹಕಾರ ಸಂಘ ಸ್ಥಾಪಿಸಿ ಅದರ ಅಧ್ಯಕ್ಷರಾಗಿದ್ದರು. ತಂದೆ ೧೯೪೦ರ ದಶಕದಲ್ಲಿ ಮೈಸೂರು ಪುರಸಭೆಯ ಉಪಾಧ್ಯಕ್ಷರಾಗಿದ್ದರು. ದೊಡ್ಡಪ್ಪ ೧೯೫೨ರ ಮೊದಲ ಚುನಾವಣೆಯಲ್ಲಿ ಎಂ. ಎಸ್. ಗುರುಪಾದ ಸ್ವಾಮಿಯವರ ವಿರುದ್ಧ ಗೆದ್ದು ಆಗಿನ ಮೈಸೂರು ಲೋಕಸಭಾ ಸದಸ್ಯರಾಗಿದ್ದರು. ಈ ಎಲ್ಲಾ ಹಿನ್ನೆಲೆಯು ಎನ್. ಈಶ್ವರ್‌ರಲ್ಲಿ ಅಹಂಕಾರಕ್ಕೆ ಬದಲಾಗಿ ಶೋಷಣೆಗಳ ವಿರುದ್ಧ ಪ್ರತಿಭಟಿಸುವ ವ್ಯಕ್ತಿತ್ವ ರೂಪಿಸಿತ್ತು. ಜಾತಿಯೊಳಗಿದ್ದೂ ಜಾತ್ಯತೀತವಾಗಿದ್ದರು. ನಾಯಕನಾಗುವ ಅವಕಾಶಗಳಿದ್ದರೂ ಅವರಲ್ಲಿನ ಹಿಂಜರಿಕೆಯ ಗುಣ ಅವರನ್ನು ಕಾರ್ಯಕರ್ತನನ್ನಾಗಿ ಬಾಳಿಸಿತು. ಅವರು ಸಮೂಹದಲ್ಲಿ ಒಬ್ಬರಾಗಿದ್ದುದೇ ಹೆಚ್ಚು.

ಓದು ಈಶ್ವರ್‌ಗೆ ಒಂದು ಸಹಜ ಗುಣವಾಗಿತ್ತು. ಅವರು ಜನಸಮೂಹಕ್ಕೆ ಅನುಕೂಲವಾಗುವಂತಹ ಕಡಿಮೆ ವೆಚ್ಚದ ತಾಂತ್ರಿಕತೆಗಳ ಬಗೆಗೆ ಯೋಚಿಸುತ್ತಿದ್ದರು. ೧೯೬೫ರಲ್ಲೇ ಇಂಗ್ಲೆಂಡಿಗೆ ಹೋಗಿ ಜವಳಿ ಉದ್ಯಮದ ಉತ್ಪಾದನೆ, ಯಾಂತ್ರಿಕತೆ ಮಾರುಕಟ್ಟೆಗಳ ಬಗೆಗೆ ತಿಳಿದುಬಂದಿದ್ದರು. ಕುಟುಂಬದೊಳಗಿನ ಬದಲಾವಣೆಗಳು ಅವರನ್ನು ಜವಳಿ ಉದ್ಯಮದಲ್ಲಿ ಮುಂದುವರಿಯಲು ಬಿಡಲಿಲ್ಲ. ಈ ಹಂತದಲ್ಲಿ ಸಹಜವಾಗಿಯೇ ಸರ್ವೋದಯ ಮತ್ತು ಸಮಾಜವಾದಿ ಚಳುವಳಿಗಳು ಅವರನ್ನು ಸೆಳೆದವು. ಲೋಹಿಯಾರ ಒಡನಾಡಿಯಾಗಿದ್ದ ಈಶ್ವರ್‌ಗೆ ಗೋಪಾಲಗೌಡರ ಬಗೆಗೆ ತುಂಬು ಅಭಿಮಾನ. ೧೯೬೫ರ ನಂತರ ಮೈಸೂರು ಕೇಂದ್ರವಾಗಿ ಇದೇ ಕರ್ನಾಟಕಕ್ಕೆ ದಿಕ್ಸೂಚಿಯಾದ ಎಲ್ಲ ಚಳವಳಿ, ಹೋರಾಟಗಳಲ್ಲಿ ಎನ್. ಈಶ್ವರ್ ಭಾಗವಹಿಸಿದ್ದರು. ಅವರು ಈ ಎಲ್ಲ ಚಳವಳಿಗಳು ರೈತರ, ಜನಸಾಮಾನ್ಯರ ಬದುಕಿಗೆ ನೆಮ್ಮದಿಯ ನಾಳೆಗಳನ್ನು ತರಬಹುದೆಂಬ ನಂಬಿಕೆಯಲ್ಲಿದ್ದರು. ಆಳುವ ಸರ್ಕಾರದ ನೀತಿಯಿಂದ ಬೆಲೆ ಏರಿಕೆ, ರೈತರ ಬದುಕಿನ ಬದಲಾಗದ ಕಷ್ಟನಷ್ಟ, ಇವುಗಳ ನಡುವೆ ಶೋಷಣೆಯೇ ಮೂಲವಾದ ವ್ಯಾಪಾರಿಗಳು, ಇವರ ಬಗೆಗೆ ಆಕ್ರೋಶದಿಂದ ಮಾತಾಡುತ್ತಿದ್ದರು. ಈ ಅನ್ಯಾಯಗಳ ವಿರುದ್ಧ ಯುವ ಸಮೂಹವನ್ನು ನಿರಂತರವಾಗಿ ಎಚ್ಚರಿಸುವ, ಅರಿವು ಕೊಡುವ ಕಾರ್ಯಕ್ರಮಗಳು ಆಗುವ ಕಡೆ ಸದಾ ಹಾಜರಿರುತ್ತಿದ್ದಅವರು ತಾವು ಬದುಕಿರುವವರೆಗೂ ಮೈಸೂರಿನ ಸಾಮಾಜಿಕ ಪ್ರಜ್ಞೆಯ ಕ್ರಿಯಾಶೀಲ ಚೇತನವಾಗಿದ್ದರು.

ಈಶ್ವರ್ ತುರ್ತುಪರಿಸ್ಥಿತಿ ಮತ್ತು ಅಖಿಲ ಭಾರತ ರೈಲ್ವೆ ಮುಷ್ಕರದ ಸಂದರ್ಭಗಳಲ್ಲಿ ಸೆರೆಮನೆವಾಸ ಅನುಭವಿಸಿದ್ದರು. ಸರ್ವೋದಯ ಚಳುವಳಿಯ ಭಾಗವಾಗಿ ಗುಜರಾತ್ ರಾಜ್ಯದಲ್ಲಿ ನಡೆದ ಪಾದಯಾತ್ರೆಯಲ್ಲಿ ಭಾಗವಹಿಸಿ, ಮಹಾರಾಷ್ಟ್ರದ ವಾರ್ಧಾ ಸೇವಾಗ್ರಾಮಕ್ಕೂ ಹೋಗಿ ಕೆಲವು ದಿನವಿದ್ದರು.

ಸಮಾಜವಾದಿ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಈಶ್ವರ್, ಕೆಲಕಾಲ ಪಕ್ಷದ ಮೈಸೂರು ನಗರ ಘಟಕದ ಅಧ್ಯಕ್ಷರಾಗಿಯೂ ಇದ್ದರು. ೧೯೭೭ರಲ್ಲಿ ಜೆ.ಪಿ. ಚಳವಳಿಯ ಕಾಲದಲ್ಲಿ 'ಜನತಾ' ಪಕ್ಷದ ಮೈಸೂರು ನಗರದ ಉಪಾಧ್ಯಕ್ಷರಾಗಿದ್ದರು. ಆನಂತರ ಮೈಸೂರಿನ ಗೆಳಯರೊಂದಿಗೆ, 'ಪಕ್ಷಾಂತರ ವಿರೋಧಿ ಸಂಘ'ವನ್ನು ಕಟ್ಟಿದರು. ದಿವಂಗತ ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪರ 'ಕ್ರಾಂತಿರಂಗ ಪಕ್ಷ'ವನ್ನು ಸಂಘಟಿಸಿಲು ಮೈಸೂರಿನ ಟೌನ್‌ಹಾಲ್‌ನಲ್ಲಿ ಸಭೆ ಕರೆದಾಗ ಅದರ ಅಧ್ಯಕ್ಷತೆ ವಹಿಸಿದ್ದರು. ಅದು ಮುಂದೆ ತಳೆದ ರೂಪಗಳಿಂದ ವೇಸತ್ತು ಅದರಿಂದ ದೂರ ಸರಿದರು. ೧೯೮೩ರಲ್ಲಿ ಮೈಸೂರಿನ ಚಾಮರಾಜ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು. ಸಂಬಳ ಹೆಚ್ಚು ಮಾಡಬೇಕೆಂದು ಮುಷ್ಕರ ಹೂಡುವ ಸರ್ಕಾರಿ ನೌಕರರ ಧೋರಣೆಯನ್ನು ಸಕಾರಣವಾಗಿ ಜನಸಾಮಾನ್ಯರ ಬದುಕಿನೊಡನೆ ಹೋಲಿಸಿ ಉಗ್ರವಾಗಿ ಖಂಡಿಸುತ್ತಿದ್ದರು. ಸಾರ್ವಜನಿಕ ರಂಗದ ಸಾರಿಗೆ, ಉದ್ಯಮಗಳು ಭ್ರಷ್ಟತೆಯ ಕಾರಣದಿಂದ ಯಶಸ್ವಿಯಾಗದಿರುವುದು ಈಶ್ವರ್‌ರಲ್ಲಿ ಅಸಹನೆ, ಕ್ರೋಧಗಳನ್ನೆ ಹುಟ್ಟಿಸುತ್ತಿತ್ತು.

ಆಯಾ ಪ್ರಾದೇಶಿಕ ಬದುಕಿನ ವಿವರಗಳ ಅರಿವಿಲ್ಲದ ಸರ್ಕಾರದ ಅಧಿಕಾರಿಗಳ, ಅದರಲ್ಲೂ ಐ.ಎ.ಎಸ್. ಅಧಿಕಾರಿಗಳ ದರ್ಪವನ್ನು ಮತ್ತು ಅಂತಹ ಅಧಿಕಾರಿಗಳ ಕೈಗೊಂಬೆಗಳಾಗಿರುವ ನಮ್ಮ ಮಂತ್ರಿಗಳ ತಿಳುವಳಿಕೆ, ಸೋಮಾರಿತನಗಳನ್ನು ಈಶ್ವರ್ ಖಂಡಿಸುತ್ತಿದ್ದರು. ಬಜೆಟ್ ಮಂಡನೆ ಸಂದರ್ಭಗಳಲ್ಲಿ ರೂಪಾಯಿ ಬೊಕ್ಕಸಕ್ಕೆ ಬರುವುದನ್ನು, ಖರ್ಚಾಗುವ ರೀತಿಯನ್ನು ಕೂಲಂಕುಶವಾಗಿ ಗಮನಿಸಿ ಸಮಾಜವಾದಿ ಗೆಳೆಯರೊಂದಿಗೆ ಚರ್ಚಿಸುತ್ತಿದ್ದರು. ಈಶ್ವರ್ ಯಾವುದೇ ವಸ್ತು, ಉತ್ಪನ್ನಗಳ ಬೆಲೆಗಳನ್ನು, ಉತ್ಪಾದನಾ ವೆಚ್ಚ, ರೂಪಾಂತರ, ಮೌಲ್ಯವರ್ಧನೆ ಇವುಗಳನ್ನು ಲೆಕ್ಕ ಹಾಕಿ ಬೆಲೆ ಹೆಚ್ಚಾಗಲು ವ್ಯಾಪಾರಿಗಳು-ರಾಜಕಾರಣಿಗಳ ಅನೈತಿಕ ಸಂಬಂಧ ಹೇಗೆ ಕಾರಣವೆಂದು ವಿವರಿಸುತ್ತಿದ್ದರು. ರಾಜಕೀಯ ಇಂಗ್ಲೆಂಡಿನಲ್ಲಿ ಸೋಲು-ಗೆಲುವಿನ ಆಟದಂತಿದ್ದರೆ, ನಮ್ಮಲ್ಲಿ ಅಳಿವು-ಉಳಿವಿನ ಪ್ರಶ್ನೆಯಂತೆ ಆಗಿರುವುದನ್ನು ಬಹಳ ವಿಷಾದದಿಂದ ಹೇಳುತ್ತಿದ್ದರು ಈಶ್ವರ್.

ಬದುಕಿನಲ್ಲಿ ಲೆಕ್ಕಾಚಾರಕ್ಕೆ ಈಶ್ವರ್ ಮಹತ್ವ ಕೊಡುತ್ತಿದ್ದರು. ಆದರೆ ಜಿಪುಣತನವನ್ನು ಅಮಾನವೀಯ ನಡತೆಯೆಂದು ಖಂಡಿಸುತ್ತಿದ್ದರು. ಬ್ಲೀಚ್ ಮಾಡದ ಬಟ್ಟೆಯಲ್ಲಿ ಹೊಲಿಸಿದ, ನೀಲಿ ಹಾಕಿದ ಜುಬ್ಬಾ ಮತ್ತು ಅಂತಹುದೇ ಬಟ್ಟೆಯ ಪಂಚೆ ಇವು ಈಶ್ವರ್‌ರ ಉಡುಪು. ಮಸಕಾಯಿ ಸಾರು, ಗಸಗಸೆ ಪಾಯಸ, ಮನೆಯಲ್ಲಿ ಮಾತ್ರ ಮಾಡಿದ ಕಾಫಿ ಇವು ಈಶ್ವರ್‌ಗೆ ಇಷ್ಟದ ಊಟ-ತಿಂಡಿ-ಪಾನೀಯಗಳು. ಪಾಲಿಶ್ ಮಾಡದಿರುವ ಅಕ್ಕಿಯನ್ನು ಬಳಸುವಂತೆ ಹೇಳುತ್ತಿದ್ದ ಈಶ್ವರ್ ಸ್ವಮೂತ್ರ ಪಾನ ಚಿಕಿತ್ಸೆಯನ್ನು ಆರೋಗ್ಯದ ದೃಷ್ಟಿಯಿಂದ ಆಗಾಗ ಆಚರಿಸುತ್ತಿದ್ದರು. ಈಶ್ವರ್‌ಗೆ ಬಹುದೊಡ್ಡ ಕನಸಿದ್ದುದು 'ಹಣರಹಿತ ಅರ್ಥ ವ್ಯವಸ್ಥೆ'ಯನ್ನು, ಅಂದರೆ ವಸ್ತು-ವಿನಿಮಯ ಪದ್ಧತಿಯನ್ನು-ನನಸು ಮಾಡುದ ಬಗೆಗೆ.

ಮೈಸೂರು ನಗರದ ಮಾಲಿನ್ಯಕ್ಕೆ ಬೆದರಿ, ಬೇಸರಪಟ್ಟುಕೊಂಡು ಶ್ರೀರಂಗಪಟ್ಟಣದ ಮಹದೇವಪುರದಲ್ಲಿ ಅವರು ಸಾಯುವ ಮುನ್ನ ಮೂರು ವರ್ಷ ವಾಸವಾಗಿದ್ದರು. ಕೆ.ಎಸ್. ನರಸಿಂಹಸ್ವಾಮಿ ಅವರ ಮೈಸೂರು ಮಲ್ಲಿಗೆಯ ಕವನಗಳನ್ನು ಹೋಲುವ ಕೆಲವು ರಚನೆಗಳನ್ನು ಈಶ್ವರ್ ಬರೆಯುತ್ತಿದ್ದರು. ೧೯೯೯ರಲ್ಲಿ ಅವರು ಕೊನೆಯುಸಿರೆಳೆದರು. ಸದಾ ನಡೆದುಕೊಂಡೇ ಸಂಚರಿಸುತ್ತಿದ್ದ ಈಶ್ವರ್ ಕೊಂಚ ಆರೋಗ್ಯದ ಬಗೆಗೆ ಕಾಳಜಿವಹಿಸಿದ್ದರೆ ಕನಿಷ್ಟ ಇನ್ನೂ ಹತ್ತುವರ್ಷ ಬದುಕುತ್ತಿದ್ದರು.

**-ಉಗ್ರನರಸಿಂಹೇಗೌಡ**

# ಗಾಂಧಿವಾದಿಯೊಬ್ಬರ ಕಳವಳಗಳು ಮತ್ತು ಇಕ್ಕಟ್ಟುಗಳು...

**ಇವು ಹಿರಿಯ ಗಾಂಧಿವಾದಿ ಮತ್ತು ಸರ್ವೋದಯ ಚಳುವಳಿಯ ಹಿರಿಯ ನಾಯಕರಲ್ಲೊಬ್ಬರಾದ ಸುರೇಂದ್ರ ಕೌಲಗಿಯವರು ಪ್ರಚಲಿತ ಸಂಗತಿಗಳ ಬಗ್ಗೆ ಬರೆದಿರುವ 'ಸಮಕಾಲೀನ ವಿಷಯ–ವಿಚಾರ' ಎಂಬ ಲೇಖನಗಳ ಸಂಗ್ರಹಕ್ಕೆ ನಾನು ಬರೆದ ಮುನ್ನುಡಿಯ ಮಾತುಗಳು. ಇವು ಪತ್ರಿಕೆ ಚರ್ಚಿಸುತ್ತಿರುವ ಮುಖ್ಯ ಸಂಗತಿಗಳಿಗೆ ಪೂರಕವಾಗಿ ಕಂಡ ಕಾರಣ ಇಲ್ಲಿ ಪ್ರಕಟಿಸಲಾಗುತ್ತಿದೆ. ಪ್ರತಿಕ್ರಿಯೆಗಳಿಗೆ ಸ್ವಾಗತ–ಸಂಪಾದಕ**



**ಸು**ರೇಂದ್ರ ಕೌಲಗಿಯವರು ನಮ್ಮ ನಡುವಿನ ಅತ್ಯಂತ ಹಿರಿಯ ಗಾಂಧೀವಾದಿಗಳಲ್ಲಿ ಒಬ್ಬರು. ಸರ್ವೋದಯ ಆಂದೋಲನವನ್ನು ಇನ್ನೂ ಉಳಿಸಿ ಬೆಳೆಸುವ ಪ್ರಯತ್ನದಲ್ಲಿರುವ ಆ ಆಂದೋಲನದ ಮುಖ್ಯ ಧುರೀಣರಲ್ಲೊಬ್ಬರು. ರಾಷ್ಟ್ರದ ಸ್ವಾತಂತ್ರ್ಯ ಹೋರಾಟದ ಮತ್ತು ಸಮಾಜವಾದಿ ಆಂದೋಲನದ ನಾಯಕರಲ್ಲೊಬ್ಬರಾದ; ಜೆಪಿಯೆಂದೇ ಜನಪ್ರಿಯರಾದ ಜಯಪ್ರಕಾಶ ನಾರಾಯಣರು ಐವತ್ತರ ದಶಕದಲ್ಲಿ ಪಕ್ಷ ರಾಜಕಾರಣ ತೊರೆದು ವಿನೋಬಾ ಭಾವೆಯವರ ಸರ್ವೋದಯ ಆಂದೋಲನವನ್ನು ಸೇರುವ ಮುನ್ನ ತಮ್ಮೆಲ್ಲ ತಾತ್ವಿಕ ಸಂದಿಗ್ಧತೆಗಳನ್ನು ಆತ್ಮ ನಿರೀಕ್ಷಣೆಯ ಮೂಲಕ ಪರಿಹರಿಸಿಕೊಳ್ಳಲು ಮುಂಬೈನಲ್ಲಿ ಏಳು ವಾರಗಳ ಉಪವಾಸ ಕೈಗೊಂಡಿದ್ದರು. ಆ ಸಂದರ್ಭದಲ್ಲಿ ಜೆಪಿಯವರ ವ್ಯಕ್ತಿತ್ವದಿಂದ ಆಕರ್ಷಿಸಲ್ಪಟ್ಟ ತರುಣ ಸುರೇಂದ್ರ ಕೌಲಗಿಯವರು, ನಂತರ ಅವರ ಜೊತೆಯಲ್ಲೇ ಬಹಳ ವರ್ಷಗಳ ಕಾಲ ಸರ್ವೋದಯ ಆಂದೋಲನದಲ್ಲಿ ತೊಡಗಿಕೊಂಡವರು. ಭೂದಾನ, ಜೀವನ ದಾನ, ಸಖೋದೇವ್ರಾ ಆಶ್ರಮದ ಮೂಲಕ ನಡೆದ ಗ್ರಾಮ ಪುನರುಜ್ಜೀವನ, ಶಾಂತಿಸೇನೆ ಇತ್ಯಾದಿ ಕಾರ್ಯಕ್ರಮಗಳಲ್ಲಿ ಜೆಪಿ ಮತ್ತು ಅವರ ಅನುಯಾಯಿಗಳೊಂದಿಗೆ ಹಗಲಿಗೆ ಹಗಲು ಕೊಟ್ಟು ದುಡಿದವರು. ಸ್ವಲ್ಪ ಕಾಲ ಜೆಪಿಯವರ ಆಪ್ತ ಕಾರ್ಯದರ್ಶಿಯೂ ಆಗಿದ್ದವರು. ನಂತರ ಎಪ್ಪತ್ತರ ದಶಕದಲ್ಲಿ ರಾಷ್ಟ್ರದಲ್ಲಿ ಒಡಮೂಡುತ್ತಿದ್ದ ಸರ್ವಾಧಿಕಾರ ಆಳ್ವಿಕೆಯ ವಿರುದ್ಧ ಜೆಪಿಯವರು ಸಂಘಟಿಸಿದ 'ಸಂಪೂರ್ಣ ಕ್ರಾಂತಿ' ಆಂದೋಲನದೊಂದಿಗೂ ಗುರುತಿಸಿಕೊಂಡವರು. ನಂತರ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ 'ಜನಪದ ಟ್ರಸ್ಟ್' ಸ್ಥಾಪಿಸಿ ಅದರ ಮೂಲಕ ಅನೇಕ ರೀತಿಯ ಗ್ರಾಮ ಕೇಂದ್ರಿತ ವಿಧಾಯಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಾ, ಅದರಲ್ಲಿ ಸೋಲು–ಗೆಲುವುಗಳೆರಡನ್ನೂ ಕಾಣುತ್ತಾ ಧೃತಿಗೆಡದೆ ಮುನ್ನಡೆದಿರುವ ಧೀಮಂತರು.

ಈ ಟ್ರಸ್ಟ್‌ನ ಮುಖವಾಣಿಯಂತಿರುವ 'ಜನಪದ ವಿಚಾರ' ಎಂಬ ಮಾಸಿಕಕ್ಕೆ ಕೌಲಗಿಯವರು ಸಂಪಾದಕೀಯ ರೂಪದಲ್ಲಿ ಬರೆದಿರುವ ಲೇಖನಗಳ ಆಯ್ದ ಸಂಗ್ರಹವಿದು. ಇಂತಹ ಹಿರಿಯರ ಇಂತಹ ಲೇಖನಗಳ ಸಂಗ್ರಹಕ್ಕೆ, ಇವರ ಮುಂದೆ ಯಾವ ನೆಲೆಯಿಂದ ಹೇಗೇ ನೋಡಿದರೂ ಅಬ್ಬೇಪಾರಿಯಂತೆ ಕಾಣುವ ನಾನು ಮುನ್ನುಡಿಯ ಮಾತುಗಳನ್ನು ಬರೆಯುವುದೆಂದರೆ ಅದು ಬಹು ಮುಜುಗರದ ವಿಷಯವೇ ಆಗಿದೆ. ಬೇಡ ಬೇಡ, ಆಗದು ಆಗದು ಎಂದರೂ ಕೌಲಗಿಯವರು ತಮ್ಮ ಪ್ರೀತಿಯ ಒತ್ತಾಯಕ್ಕೆ ಸಿಕ್ಕಿಸಿ ನನ್ನಿಂದ ಈ ಕೆಲವು ಮಾತುಗಳನ್ನು ಬರೆಸುತ್ತಿದ್ದಾರೆ. ಅದರ ಎಲ್ಲ ಸುಖ–ದುಃಖಗಳಿಗೆ ಅವರೇ ಹೊಣೆಗಾರರೆಂದು ಹೇಳಿ ಈ ಕೆಲವು ಮಾತುಗಳನ್ನು ಬರೆಯುವ ಸಾಹಸ ಮಾಡಿರುವೆ.

ಸುರೇಂದ್ರ ಕೌಲಗಿಯವರು ಈಗ ಎಂಭತ್ತರ ಆಜುಬಾಜಿನಲ್ಲಿರುವವರು. ಸುಮಾರು ಅರವತ್ತು ವರ್ಷಗಳ ಸಾರ್ವಜನಿಕ ಜೀವನದ ಅನುಭವ ಅವರ ಬರಹಗಳ ಹಿಂದಿದೆ. ಅವರು ಗಾಂಧಿ–ವಿನೋಬಾ–ಜೆಪಿಯವರ ವಿಚಾರಗಳಿಂದ ಪ್ರಭಾವಿತರಾದವರು. ಹಾಗಾಗಿ ಇವರ ಬರಹಗಳು ಈ ವಿಚಾರಗಳಿಂದ ಸ್ಫೂರ್ತಿ ಪಡೆದು ರಾಷ್ಟ್ರ ಕಳೆದ ಇಪ್ಪತ್ತು–ಇಪ್ಪತ್ತೈದು ವರ್ಷಗಳಿಂದ 'ಜಾಗತೀಕರಣ'ದ ಹೆಸರಿನಲ್ಲಿ ಹಾದು ಹೋಗುತ್ತಿರುವ ಮಾರ್ಗದ ಬಗ್ಗೆ ಆತಂಕ, ಕಳವಳ, ಒಮ್ಮೊಮ್ಮೆ ಆಕ್ರೋಶವನ್ನೂ ವ್ಯಕ್ತಪಡಿಸುತ್ತವೆ. ರಾಷ್ಟ್ರ ತನ್ನ ಹಾದಿಯನ್ನು ಕೂಡಲೇ ಬದಲಿಸಿಕೊಳ್ಳಬೇಕಾದ ತುರ್ತು ಅಗತ್ಯವನ್ನೂ ಆಧಾರ ಸಮೇತವಾಗಿ ಮನಗಾಣಿಸುತ್ತವೆ. ಹಾಗೇ ಅವು ಹಿಡಿಯಬೇಕಾದ ಪರ್ಯಾಯ ಹಾದಿಯನ್ನೂ ಸೂಚಿಸುತ್ತವೆ– ಒಮ್ಮೊಮ್ಮೆ, ನಾವು ಈವರೆಗೆ ಕಾಣದೇ ಹೋಗಿದ್ದ ಗಾಂಧಿ–ವಿನೋಬಾ ವಿಚಾರಗಳಲ್ಲಿನ ಅನೇಕ ಒಳನೋಟಗಳನ್ನೂ ತೆರೆದಿಡುತ್ತಾ.

ಇದು ಕೌಲಗಿಯವರಿಗೆ ಸಾಧ್ಯವಾಗಿರುವುದು ಅವರು ಈ ರಾಷ್ಟ್ರದ, ಸಮಾಜದ ಭವಿಷ್ಯದ ಬಗ್ಗೆ ಈ ಇಳಿವಯಸ್ಸಿನಲ್ಲೂ ಉಳಿಸಿಕೊಂಡು ಬಂದಿರುವ ಕಳಕಳಿ ಮತ್ತು ಬದ್ಧತೆಗಳ ಪ್ರಾಮಾಣಿಕತೆ ಮತ್ತು ತೀವ್ರತೆಗಳಿಂದಾಗಿ; ಹಾಗೇ, ತಾವು ನಂಬಿದ ಗಾಂಧಿ–ವಿನೋಬಾರ ವಿಚಾರಗಳನ್ನು ಕುರಿತ ನಿರಂತರ ಮತ್ತು ನಿತಾಂತ ಅಧ್ಯಯನದಿಂದಾಗಿ. ಇವರ ಕೆಲವು ಬರಹಗಳ ಶೀರ್ಷಿಕೆಗಳನ್ನೇ ನೋಡಿ: 'ರಾಜಕಾರಣದ ಅಧೋಗತಿ: ಅಗತ್ಯವಾಗಿದೆ ಕ್ಷಿಪ್ರ ಸಂಪೂರ್ಣ ಕ್ರಾಂತಿ', 'ಶಾಂತಿಯಾ ಸಿಪಾಯಿ ನಡೆ! ಕ್ರಾಂತಿಯಾ ಸಿಪಾಯಿ ನಡೆ!' 'ಉಪ್ಪಿಗಿಂತ ರುಚಿಯಿಲ್ಲ! ಸರ್ಕಾರದ ನೀತಿ ಸರಿಯಿಲ್ಲ! ಪೊಳ್ಳು ಪ್ರಜಾತಂತ್ರದ ವಿರುದ್ಧ ಕ್ರಾಂತಿ ನಡೆಸದೆ ವಿಧಿಯಿಲ್ಲ!', 'ಮೆಕಾಲೆಯ ಪುನರ್‌ಜನ್ಮವಾಗುತ್ತಿದೆ ಜೋಕೆ!' 'ಅಣ್ಣಾ ಹಜಾರೆ ಪಾಂಚಜನ್ಯ ಊದಿದ್ದಾರೆ!' ಇತ್ಯಾದಿ. ಇದು ಎಂಭತ್ತರ ಹರೆಯದವರು ಬಳಸಬಲ್ಲ ಭಾಷೆಯೇ? ಅವರ ಈ ಉತ್ಸಾಹ, ಆವೇಶ ಸಾಂಕ್ರಾಮಿಕವಾಗಲಿ!

ಆದರೆ ಇಂದಿನ ಸನ್ನಿವೇಶದಲ್ಲಿ ಹೊರಕ್ಕೆ ಸ್ವಲ್ಪ ಅಸ್ವಾಭಾವಿಕವಾಗಿ ಕಾಣುವ ಈ ಉತ್ಸಾಹ, ಆವೇಶಗಳ ಹಿಂದೆ ತಣ್ಣನೆಯ, ನಿರುದ್ವೇಗದ ಚಿಂತನೆಯೂ ಇದೆ ಎಂಬುದು ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಸಂಗತಿ. ಕೌಲಗಿಯವರು ಇಂದಿನ ಎಲ್ಲ ರಾಷ್ಟ್ರೀಯ ಸಮಸ್ಯೆಗಳ ಮೂಲವನ್ನು ಇಂದಿನ ಜಾಗತಿಕ ನೆಲೆಯ ರಾಜಕಾರಣದಲ್ಲಿ; ಅದಕ್ಕೂ ಮುಖ್ಯವಾಗಿ ಅದು ಸೃಷ್ಟಿಸಿರುವ ನೀತಿ–ಅನೀತಿಗಳ ನಡುವಣ ಗೊಂದಲದಲ್ಲಿ ಗುರುತಿಸುತ್ತಾರೆ: 'ಒಂದರ್ಥದಲ್ಲಿ ನೀತಿ–ಅನೀತಿಯ ವಿಷಯದಲ್ಲಿ ಜಾಗತಿಕ ಮಟ್ಟದಲ್ಲೇ ಅರಾಜಕತೆ ಉಂಟಾಗಿದೆ... ಉಪ್ಪೇ ರುಚಿ ಕಳೆದುಕೊಂಡಾಗ ಉಪ್ಪಿಗೆ ರುಚಿ ತಂದುಕೊಡುವವರಾರು ಎಂಬಂತಾಗಿದೆ ನಮ್ಮ ಪ್ರಜಾತಂತ್ರದ ಸ್ಥಿತಿ'. ಈ ಮಾತಿನ ಮೂಲಕ ಅವರು ಎಲ್ಲ ಲೌಕಿಕ (ವೈಯುಕ್ತಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಇತ್ಯಾದಿ) ಮತ್ತು ಪರಮಾರ್ಥಿಕ (ಹಿಂದೂ, ಕ್ರೈಸ್ತ, ಮುಸಲ್ಮಾನ, ಬೌದ್ಧ, ಜೈನ ಇತ್ಯಾದಿ) ಧರ್ಮಗಳಿಗೂ ಅನ್ವಯಿಸಬಹುದಾದ ಗಾಂಧಿಯವರ 'ಧರ್ಮ ಮತ್ತು ನೀತಿಗಳ ನಡುವೆ ಆಯ್ಕೆ ಮಾಡಿಕೊಳ್ಳಲೇಬೇಕಾದ ಸಂದರ್ಭ ಬಂದರೆ ನಾನು ನೀತಿಯನ್ನೇ ಆಯ್ದುಕೊಂಡೇನು' ಎಂಬ ಮಾತು ಇಡೀ ಗಾಂಧಿವಾದದ ಮೂಲ ಅಡಿಪಾಯವಾಗಿದೆ ಎಂಬುದನ್ನು ಗುರುತಿಸುತ್ತಾರೆ. ಇದು ಗಾಂಧಿವಾದದ ನಿಜ ನಾಡಿ ಮಿಡಿತವನ್ನು ಹಿಡಿದ ಪ್ರಾಮಾಣಿಕ ಅಭ್ಯಾಸಿಯೊಬ್ಬನ ಮೊದಲ ಲಕ್ಷಣ ಮತ್ತು ಶಕ್ತಿ ಎಂದು ನಾನು ಭಾವಿಸುವೆ. ಹಾಗಾಗಿಯೇ, ಕೌಲಗಿಯವರು ಈ ನೀತಿ–ಅನೀತಿಗಳ ಗೊಂದಲಕ್ಕೆ ಕಾರಣವನ್ನೂ ಅವರು ಗಾಂಧಿ ವಿಚಾರಧಾರೆಯ ಹಿನ್ನೆಲೆಯಲ್ಲೇ ಸರಿಯಾಗಿ ಗುರುತಿಸಬಲ್ಲವರಾಗಿದ್ದಾರೆ : (ಮೂಲಭೂತ ಕರ್ತವ್ಯಗಳನ್ನು ಮರೆತು)



'ಮೂಲಭೂತ ಹಕ್ಕುಗಳ ಪ್ರತಿಪಾದನೆಯ ಮೂಲಕ ದೇಶ ಅನೀತಿಯತ್ತ ಹೋಗುತ್ತಿರುವಾಗ ಅದನ್ನು ತಡೆಯುವ ಶಕ್ತಿ ಯಾರಿಗಿದೆ?' ಇದರ ಪರಿಣಾಮಗಳನ್ನು ಕೌಲಗಿಯವರು ನಿಜ ಗಾಂಧಿವಾದಿಗೆ ಮಾತ್ರ ಸಾಧ್ಯವಿರುವ ನಿರ್ಭಿಡೆಯಿಂದ ಹೇಳುವುದು ಹೀಗೆ: 'ಭ್ರಷ್ಟತೆಯೆಂಬುದು ಯಾರಿಗೂ ಅನೀತಿಯೆನಿಸುವುದೇ ಇಲ್ಲ. ಪ್ರತ್ಯಕ್ಷವಾಗಿ–ಪರೋಕ್ಷವಾಗಿ ನ್ಯಾಯಾಂಗವೂ ಭ್ರಷ್ಟಾಚಾರವನ್ನು ಬೆಳೆಸಿದೆ. ಭ್ರಷ್ಟರ ವಿರುದ್ಧ ಯಾವುದೇ ಕಠಿಣ ಕ್ರಮ ಕೈಗೊಳ್ಳಲು ನ್ಯಾಯಾಂಗ ಮತ್ತು ಕಾರ್ಯಾಂಗ ವಿಫಲವಾಗಿವೆ.' ಹೀಗೆ ಇಡೀ ವ್ಯವಸ್ಥೆಯೇ ಅನೀತಿಯುತವೂ, ಆ ಮೂಲಕ ಭ್ರಷ್ಟವೂ ಆಗಲು ಕಾರಣವೇನು? ಮತ್ತೆ ಗಾಂಧಿಯಿಂದ ಸ್ಫೂರ್ತಿ ಪಡೆದು ಕೌಲಗಿಯವರು ಇದಕ್ಕೆ ಕೊಡುವ ಉತ್ತರ: 'ಗ್ರಾಮಗಳ ನಾಶದೊಂದಿಗೆ ಸಮಾಜ ಜೀವನ ನಾಶಗೊಂಡಿತು. ಸಮಾಜ ಜೀವನದ ನಾಶದೊಂದಿಗೆ ರಾಜಕೀಯ ಪಕ್ಷಗಳ ವಿಚಾರಶೀಲತೆಯೂ ನಾಶಗೊಂಡಿತು. ವಿಚಾರಶೀಲತೆಯ ನಾಶದಿಂದ ತಪ್ಪು ಅಭಿವೃದ್ಧಿ ನೀತಿ ಜಾರಿಗೆ ಬಂತು. ಪಾಶ್ಚಿಮಾತ್ಯ ಸಂಸ್ಕೃತಿ, ಅರ್ಥಶಾಸ್ತ್ರ, ಅಭಿವೃದ್ಧಿ ಇವೇ ಭಾರತದ ಉಸಿರಾದವು. ಇದರ ಪರಿಣಾಮವೇ ದೇಶದ ತುಂಬ ತಾಂಡವವಾಡುತ್ತಿರುವ ಅನೀತಿ'.

ಈ ಸಂಗ್ರಹದ 'ಅನೀತಿಯತ್ತ ಸಮಾಜ; ತೀರ್ಪು ಯಾರಿಂದ?' ಎಂಬ ಶೀರ್ಷಿಕೆಯ ಮೊದಲ ಬರಹದಿಂದ ಉಲ್ಲೇಖಿತವಾಗಿರುವ ಈ ಮೇಲಿನ ಮಾತುಗಳ ವಿಸ್ತರಣೆ, ವಿವರಣೆ, ಸಮರ್ಥನೆಯ ಪ್ರಯತ್ನಗಳೇ ಆಗಿವೆ, ಮುಂದಿನ ಎಲ್ಲ ಲೇಖನಗಳು. ದೇಶ ಕಂಡ ಇತ್ತೀಚಿನ ಕ್ಷಾಮ ಅಥವಾ ಅನಾವೃಷ್ಟಿಗೆ ಕಾರಣವನ್ನು ಹುಡುಕುತ್ತಾ ಅವರು ಆಧುನೀಕರಣದ ಹೆಸರಿನಲ್ಲಿ ಜಾಗತೀಕರಣ ನಡೆದು ಬಂದ ಹಾದಿಯನ್ನು ಗುರುತಿಸುವುದು ಹೀಗೆ: 'ಇಂದು ದೇಶದಲ್ಲಿ ಕ್ಷಾಮ ಬಿದ್ದಿರುವುದಕ್ಕೆ ಪ್ರಕೃತಿ ವಿಕೋಪ ಒಂದು ಕಾರಣ. ಸರ್ಕಾರದ ಸಮಗ್ರ ನೀತಿಯ ತಿರುಗು ಮುರುಗಾಟ ಇನ್ನೊಂದು ಕಾರಣ. ಸ್ವಾತಂತ್ರ್ಯ ಬಂದ ತರುಣದಲ್ಲಿ ಪಂಚಾಯತ್ ರಾಜ್ಯ, ವಿಕೇಂದ್ರೀಕರಣ, ಸಣ್ಣ ಕೈಗಾರಿಕೆಗಳು, ಕೃಷಿ ಅಭಿವೃದ್ಧಿ. ನೀರಾವರಿ ಅಭಿವೃದ್ಧಿ, ಅರಣ್ಯ ಅಭಿವೃದ್ಧಿ, ಪ್ರಾದೇಶಿಕ ಭಾಷಾಭಿವೃದ್ಧಿ ಮುಂತಾದವುಗಳಿಗೆ ಪ್ರಾಶಸ್ತ್ಯವಿತ್ತು. ಕ್ರಮೇಣ ಈ ನೀತಿ ನೇಪಥ್ಯಕ್ಕೆ ಸರಿಯಿತು. ಈಗ ಬೃಹತ್ ನಗರಗಳ ಸ್ಥಾಪನೆ, ಆಡಳಿತ ಕೇಂದ್ರೀಕರಣ, ಬೃಹತ್ ಕೈಗಾರಿಕೆಗಳ ಸ್ಥಾಪನೆ, ಕೃಷಿಯ ತಾತ್ಸಾರ, ಅರಣ್ಯ ನಾಶ, ಇಂಗ್ಲಿಷ್ ಭಾಷಾ ಸಾಮ್ರಾಜ್ಯದ ವಿಸ್ತರಣೆ ಈ ನೀತಿ ಪ್ರಧಾನವಾಯಿತು.' ('ಕ್ಷಾಮ ಮತ್ತು ಗ್ರಾಮ')

ಹೀಗೇ ಮುಂದುವರೆದ ಅವರು ಇಂದು ಪ್ರತಿಪಾದಿಸಲಾಗುತ್ತಿರುವ ಸಾವಯವ ಕೃಷಿಯ ಮೂಲ ರೂಪವೇ ಆಗಿದ್ದ ಸಾಂಪ್ರದಾಯಿಕ ಕೃಷಿ ಪದ್ಧತಿಯನ್ನು ಸುಧಾರಿಸುವ ಪ್ರಯತ್ನ ಮಾಡದೆ ಪಶ್ಚಿಮದಿಂದ ಆಮದು ಮಾಡಿಕೊಂಡ ಹಸಿರು ಕ್ರಾಂತಿಯನ್ನು ಆರಂಭಿಸುವ ಮೂಲಕ ನಮ್ಮ ಗ್ರಾಮ ಜಗತ್ತಿನ ದಿಕ್ಕೆಡಿಸಿ ಈಗ ಗ್ರಾಮಗಳ ನಾಶಕ್ಕೇ ಕಾರಣವಾಗಿರುವ ಸರ್ಕಾರದ ಸದ್ಯದ ಅಧಿಕೃತ ನೀತಿಯೇ ಆಗಿರುವ ನಗರೀಕರಣ ನೀತಿಯನ್ನು ವಿಶ್ಲೇಷಿಸ ಹೊರಡುತ್ತಾರೆ. ಈ ನಗರೀಕರಣಕ್ಕೆ ಮೂಲ ಅಗತ್ಯವೆನಿಸಿರುವ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಇಂದಿನ ಸಮಸ್ಯೆಯನ್ನು ಅವರು ನೋಡುವುದು ಹೀಗೆ: 'ವಿದ್ಯುಚ್ಛಕ್ತಿ ಮುಖ್ಯವಾಗಿ ಬೇಕಾಗಿರುವುದು ಯಾಂತ್ರೀಕರಣಕ್ಕಾಗಿ. ಯಾಂತ್ರೀಕರಣದ ಚಾಲಕ ಶಕ್ತಿ ವಾಣಿಜ್ಯ ಹಿತಾಸಕ್ತಿ. ಈ ಹಿತಾಸಕ್ತಿಯ ಹಿಂದಿರುವುದು ಆರ್ಥಿಕ ಹಿತಾಸಕ್ತಿ. ಆರ್ಥಿಕ ಹಿತಾಸಕ್ತಿಯ ಹಿಂದೆ ಇರುವ ಚಾಲಕ ಶಕ್ತಿ ವಸಾಹತು ಸ್ಥಾಪನೆ. ವಸಾಹತುಶಾಹಿ ಹಿಂದೆ ನಿಂತಿರುವುದು ಬಂಡವಾಳಶಾಹಿ. ಬಂಡವಾಳಶಾಹಿಗೆ ಇಂಧನ ರಾಜಕೀಯೋದ್ದೇಶ. ರಾಜಕೀಯೋದ್ದೇಶದ ಸ್ವಾರ್ಥದ ಪರಿಣಾಮ ಗ್ರಹ ಸಮರ. ಗ್ರಹ ಸಮರದ ಅಂತಿಮ ಪರಿಣಾಮ ಜೀವಕೋಟಿಯ ನಾಶ'. ಕೌಲಗಿಯವರ ಈ ಸುದೀರ್ಘ ತರ್ಕ ಸರಣಿಯ ಮೂಲ ಪ್ರೇರಣೆ ಭಾರತಕ್ಕೂ ಈಗ ಕುಮ್ಮಕ್ಕು ಕೊಟ್ಟಿರುವ ಅಮೆರಿಕಾ ನಡೆಸಿರುವ ಚಂದ್ರನ ಮೇಲಿನ 'ದಾಳಿ'. ಇಂದಿನ ಅಭಿವೃದ್ಧಿ ಎಂಬ ಜಾಗತಿಕ ಯಂತ್ರಕ್ಕೆ ಬೇಕಾದ ಮೂಲ ಇಂಧನವೆಂದು ಪರಿಗಣಿಸಲ್ಪಟ್ಟಿರುವ ಅಣುವಿದ್ಯುತ್‌ನ ಮಾತೃಕೆಗಳನ್ನು ಚಂದ್ರನಲ್ಲಿರುವ ಹೀಲಿಯಂ ಮುಂತಾದ ಅಪರೂಪದ ಖನಿಜಗಳ ರೂಪದಲ್ಲಿ ಕಂಡಿರುವ ಅಮೆರಿಕಾ, ಅದಕ್ಕಾಗಿ ಮಾನವನ ಕುತೂಹಲ ಮತ್ತು ಸಾಹಸ ಶಕ್ತಿಯನ್ನು ವಿಜ್ಞಾನ ಮತ್ತು ತಂತ್ರಜ್ಞಾನಗಳ ಹೆಸರಿನಲ್ಲಿ ದುರುಪಯೋಗಪಡಿಸಿಕೊಳ್ಳುತ್ತಿರುವುದರ ಪರಿಣಾಮವನ್ನು ವಿಶ್ಲೇಷಿಸುವುದು ಹೀಗೆ: 'ವೈಜ್ಞಾನಿಕ ಸಂಶೋಧನೆ, ಮಾನವನ ಕುತೂಹಲ, ಬುದ್ಧಿ ವಿಕಾಸ ಮುಂತಾದ ಕಾರಣಗಳಲ್ಲದೆ ಈ ದಾಳಿಗಳಿಗೆ ಯಾವ ಮಾನವೀಯ ಅಂಶಗಳ ಕಾರಣವಿದೆ? ಅಣು ಅಸ್ತ್ರಗಳ ತಯಾರಿಕೆಯ ಹಿಂದೆಯೂ ಸಹ ಅವೇ ಬೌದ್ಧಿಕ, ವೈಜ್ಞಾನಿಕ ಕಾರಣಗಳಿದ್ದುವಲ್ಲವೇ? ಆದರೆ ಅಣು ಅಸ್ತ್ರ ಕಂಡು ಹಿಡಿದ ಬಳಿಕ ಪಶ್ಚಾತ್ತಾಪ ಪಟ್ಟೆವಲ್ಲವೇ?.... ವಿಜ್ಞಾನ ಮತ್ತು ತಂತ್ರಜ್ಞಾನ ಮನುಷ್ಯನ ನೈತಿಕತೆಯನ್ನು ಎಳ್ಳಷ್ಟೂ ಹೆಚ್ಚಿಸಿಲ್ಲ. ಬದಲಿಗೆ ಅವನ ಅನೈತಿಕತೆ ಎಲ್ಲ ಕ್ಷೇತ್ರಗಳನ್ನೂ ವ್ಯಾಪಿಸಿದೆ' ('ಚಂದ್ರನ ಮೇಲಿನ ದಾಳಿ: ಮನುಕುಲದ ನಾಶಕ್ಕೆ ನಾಂದಿ')

ಹೀಗೆ ಗಾಂಧಿ ಚಿಂತನೆಯನ್ನು ಇಂದಿನ ಜಾಗತಿಕ ವಿದ್ಯಮಾನಗಳ ಎಲ್ಲ ಆಯಾಮಗಳಿಗೂ ವಿಸ್ತರಿಸಿ ಅದರ ಅಖಂಡತೆಯನ್ನು ಪರಿಚಯಿಸುವ ಕೌಲಗಿಯವರು ಅದನ್ನು ಭೋಪಾಲ್ ಅನಿಲ ದುರಂತ, ಕೋಪೆನ್‌ಹೇಗನ್ ಪರಿಸರ ಸಮ್ಮೇಳನ, ಒಬಾಮಾ–ಒಸಾಮಾಗಳ ನಡುವೆ ನಡೆದ ದ್ವಂದ್ವ ಯುದ್ಧ(ಇದರಲ್ಲಿ ಒಬಾಮಾನನ್ನು ಒಸಾಮಾನಿಗೆ ಸಮಾನನಾದ ದುಷ್ಟನಂತೆ ಚಿತ್ರಿಸಿರುವುದನ್ನು ಒಪ್ಪಲಾಗದಾದರೂ), ಅಯೋಧ್ಯಾ ವಿವಾದದ ಸುತ್ತ ಬೆಳೆಯುತ್ತಿರುವ ಕೋಮುವಾದಿ ರಾಜಕಾರಣ ಮತ್ತು ಇದೆಲ್ಲವನ್ನು ಕುರಿತ ನಮ್ಮ ಅವಜ್ಞೆಯ ಮೂಲದಲ್ಲಿರುವ ಇಂದಿನ ಇಂಗ್ಲಿಷ್ ಮತ್ತು ಉದ್ಯೋಗ ಕೇಂದ್ರಿತ ಶಿಕ್ಷಣ ನೀತಿ ಇತ್ಯಾದಿಗಳನ್ನೂ ತಮ್ಮ ಈ ಚಿಂತನೆಯ ತೆಕ್ಕೆಗೆ ತೆಗೆದುಕೊಂಡು ಜಾಗತಿಕ ಸರ್ವೋದಯ ಚಿಂತನೆಯನ್ನಾಗಿ ಕಟ್ಟುತ್ತಾ ಹೋಗುತ್ತಾರೆ. ಮುಖ್ಯವಾಗಿ ಇಂದಿನ ಶಿಕ್ಷಣ ಪದ್ಧತಿ ಕುರಿತಂತೆ ಪ್ರೊ॥ ರಾಬರ್ಟ್ ಹಚಿನ್ಸ್ ಎಂಬ ಶಿಕ್ಷಣ ತಜ್ಞನನ್ನು ಉಲ್ಲೇಖಿಸುತ್ತಾ ಹೇಳುವ ಈ ಮಾತು ಗಮನಾರ್ಹವೆನಿಸುತ್ತದೆ: 'ಈಗ ಜಾರಿಯಲ್ಲಿರುವುದು ತತ್ಕಾಲೀನ(ಅಡ್‌ಹಾಕ್) ಶಿಕ್ಷಣ ಪದ್ಧತಿ. ಇದು ಇರುವುದಕ್ಕೆ ಹೊಂದಿಕೊಂಡು ಹೋಗುವ ಕೌಶಲ್ಯಗಳನ್ನು ಕಲಿಸುವ ಪದ್ಧತಿ. ಇರುವುದನ್ನು ಪರಿಶೀಲಿಸಿ ಬದಲಾಯಿಸಬೇಕಿದ್ದರೆ ಬದಲಾಯಿಸಬೇಕಾದ ಇಚ್ಛಾ ಶಕ್ತಿಯನ್ನು ರೂಢಿಸುವ ಪದ್ಧತಿ ಬೇಕು. ತತ್ಕಾಲೀನವಾದುದು ಯಾವಾಗಲೂ ಪರಿಸ್ಥಿತಿಯ ವಶವಾಗಿರುತ್ತದೆಯೇ ಹೊರತು ಪರಿಸ್ಥಿತಿಯನ್ನು ನಿಯಂತ್ರಿಸಲಾರದು.'('ಉದ್ಯೋಗ ಮತ್ತು ಶಿಕ್ಷಣ ಜೊತೆ ಜೊತೆಯಲ್ಲಿ')

ಇದೆಲ್ಲದರ ಹಿನ್ನೆಲೆಯಲ್ಲಿ ಕೌಲಗಿಯವರು ರಾಷ್ಟ್ರದ ಇತ್ತೀಚಿನ ಮುಂಗಡ ಪತ್ರಗಳನ್ನೂ ವಿಶ್ಲೇಷಿಸುವ ನೆಲ ಮಟ್ಟದ ವಿವರಗಳಿಗೂ ಬಂದು, 'ನಮ್ಮ ಅಂದಾಜು ಪತ್ರಗಳನ್ನು ತಯಾರಿಸುವಾಗ ವಿದೇಶಿ ವ್ಯಾಖ್ಯೆಯ ಪ್ರಗತಿಯ ಮಾನದಂಡವನ್ನು ದೃಷ್ಟಿಯಲ್ಲಿರಿಸಿಕೊಳ್ಳಲಾಗುತ್ತದೆ' ಎಂದು ರಾಷ್ಟ್ರ ಇಂದು ಚಲಿಸುತ್ತಿರುವ ದಿಕ್ಕು ತಪ್ಪಾಗಿದೆ ಎಂಬ ತಮ್ಮ ಮಾತಿಗೆ ನೆಲ ಮಟ್ಟದ ಕಾರಣವನ್ನು ಸೂಚಿಸುತ್ತಾರೆ.('ಅಂದಾಜು ಪತ್ರ: ಆಕಾಶದಲ್ಲಿನ ನಕ್ಷತ್ರ'). ಇದಕ್ಕೆಲ್ಲ ಸರ್ಕಾರಕ್ಕೆ ಎರಡು

ತಲೆಗಳಿರುವುದೇ ಕಾರಣ ಎಂದು ಅವರು ಸೋದಾಹರಣವಾಗಿ ವಿಶ್ಲೇಷಿಸುತ್ತಾ, ಇದಕ್ಕೆ ಮತ್ತೆ ಕಾರಣ 'ಜನತೆ ತನ್ನ ತಲೆಯನ್ನು ಅಂದರೆ ಬುದ್ಧಿಮತ್ತೆಯನ್ನು ಸ್ವಾತಂತ್ರ್ಯ ಬಂದ ಕೂಡಲೇ ಸರ್ಕಾರಕ್ಕೆ ಒಪ್ಪಿಸಿ ತಾನು ಸರ್ಕಾರದ ಮೂರ್ಖತನದ ಆಟಗಳನ್ನು ನೋಡುತ್ತ ಮೂಕ ಪ್ರೇಕ್ಷಕನಾಗಿ ಕುಳಿತದ್ದು' ('ಸರ್ಕಾರಕ್ಕೆ ಎರಡು ತಲೆ! ಜನತೆಯ ತಲೆ ಎಲ್ಲಿ?')ಎನ್ನುತ್ತಾರೆ. ಇಂದಿನ ಸಾಲು ಸಾಲಾದ ಕೋಟಿ ಕೋಟಿ ರೂಪಾಯಿಗಳ ಭ್ರಷ್ಟಾಚಾರದ ಹಗರಣಗಳನ್ನು ಉಲ್ಲೇಖಿಸಿ ಹೌಹಾರುತ್ತಾ 'ರಾಜಕೀಯದಲ್ಲಿ ಕೂಡಾ ಭಗವಂತನ ರಾಜ್ಯ ಸ್ಥಾಪಿತವಾಗಬೇಕಿದೆ. ಸತ್ಯವನ್ನು ಬಲಿಕೊಟ್ಟು ಸ್ವಾತಂತ್ರ್ಯವನ್ನು ಪಡೆಯುವುದಕ್ಕಿಂತ ಭಾರತ ವಿನಾಶ ಹೊದುವುದೇ ಹೆಚ್ಚು ಲೇಸೆಂಬುದು ನನ್ನ ಮತ' ಎಂಬ ಗಾಂಧಿಯ ಮಾತನ್ನು ಸಹಜ ಆವೇಶದಿಂದ ಉಲ್ಲೇಖಿಸಿ ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಆಂದೋಲನದತ್ತ ಒಮ್ಮೆ ಆಸೆಗಣ್ಣುಗಳಿಂದ ನೋಡುತ್ತಾರೆ. ('ಸಾಬರ್‌ಮತಿಯಿಂದ ಜಂತರ್‌ಮಂತರ್: ಜಂತರ್‌ಮಂತರ್‌ನಿಂದ ರಾಮಲೀಲಾ ಮೈದಾನ: ಮುಂದೆಲ್ಲಿಗೆ?') ನಂತರ ಇದು ಮುಗಿಯದ ಹೋರಾಟವೆಂಬಂತೆ 'ಗಾಂಧಿ ಬೇಕೋ? ಬೇಡವೋ?– ನಿರ್ಧರಿಸಿ' ಎಂಬ ಈ ಸಂಗ್ರಹದ ಕೊನೆಯ ಬರಹದ ಕೊನೆಯಲ್ಲಿ 'ಗಾಂಧಿ ಯಾವ ಜೀವನ ಮೌಲ್ಯಗಳಿಗಾಗಿ ಹುತಾತ್ಮರಾದರೋ ಆ ಮೌಲ್ಯಗಳ ಸ್ಥಾಪನೆಯಾಗಬೇಕಾದ ಕಾಲ ಈಗ ಬಂದಿದೆ. ಗಾಂಧಿ ಹೆಸರನ್ನು ತೆಗೆದುಕೊಳ್ಳುತ್ತಾ ದಿನನಿತ್ಯ ನಮ್ಮ ವ್ಯವಹಾರದಲ್ಲಿ ಅವರ ಹತ್ಯೆ ಮಾಡುವುದನ್ನು ನಿಲ್ಲಿಸೋಣ. ಅದಕ್ಕಾಗಿ ನಮಗೆ ಗಾಂಧಿ ಬೇಕೋ ಬೇಡವೋ ನಿರ್ಧರಿಸಿ' ಎಂದು ಕರೆ ಕೊಡುತ್ತಾರೆ.

–೨–

ಈ ಎಲ್ಲವೂ ಸರಿ. ಈ ವಿಶ್ಲೇಷಣೆಗಳೆಲ್ಲವೂ ಸಮರ್ಪಕವೇ. ಕೌಲಗಿಯವರ ಗಾಂಧಿ ಚಿಂತನೆಯ ಕರಾರುವಾಕ್ಕಾದ ಗ್ರಹಿಕೆಯ ಚಿತ್ರ ನಮಗೆ ಇಲ್ಲಿ ದೊರೆಯುತ್ತದೆ. ಆದರೂ ಇವರ ಈ ಕರೆಗೆ ಜನರೇಕೆ ಓಗೊಡುತ್ತಿಲ್ಲ? ಕೌಲಗಿಯವರು ಅದದೇ ಮಾತುಗಳನ್ನು, ವಿಚಾರಗಳನ್ನು ಮತ್ತೆ ಮತ್ತೆ ಏಕೆ ಹೇಳಬೇಕಾಗಿ ಬಂದಿದೆ? ಇದು ಈ ವಿಶ್ಲೇಷಣೆಗಳ ಸರಿತನ ಮತ್ತು ಸಮರ್ಪಕತೆಗಳನ್ನು ಮೀರಿ ಒಂದು ಮುಖ್ಯ ಪ್ರಶ್ನೆಯಾಗಿ ನನ್ನನ್ನು ಕಾಡಿದೆ. ವಿಶೇಷವಾಗಿ ಇಂತಹ ಬೇರೆ ಹಲವು ಸುಸಂಗತವೂ, ಸತ್ಯವೂ, ಪ್ರಾಮಾಣಿಕವೂ, ಅಧ್ಯಯನಶೀಲವೂ ಆದ ವಾದ–ವಿಶ್ಲೇಷಣೆಗಳನ್ನು ಓದಿ, ತಲೆದೂಗುವಂತಾಗುವ ಸಂದರ್ಭಗಳಲ್ಲಿ. ಏಕೆಂದರೆ, ಕಳೆದ ಇಪ್ಪತ್ತು–ಇಪ್ಪತ್ತೈದು ವರ್ಷಗಳಲ್ಲಿ ಈ ಕೂಗನ್ನು ಕೌಲಗಿಯವರಂತಹ ಅನೇಕರು ಆಗಾಗ್ಗೆ ಹಾಕುತ್ತಲೇ ಇದ್ದಾರೆ. ಆದರೆ ಹಾಗೆ ಕೂಗು ಹಾಕಿದ ಗಂಟಲುಗಳು ಹರಿಯುತ್ತಿವೆಯೇ ಹೊರತು ಜನಸಮೂಹದ ಬಹುಭಾಗ ಇತ್ತ ನೋಡಲೂ ಬಯಸದೆ ಜಾಗತೀಕರಣದ ಸುಖಫಲಗಳನ್ನು ಮೆಲ್ಲುತ್ತಲೇ ಮುನ್ನಡೆದಿದೆ. ಅವುಗಳಿಂದ ವಂಚಿತರಾದವರಿಗೆ ಈ ಕೂಗು ಕೇಳುತ್ತಲೂ ಇಲ್ಲ ಅಥವಾ ಕೇಳಿದರೂ ಅದರ ಪರಿಭಾಷೆ ಅವರಿಗೆ ಅರ್ಥವಾಗುತ್ತಲೂ ಇಲ್ಲ. ಏಕೆ ಹೀಗೆ?

ಕೌಲಗಿಯವರು ವಾಸಿಸುತ್ತಿರುವ ಮೇಲುಕೋಟೆಯೇ ನಾನು ನೋಡಿದಂತೆ ಕಳೆದ ಹದಿನೈದು–ಇಪ್ಪತ್ತು ವರ್ಷಗಳಲ್ಲಿ ಹಳ್ಳಿಯ ಎಲ್ಲ ಮೂಲ ಸೊಬಗನ್ನೂ ಕಳೆದುಕೊಂಡು ನಮ್ಮ ಶಿವಮೊಗ್ಗದಂತೆಯೇ ಆಗಿದೆ. ಹಾಗಾಗಿ ಹಿಂದೆ ನನಗೆ ಅಲ್ಲಿ ಮೂರು ದಿನಗಳಿದ್ದರೂ ಇನ್ನೂ ಇರುವ ಆಸೆಯನ್ನು ಹತ್ತಿಕ್ಕಿ ಅಲ್ಲಿಂದ ಬರಬೇಕಾಯಿತು. ಆದರೆ ಮೊನ್ನೆ ಹೋದಾಗ ಒಂದೂವರೆ ದಿನಗಳಲ್ಲೇ ಸಾಕಾಗಿ, ಹೊರಟರೆ ಸಾಕಪ್ಪಾ ಎನ್ನಿಸಿತ್ತು. ಅಲ್ಲಿನ ಬೆಟ್ಟ ಕಣಿವೆಗಳು, ಕೊಳಗಳು, ಅವುಗಳಲ್ಲಿನ ತಾವರೆಗಳು, ದೇವಾಲಯಗಳು, ಅದರ ಪುರೋಹಿತರುಗಳೂ, ಕೌಲಗಿಯವರು ವಾಸಿಸುವ ಪುರಾತನ ಮನೆಯಿರುವ ಬೀದಿಯೂ ಸೇರಿದಂತೆ ಅಲ್ಲಿನ ಸಣ್ಣಪುಟ್ಟ ಬೀದಿಗಳೂ, ಅದರೊಳಗಿದ್ದ ನಮ್ಮ ಪುತಿನ ಮನೆಯ ನೆನಪಿನ ಆತ್ಮೀಯತೆಯೂ, ಕೊನೆಗೆ ನಾವು ಅಲ್ಲಿನ ಹೋಟೆಲೊಂದರಲ್ಲಿ ತಿಂದು ಬಹು ಕಾಲ ನೆನಪಿಸಿಕೊಳ್ಳುತ್ತಿದ್ದ ಪುಳಿಯೋಗರೆಯ ರುಚಿಯೂ, ಮಿನಿ ನಗರವೊಂದರ ಗಿಜಿಬಿಜಿ ಗದ್ದಲ, ರೂಕ್ಷ ಶೃಂಗಾರ, ಎಡವಿ ಬೀಳುವ ಅವಸರಗಳಿಗೆ ಸಿಕ್ಕಿ ಮೂಲ ಜೀವಾಧಾರಗಳನ್ನೇ ಕಳಚಿಕೊಂಡಂತೆ ತೀವ್ರವಾಗಿ ಜಖಂಗೊಂಡಿದ್ದವು. ಇದೆಲ್ಲದರಿಂದಾಗಿ ಚೆಲುವ ನಾರಾಯಣನ ಚೆಲುವೂ ಜಖಂಗೊಂಡಿದ್ದರೂ ಆಶ್ಚರ್ಯವಿಲ್ಲ. ಪುಣ್ಯವಶಾತ್ ಈ ಬಾರಿ ಆತನನ್ನು ಕಾಣುವ ಸೌಭಾಗ್ಯ ನನ್ನದಾಗಿರಲಿಲ್ಲ.

ಇದನ್ನೆಲ್ಲ ನಾನು ಇಲ್ಲೇಕೆ ಹೇಳುತ್ತಿರುವೆನೆಂದರೆ, ಕೌಲಗಿಯವರು ಯಾಂತ್ರೀಕರಣವಿಲ್ಲದ ಗ್ರಾಮ, ಅಲ್ಲಿನ ಶ್ರಮ, ಸಾವಧಾನ, ಸಂಯಮಗಳ ಬದುಕನ್ನು ಪ್ರತಿಪಾದಿಸುತ್ತಿರುವಾಗ, ಅದು ಇಂದು ಹಲವರಿಗೆ ಹಳಹಳಿಕೆಯಾಗಿ ಕಂಡರೆ; ಹಾಗಾಗಿ ಸಮಾನ ಮನಸ್ಕ ಕೆಲವರ ಹೊರತಾಗಿ ಮಿಕ್ಕವರು ಅದನ್ನು ಕಿವಿಗೆ ಹಾಕಿಕೊಳ್ಳದೇ ಹೋಗುವಂತಾಗಿದ್ದರೆ, ಅದಕ್ಕೆ ಅವರು ಜಗತ್ತಿನ ಪರಿವರ್ತನಶೀಲತೆಯನ್ನು ಗಣನೆಗೇ ತೆಗೆದುಕೊಳ್ಳದಂತೆ ಪೂರ್ವ ನಿಶ್ಚಿತ ಪರಿಭಾಷೆಯಲ್ಲೇ–ಒಂದು ಸಿದ್ಧ ಗಾಂಧಿವಾದಿ ಎರಕದಲ್ಲಿ–ಮಾತನಾಡುತ್ತಿರುವುದು ಕಾರಣವಿರಬಹುದು ಎಂದು ಸೂಚಿಸಲು. ಕನಿಷ್ಠ ಅವರು ತಮ್ಮ ದೀರ್ಘಕಾಲಿಕ ಬದುಕಿನ ಹೋರಾಟ, ಏಳುಬೀಳುಗಳ ಜೀವಂತ ವಿವರಗಳೊಂದಿಗೆ, ತಮ್ಮ ವಿಚಾರ–ವಿಶ್ಲೇಷಣೆ–ವಾದಗಳನ್ನು ಅವುಗಳ ನಿಕಷಕ್ಕೊಡ್ಡಿ ಇಲ್ಲಿ ಮಂಡಿಸಿದ್ದರೆ ಅದಕ್ಕೊಂದು ಹೊಸ ಪ್ರಭೆ, ಶಕ್ತಿ ಮತ್ತು ಪ್ರಸ್ತುತತೆಗಳು ದೊರಕುತ್ತಿದ್ದುವೇನೋ. ಗಾಂಧಿ–ವಿನೋಬಾರನ್ನು ಅವರ ಕಾಲದ ಮೂರ್ತಿಗಳನ್ನಾಗಿಯೇ ಕಾಪಾಡಿಕೊಂಡು ಈಗ ಬದಲಾದ ಕಾಲ ಸಂದರ್ಭದಲ್ಲಿ ಅವರನ್ನು ಹಾಗೇ ಪ್ರತಿಷ್ಠಾಪಿಸುವ ಇಲ್ಲಿನ ಪ್ರಯತ್ನ ಅಷ್ಟೇನೂ ಸಾಧುವಲ್ಲವೆಂದೇ ನನ್ನ ಅಭಿಪ್ರಾಯ. ಹಾಗಾಗಿ ಕೌಲಗಿಯವರು ಗಾಂಧಿ ಬೇಕೇ ಬೇಡವೇ ನಿರ್ಧರಿಸಿ ಎಂದು ಕೇಳಿದಾಗ ಯಾವ ಗಾಂಧಿ ಎಂಬ ಮರುಪ್ರಶ್ನೆ ಯಾರಿಂದಲಾದರೂ ಎದುರಾದರೆ ಆಶ್ಚರ್ಯಪಡಬೇಕಿಲ್ಲ.

ಏಕೆಂದರೆ, ವಿಶೇಷವಾಗಿ ಇಲ್ಲಿ ವಿನೋಬಾ ಕಣ್ಣಿನ ಗಾಂಧಿ ಅಂದರೆ ಸಂತ ಗಾಂಧಿ ಮಾತ್ರ ಪ್ರಸ್ತುತಗೊಂಡಿದ್ದಾರೆ ಎಂದೆನಿಸದಿರದು. ಗಾಂಧಿಯನ್ನು ಬದಲಾದ ಕಾಲಘಟ್ಟಗಳಲ್ಲಿ ಬದಲಾದ ಸವಾಲುಗಳೆದುರಲ್ಲಿ ನಿರೂಪಿಸಿದ ರಾಜಾಜಿ, ಮಿನೂ ಮಸಾನಿ, ಲೋಹಿಯಾ, ಅಚ್ಯುತ ಪಟವರ್ಧನ್, ಅಶೋಕ ಮೆಹ್ತಾ, ಧರ್ಮಪಾಲ್, ಜೆ.ಸಿ. ಕುಮಾರಪ್ಪ, ಇತ್ತೀಚಿನ ವಿವಿಧ ಹಿನ್ನೆಲೆಗಳ ಕಮ್ಯೂನಿಸ್ಟರು, ನಾಗರಿಕ ಹಕ್ಕುಗಳ ಹೋರಾಟಗಾರರು, ಪರಿಸರವಾದಿಗಳು, ಶಾಂತಿವಾದಿಗಳು, ನಮ್ಮ ಅಮರ್ತ್ಯಸೇನರೂ ಸೇರಿದಂತೆ ಹಲವು ಪಶ್ಚಿಮದ ಅರ್ಥಶಾಸ್ತ್ರಜ್ಞರ(ಉದಾ: ಷೂಮೇಕರ್, ಕ್ರೂಗ್ಮನ್, ಸ್ಟಿಗ್ಲಿಟ್ಸ್ ಇತ್ಯಾದಿ) ಗೊಡವೆಗೇ ಹೋಗದಿರುವುದು ಅಥವಾ ಇವರೆಲ್ಲ ಸೇರಿ ಸೃಷ್ಟಿಸಿರುವ ಗಾಂಧಿವಾದದ ಸಂಕೀರ್ಣತೆಗಳನ್ನು ಗಮನಿಸದೇ ಹೋಗಿರುವುದು ಈ ನೋಟದ ಸಮಸ್ಯೆಯೆಂದು ನನಗೆ ಕಾಣುತ್ತದೆ. ಇಲ್ಲಿ ಕೌಲಗಿಯವರು ತಾವು ಹತ್ತಿರದಲ್ಲಿ ಒಡನಾಡಿದ ಜೆಪಿಯವರ ಗಾಂಧಿ ದೃಷ್ಟಿಯನ್ನೂ(ಅದು ಅವರು ೧೯೭೭ರಲ್ಲಿ ರೂಪಿಸಿದ ಜನತಾ ಪಕ್ಷದ 'ಗಾಂಧಿ ಸಮಾಜವಾದ'ದ ಪ್ರಣಾಳಿಕೆಯಾಗಿ ಕಾರ್ಯಕ್ರಮಗಳ ರೂಪದಲ್ಲಿ ಕಾಣಿಸಿಕೊಂಡಿತ್ತು.) ತಮ್ಮ ಮಂಡನೆಗಳಲ್ಲಿ ಅಷ್ಟಾಗಿ ಅಳವಡಿಸಿಕೊಳ್ಳದಿರುವುದು ನನಗೆ ಆಶ್ಚರ್ಯವನ್ನು ತಂದಿದೆ. ಹಾಗೇ ಇಲ್ಲಿನ ಗಾಂಧಿ ಚಿಂತನೆಯ ಪ್ರಸ್ತುತಿಯಲ್ಲಿ ನನಗೆ ಕಂಡ ಇನ್ನೊಂದು ದೊಡ್ಡ ಕೊರತೆಯೆಂದರೆ, ಗಾಂಧಿ ಕಾಲದಲ್ಲೇ ಅವರ ವ್ಯಕ್ತಿತ್ವ ಮತ್ತು



ಜೆಪಿ



**ಗಾಂಧಿ ಸಮಾಜವಾದಿಗಳು : ಅರುಣಾ ಅಸಿಫ್ ಅಲಿ, ಯೂಸುಫ್ ಮೆಹ್ರೋಲಿ, ಜೆಪಿ, ಲೋಹಿಯಾ, ಅಚ್ಯುತ್ ಪಟವರ್ಧನ್, ಇತರರು**

ಚಿಂತನೆಗಳಿಗೆ ತೀವ್ರ ಸವಾಲೊಡ್ಡಿದ ಅಂಬೇಡ್ಕರರ ಹೋರಾಟ ಮತ್ತು ಚಿಂತನೆಗಳು ಅವರನ್ನು ಕೆಲವು ವಿಷಯಗಳಲ್ಲಾದರೂ ನಿರ್ಣಾಯಕವಾಗಿ ಪ್ರಭಾವಿಸಿದ್ದರ ಯಾವ ಸೂಚನೆಗಳೂ ಇಲ್ಲಿ ಇಲ್ಲದಿರುವುದು. ಇಲ್ಲಿನ ಬರಹಗಳ ಕಾಲಾವಧಿಯಲ್ಲೇ ಖೈರ್ಲಾಂಜಿಯ ಬರ್ಬರ ಘಟನೆ ನಡೆಯಿತಲ್ಲಾ, ಅದು ಇವರನ್ನು ಕಿಂಚಿತ್ತೂ ಅಲ್ಲಾಡಿಸಲಿಲ್ಲವೇ? ಅದು ಇವರ ಗಾಂಧಿ ಚಿಂತನೆಯ ಮಾದರಿಯನ್ನು ಒಂದು ಕ್ಷಣವಾದರೂ ತಲ್ಲಣಕ್ಕೆ ಈಡು ಮಾಡಲಿಲ್ಲವೇ? ಕೌಲಗಿಯವರು ಈ ದಿಕ್ಕುಗಳಲ್ಲಿ ಕಣ್ಣುಗಳನ್ನು ಒಂದಿಷ್ಟು ಅರಳಿಸಿದ್ದರೆ ಗ್ರಾಮ, ಶ್ರಮ, ಯಂತ್ರ, ಸಂಯಮ, ಸಮಾಧಾನ ಎಂಬ ಕಲ್ಪನೆಗಳು ಹತ್ತೊಂಬತ್ತು-ಇಪ್ಪತ್ತನೇ ಶತಮಾನದ ಕೊನೆಯ ಹೊತ್ತಿಗೆ ಚಪ್ಪಟೆಯಾಗಿ ಹೋಗಿದ್ದ ತಮ್ಮ ಮೂಲಾರ್ಥಗಳಾಚೆಗೆ ವಿಸ್ತರಿಸಿಕೊಂಡು ಬಿಡಿ ಬಿಡಿಯಾಗಿಯೂ, ಜೊತೆಗೂಡಿಯೂ ಹೊಸ ರೂಪಕಾರ್ಥಗಳನ್ನು ಪಡೆದು ಗಾಂಧಿಯನ್ನು ಇಪ್ಪತ್ತೊಂದನೇ ಶತಮಾನಕ್ಕೆ ಪ್ರಸ್ತುತಗೊಳಿಸಿಕೊಳ್ಳುವಲ್ಲಿ ನಡೆಸಿರುವ ಪ್ರಯತ್ನಗಳನ್ನು ಗಮನಿಸಬಹುದಿತ್ತು. ಆ ಮೂಲಕ ತಮ್ಮ ಗಾಂಧಿವಾದಿ ಪರಿಭಾಷೆಯನ್ನು ಸಂಸ್ಕರಿಸಿಕೊಳ್ಳಬಹುದಿತ್ತು ಎನಿಸುತ್ತದೆ.

ಆದರೆ ಈ ಪ್ರಯತ್ನವನ್ನು ಮಾಡದಂತೆ ತೋರುವ ಕೌಲಗಿಯವರು, ಹಾಗಾಗಿ ಎಷ್ಟೇ ಪ್ರಾಮಾಣಿಕವಾಗಿ, ಹೃದಯಪೂರ್ವಕವಾಗಿ 'ಕ್ರಾಂತಿ', 'ಕ್ರಾಂತಿ' ಎಂದು ಕೂಗು ಹಾಕುತ್ತಿದ್ದರೂ, ಅದು ಸದುದ್ದೇಶಗಳ ಸಾತ್ವಿಕನೊಬ್ಬನ ಅಸಹಾಯಕ ತುರ್ತು ಕರೆ ಎನಿಸುತ್ತದೆಯೇ ಹೊರತು ಇಲ್ಲಿ ಕೌಲಗಿಯವರೇ ಹೇಳುತ್ತಿರುವಂತೆ ಎಲ್ಲ ದಿಕ್ಕುಗಳಿಂದಲೂ ಜಖಂಗೊಂಡು ಇಂದು ಪೂರ್ಣ ಕೆಟ್ಟು ಹೋಗಿರುವ ವ್ಯವಸ್ಥೆಯನ್ನು ಬುಡಮೇಲುಗೊಳಿಸುವುದಿರಲಿ, ಅದರ ಕೆಲವು ಮುಖ್ಯ ಆಧಾರ ನಂಬಿಕೆಗಳನ್ನಾಗಲೀ, ಅದರ ನೆಲೆ ಮತ್ತು ಪರಿಭಾಷೆಯನ್ನಾಗಲೀ ಪ್ರಶ್ನಿಸಬಲ್ಲ ಆಳದ ಬಂಡಾಯದ ಕರೆ ಎಂದೆನ್ನಿಸುವುದಿಲ್ಲ. ಇದನ್ನೇ ಇಲ್ಲಿನ ಲೇಖನಗಳ ಶೈಲಿ, ಸ್ವರೂಪಗಳಲ್ಲಿ ಗುರುತಿಸಿ ಹೇಳುವುದಾದರೆ,





**ಜೆ.ಸಿ. ಕುಮಾರಪ್ಪ ರಾಜಾಜಿ ಅಮರ್ತ್ಯ ಸೇನ್**

ಇಲ್ಲಿನ ವಾದಗಳಿಗೆ ಬೆಂಬಲವಾಗಿ ಗಾಂಧಿ-ವಿನೋಬಾರ ಉಲ್ಲೇಖಗಳ ಹೊರತಾಗಿ ವೇದೋಪನಿಷತ್ತುಗಳಿಂದಷ್ಟೇ ಅಲ್ಲದೆ ನಮ್ಮ ಡಿವಿಜಿ, ಬೇಂದ್ರೆ, ವೀಸೀ, ಅಡಿಗರ ಪದ್ಯ ಸಾಲುಗಳನ್ನೂ ಸ್ಫೂರ್ತಿ ವಾಕ್ಯಗಳಾಗಿ ಬಳಸಲಾಗಿದೆ. ಆದರೆ, ಇದೇ ಕಾಲದಲ್ಲಿನ ಸಾಮಾಜಿಕ-ಸಾಂಸ್ಕೃತಿಕ ಪರಿವರ್ತನೆಯ ಬಹು ದೊಡ್ಡ ಕಾವ್ಯ ಧ್ವನಿಯಾಗಿ ಮತ್ತು ಈ ಕವಿಗಳಷ್ಟೇ ಏನು, ಇನ್ನೂ ದೊಡ್ಡ ಪ್ರಮಾಣದಲ್ಲಿ ಜನಪ್ರಿಯರಾಗಿ ಮೇಲುಕೋಟೆಗೆ ಬಹು ಸನಿಹದ ಮೈಸೂರಿನಿಂದ ಹಲವು ಕ್ರಾಂತಿಕಾರಿ ಕವನಗಳ ಡಿಂಡಿಮ ಬಾರಿಸಿದ ಕುವೆಂಪು ಅವರ ಒಂದು ಸಾಲೂ ಇಲ್ಲಿನ ಯಾವುದೇ ಬರಹಕ್ಕೆ ಸ್ಫೂರ್ತಿ ವಾಕ್ಯವಾಗಿಲ್ಲ ಏಕೆ ಎಂದು ಕೇಳುವಂತಾಗುತ್ತದೆ. ಕೌಲಗಿಯವರ ಮಿತಿಗಳು ಈ ಸ್ತರದವು ಎಂದು ಹೇಳಿದರೆ ಸಾಕೆನಿಸುತ್ತದೆ. ಇದು ಉದ್ದೇಶಪೂರ್ವಕ ಎಂದು ನಾನು ಹೇಳುತ್ತಿಲ್ಲ. ಇದು ಅವರ ಸಂವೇದನೆಯ, ಪ್ರಜ್ಞೆಯ ಮಿತಿ ಇರಬಹುದು.

ಇಷ್ಟೆಲ್ಲ ಹೇಳಿದ ಮೇಲೂ ನಾನು ಕೌಲಗಿಯವರ ಪ್ರಯತ್ನವನ್ನು, ಅದರ ಹಿಂದಿನ ಉತ್ಸಾಹ-ಬದ್ಧತೆಗಳನ್ನು ಪ್ರಶ್ನಿಸಲಾರೆ. ಅದು ಅವರ ಈ ಪ್ರಯತ್ನದ ಹಿಂದಿನ ಕೆಲಸ-ಕಾರ್ಯಗಳನ್ನೂ, ಆ ಉತ್ಸಾಹ-ಬದ್ಧತೆಗಳನ್ನೂ ಕಣ್ಣಾರೆ ನೋಡಿರುವ ನನಗೆ ಅಸಭ್ಯತೆಯಷ್ಟೇ ಅಲ್ಲ, ಸಣ್ಣತನವೂ ಆದೀತು. ಆದರೂ ಅವರ ಪ್ರಯತ್ನದ ಶಕ್ತಿಯ ಜೊತೆ ಅವುಗಳ ಮಿತಿಗಳನ್ನೂ ನನಗೆ ಕಂಡಂತೆ ನಾನು ಹೇಳದಿದ್ದರೆ ಇದು ಓದುಗರ ಪಾಲಿಗೆ ಮುನ್ನುಡಿಯಾಗದೆ ಅಭಿಮಾನಿಯೊಬ್ಬನ ಭಿನ್ನವತ್ತಳೆಯಾದೀತೆಂಬ ಅಳುಕಿನಿಂದ ಈ ಸಾಲುಗಳನ್ನು ಬರೆದಿರುವೆ. ಕೌಲಗಿಯವರು ಅನ್ಯಥಾ ಭಾವಿಸಲಾರರೆಂಬ ಭರವಸೆಯನ್ನು ಅವರ ಬರಹಗಳಲ್ಲಿ ಎದ್ದು ಕಾಣುವ ಪ್ರಾಮಾಣಿಕತೆಯಿಂದ ನಾನು ಪಡೆದುಕೊಂಡಿರುವೆ. ಅದು ಹುಸಿಯಾಗಲಾರದೆಂಬ ನಂಬಿಕೆಯೊಡನೆ ಈ ಮಾತುಗಳನ್ನು ಮುಗಿಸುತ್ತಿದ್ದೇನೆ. ಸುರೇಂದ್ರ ಕೌಲಗಿಯವರು ನನ್ನಂತಹ ಕಿರಿಯರೊಡನೆ ಸಂವಾದಿಸುತ್ತಾ ನಮ್ಮನ್ನು ಬೆಳೆಸಲು ಇನ್ನಷ್ಟು ಕಾಲ ಆಯುರಾರೋಗ್ಯಗಳೊಂದಿಗೆ ಬದುಕಿ ಬಾಳಲಿ ಎಂದು ಆಶಿಸುತ್ತೇನೆ.

೧೨.೪.೨೦೧೩ **ಡಿ.ಎಸ್. ನಾಗಭೂಷಣ**
ಶಿವಮೊಗ್ಗ

## ಹೊಸ ಮನುಷ್ಯ ಆಗಸ್ಟ್ ಸಂಚಿಕೆ : ವಾರ್ಷಿಕ ವಿಶೇಷಾಂಕವಾಗಿ

ಪ್ರಿಯ ಓದುಗರೇ,

ನಿಮ್ಮ ಹೊಸ ಮನುಷ್ಯ ಬರುವ ಆಗಸ್ಟ್‌ಗೆ ಎರಡು ವರ್ಷಗಳನ್ನು ಪೂರೈಸಿ ಮೂರನೇ ವರ್ಷಕ್ಕೆ ಕಾಲಿಡುತ್ತಿದ್ದು, ಹೋದ ವರ್ಷದಂತೆಯೇ ಆಗಸ್ಟ್ ಸಂಚಿಕೆಯು ವಾರ್ಷಿಕ ವಿಶೇಷ ಸಂಚಿಕೆಯಾಗಿ ಹೊರಬರಲಿದೆ. ಇದು ರಾಜಕೀಯ, ಸಂಸ್ಕೃತಿ ಮತ್ತು ಧರ್ಮ ಸಂಬಂಧಿ ಸಂಗತಿಗಳ ವಿಶಿಷ್ಟ ವಿಶ್ಲೇಷಣೆಗಳಲ್ಲದೆ ಖ್ಯಾತ ಲೇಖಕರ ಸೃಜನಶೀಲ ಬರಹಗಳನ್ನೊಳಗೊಂಡ ಒಂದು ಸಂಗ್ರಹಯೋಗ್ಯ ಸಂಪುಟವಾಗಿ ರೂಪಿತವಾಗುತ್ತಿದೆ.

ಇದಕ್ಕಾಗಿ ಪತ್ರಿಕೆಯ ಅಭಿಮಾನ ಓದುಗರು ಸ್ವತಃ ತಾವೇ ಅಥವಾ ತಮ್ಮ ಸಂಪರ್ಕಗಳನ್ನು ಬಳಸಿ ಜಾಹೀರಾತುಗಳನ್ನು ಒದಗಿಸಿಕೊಡಬೇಕೆಂದು ಕೋರುತ್ತೇವೆ. ಜಾಹೀರಾತು ವಿವರ ಹೀಗಿದೆ:

*ಹೊರ ರಕ್ಷಾಪುಟ(ಬಹು ವರ್ಣಗಳಲ್ಲಿ): ಐದು ಸಾವಿರ ರೂಪಾಯಿಗಳು. * ಒಳ ರಕ್ಷಾಪುಟಗಳು( ಬಹು ವರ್ಣಗಳಲ್ಲಿ): ನಾಲ್ಕು ಸಾವಿರ ರೂಪಾಯಿಗಳು. * ಒಳ ಒಂದು ಪುಟ(ಕಪ್ಪು ಬಿಳುಪು): ಎರಡು ಸಾವಿರ ರೂಪಾಯಿಗಳು. * ಅರ್ಧ ಪುಟ ಮತ್ತು ಕಾಲು ಪುಟಗಳಿಗೆ ಕ್ರಮವಾಗಿ ಒಂದು ಸಾವಿರ ಮತ್ತು ಐದು ನೂರು ರೂಪಾಯಿಗಳು.

-ಸಂಪಾದಕ

# ಪ್ರೊ. ಬಿ. ಕೃಷ್ಣಪ್ಪ ನೆನೆಪಿನ ಮಾಲೆ–೨

–ಇಂದಿರಾ ಬಿ. ಕೃಷ್ಣಪ್ಪ



**ಭದ್ರಾ ಕಾಲೇಜಿನ ಯೂನಿಯನ್ ಡೇ ಸಮಾರಂಭದ ಚಿತ್ತದಲ್ಲಿ ಕುರ್ಚಿಯಲ್ಲಿ ಕುಳಿತಿರುವ ಆಡಳಿತ ಮಂಡಳಿ ಸದಸ್ಯರು ಮತ್ತು ಅಧ್ಯಾಪಕ ವೃಂದದ ಸಾಲಿನಲ್ಲಿ ಎಡದಿಂದ ಎರಡನೆಯವರು ಪ್ರೊ. ಬಿ. ಕೃಷ್ಣಪ್ಪ, ಕುಳಿತಿರುವ ವಿದ್ಯಾರ್ಥಿನಿಯರ ಮುಂದಿನ ಸಾಲಿನಲ್ಲಿ ಎಡದಿಂದ ಐದನೇಯವರು ಇಂದಿರಾ**

## ಮುಸ್ಲಿಂ 'ತಾಯಿ'ಯ ಅಭಿಮಾನ ಅಜ್ಜ ಅಡಿಗರ ಬಿಗುಮಾನ!

**ಈ** ಮಧ್ಯೆ ಸಮಾಜವಾದಿ ಯುವಜನ ಸಭಾದ ಮುನೀರ್ ಬಾಷಾರವರು, ಅವರ ತಾಯಿ "ಬಚ್ಚಿಮ್ಮಾ"ರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು. ಅವರು ಎಂಪಿಎಂ ಕಂಪನಿ(ಮೈಸೂರು ಕಾಗದದ ಕಾರ್ಖಾನೆ) ಆಸ್ಪತ್ರೆಯಲ್ಲಿ ಕಾಂಪೌಂಡರ್ ಆಗಿ ಕೆಲಸ ಮಾಡುತ್ತಿದ್ದರು. ಅಚ್ಚ ಬಿಳಿ ಸೀರೆ ಉಟ್ಟ ತೆಳ್ಳಗಿನ ಮಹಿಳೆ. ತಲೆಗೂದಲನ್ನು ಸಾಪಾಗಿ ಬಾಚಿ, ಇಲಿಬಾಲದಂತೆ ಒಂದು ಜಡೆ ಹೆಣೆದ, ಸೊಂಟದಲ್ಲೊಂದು ಅಡಿಕೆ ಚೀಲ–ಅದರಲ್ಲಿ ಬಗೆ ಬಗೆಯ ಮಾತ್ರೆಗಳು, ಮನೆ ಬೀಗದ ಕೀಲಿ–ಕಾಲಿಗೆ ಹವಾಯಿ ಚಪ್ಪಲಿ ಮೆಟ್ಟ ಸರಬರ ನಡಿಗೆಯ ಉರ್ದು ಮಿಶ್ರಿತ ಕನ್ನಡ ಮಾತನಾಡುವ ಈಕೆ ನನಗೆ ಸಾಕುತಾಯಿಯಂತಾಗುವಳು ಎಂದು ಆಗ ಅನ್ನಿಸಿರಲೇ ಇಲ್ಲ.

ಮನೆಗೆ ಬಂದಾಕ್ಷಣವೇ, ಬಹಳ ದಿನಗಳ ಪರಿಚಯದಂತೆ ನನ್ನೊಡನೆ ಮಾತನಾಡುತ್ತಾ, "ಕ್ರಿಸ್‌ನಪ್ಪನಾ ನೋವು ಹೇಳುವುದಕ್ಕೆ ಆಗಲ್ಲ, ನೀನು ಮದುವೆಯಾಗಲ್ಲ ಅಂತ ಬೇಜಾರು ಮಾಡಿಕೊಂಡು ಊಟ–ಗೀಟ ಮಾಡದೆ, ರಾತ್ರೊರಾತ್ರಿ ಕ್ರಿಸನಪ್ಪ ಪೇಪರ್ ಟೌನ್ ನಮ್ಮ ಮನೆಗೆ ನಡಕೊಂಡೇ ಬಂದು ಬಿಡ್ತಾ ಇದ್ದ... ನಾನು, ಆಗ ಬಿಸಿಬಿಸಿ ಚಪಾತಿ ಮಾಡಿ, ಊಟ ಹಾಕ್ತಾ ಇದ್ದೆ. ನಾನು ಮುನೀರ್ ಇಬ್ರೂ ಸಮಾಧಾನ ಮಾಡ್ತಾ ಇದ್ವಿ" ಅಂತ ಹೇಳ್ತಾ "ನೀನು ನೀರು ಹಾಕ್ಕೊಂಡು ಎಷ್ಟು ದಿನ ಆಯ್ತು" ಅಂತ ಕೇಳಿದರು. ಅವರ ಅಕ್ಕನ ಮಗಳು ಗುಲ್ಜಾರ್ ಬೇಗಂ ವಿಐಎಸ್‌ಎಲ್(ವಿಶ್ವೇಶ್ವರಾಯ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆ)ನಲ್ಲಿ ಡಾಕ್ಟರ್ ಆಗಿದ್ದಾಳಂತೆಲೂ ಅವರ ಮನೆಗೆ ಹೋಗಿ ಚೆಕ್‌ಅಪ್ ಮಾಡಿಸಿಕೊಂಡು ಬರೋಣವೆಂದು ಹೇಳಿ ಹೋದರು. ಅದರಂತೆ ವಾರ ಬಿಟ್ಟು ಬಂದು ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋದರು. ಅವರು ನನ್ನನ್ನು ಪರೀಕ್ಷಿಸಿ, ನಾನು ಗರ್ಭಿಣಿ ಎಂದು ಹೇಳಿದರು. ನನಗೆ ಒಂದೆಡೆ ಸಂತಸವಾದರೂ, ನಮ್ಮ ಕಷ್ಟದ ಈ ದಿನಗಳಲ್ಲಿ ಇದು ಆಗಬಾರದ್ದಾಗಿತ್ತು ಎಂದೂ ಎನಿಸಿತು. ಆದರೆ ಹಾಗೆ ಹೇಳಲಿಲ್ಲವಷ್ಟೆ. ನನಗನ್ನಿಸಿದ ಈ ಭಾವನೆ ಕೃಷ್ಣಪ್ಪನಿಗೆ ಅನ್ನಿಸಿಯೇ ಇರಲಿಲ್ಲ ಎಂಬುದೂ, ಅವರು ಅದಕ್ಕಾಗಿ ಹಂಬಲಿಸುತ್ತಿದ್ದರೆಂಬುದೂ, ಅವರು ಮದುವೆಗೂ ಮುನ್ನ ಬರೆದ ಈ ಕವನದಿಂದ ತಿಳಿದು ಬರುತ್ತದೆ.

### ಬಿಳಿಯ ಕೂದಲು

**ಮೈಗೆ ಘಮಘಮ ಸಾಬೂನು ಹಚ್ಚಿ**
**ಖುಷಿಯಿಂದ ಸ್ನಾನ ಮಾಡಿ**
**ಕನ್ನಡಿಯ ಮುಂದೆ ತಲೆ ಬಾಚುವಾಗ**
**ಕೆನ್ನೆಯಂಚಿನಲ್ಲಿ ಸಾಲುಗಟ್ಟುತ್ತಿರುವ ಬಿಳಿ ಕೂದಲನ್ನು ಕಂಡು**
**ಸ್ನಾನದ ಹರ್ಷವೆಲ್ಲ ಹಾರಿಹೋಗಿ**
**ಮುಖ ವಿವರ್ಣವಾಗುತ್ತದೆ.**
**ಯೌವ್ವನದ ಬಯಕೆಗಳೆಲ್ಲ ಬಾಡಿ ಹೋದಂತಾಗಿ**
**ಓ ನಾನು ಮುದುಕನಾಗುತ್ತಿದ್ದೇನೆ.... ಮುದುಕನಾದೆ**
**ನನ್ನ ಮುದ್ದಿನ ಮಗಳು ಹೆಗಲೇರಿ**
**ಅಪ್ಪ, ಅಣ್ಣ ಎಂದು ಮುದ್ದಿನಿಂದ**
**ಕೆನ್ನೆಗೆ ಮುತ್ತಿಡುವ ಮೊದಲೇ**
**ಕೆನ್ನೆಗಳೆಲ್ಲ ಬಿಳಿ ಕೂದಲು ಕಾಣ ತೊಡಗಿವೆ**
**ಓ ಬೆಳೆಯ ತೊಡಗಿವೆ!**

ಅನಂತರದ ದಿನಗಳಲ್ಲಿ ಬಚ್ಚಿಮ್ಮಾ ಆಗಾಗ್ಗೆ ಬಂದು ನನ್ನ ಯೋಗಕ್ಷೇಮ ವಿಚಾರಿಸಿ, ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸುತ್ತಾ, ಬಸಿರು ಹೆಂಗಸರ ಬಗ್ಗೆ ಇರುವ ಲೋಕಾರೂಢಿ ಮಾತುಗಳನ್ನು ಹೇಳುತ್ತಿದ್ದರು. ಕೃಷ್ಣಪ್ಪನ ಬಳಿ 'ಬಸುರಿ ಹೆಂಗಸಿಗೆ ಏನೇನು ತಿನ್ನಲಿಕ್ಕೆ ಇಷ್ಟಾನೋ ತಂದುಕೊಡು' ಎಂದು ಹೇಳುತ್ತಿದ್ದರು. ಆದರೆ ನನಗ್ಯಾವ ಬಯಕೆಯೂ ಹುಟ್ಟಲೇ ಇಲ್ಲ. ಲೋಕಾರೂಢಿಯ 'ಬಯಕೆ'ಯ ಈ ಪದ ಬಳಸಿಕೊಂಡೇ ಎಷ್ಟೋ ಹೆಣ್ಣುಮಕ್ಕಳು ಇಲ್ಲ ಸಲ್ಲದ ಆಸೆ ವ್ಯಕ್ತಪಡಿಸಿ, ಕೊನೆಗದು ಈಡೇರದೆ ದುಃಖಿತರಾಗೋದನ್ನ ನಾನು ನೋಡಿದ್ದೆ. ಸದ್ಯ!



"ಬಚ್ಚಿಮ್ಮಾ"

ನನಗ್ಯಾವ ಬಯಕೆ ಆಗಲೇ ಇಲ್ಲವಲ್ಲವೆಂಬ ನೆಮ್ಮದಿ ಇದ್ದಿತು.

ಬಚ್ಚಿಮ್ಮಾ ವಾರದ ರಜೆಯ ದಿನ ಇದ್ದಾಗೊಮ್ಮೊಮ್ಮೆ ನಮ್ಮ ಮನೆಗೆ ಬರ್‍ತಾ ಇದ್ದರು. ಆಗೊಮ್ಮೆ, ನಾನು 'ನಿಮಗೆ ಬಚ್ಚಿಮ್ಮಾ ಅಂತ ಹೆಸರು ಹೇಗೆ ಬಂತು? ಮನೆಯಲ್ಲಿ ನಿಮ್ಮ ತಾಯಿ ತಂದೆ ಇಟ್ಟಿದ್ದಾ? ಪ್ರೀತಿಯಿಂದ ಕರೆದಿದ್ದಾ?' ಅಂತ ಕೇಳಿದ್ದೆ. 'ಇಂದ್ರಾ, ನಮ್ಮ ಮನೇಲಿ ನಂಗೆ ಸೈಪುನ್ನಿಸಾ ಅಂತ ಹೆಸರಿಟ್ಟಿದ್ರು. ನನ್ನ ಮಗ ಮುನೀರ್ ಬಚ್ಚಿಮ್ಮಾ ಅಂತ ಕರೀತಿದ್ದ. ಅದ್ಕೆ ಆ ಹೆಸರೇ ಖಾಯಂ ಆಯ್ತು' ಎಂದರು. ಬಚ್ಚಿಮ್ಮಾ ಅಂದರೆ 'ಮಕ್ಕಳ ತಾಯಿ'–ಎಷ್ಟೊಂದು ಮುದ ಕೊಡುವ ಹೆಸರು! ಹೆಸರಿನಂತೆಯೇ ಗುಣವುಳ್ಳಾಕೆ. ತನ್ನ ಸ್ನೇಹ ಸಂಪರ್ಕಕ್ಕೆ ಬಂದವರನ್ನೆಲ್ಲಾ ಜಾತಿಧರ್ಮದ ಕಟ್ಟಳೆ ಮೀರಿ ಸಂತೈಸಿದಾಕೆ, ನೋವಿಗೆ ಸ್ಪಂದಿಸುವ ಹೃದಯವಂತಿಕೆಯವಳದು. ಅಮ್ಮನ ಸಂಪರ್ಕವಿಲ್ಲದ ನನಗೆ, ಅಮ್ಮನಂತಯೇ ಈಕೆ ಸಲಹಿದರು. 'ಎತ್ತಣಿಂದೆತ್ತ ಸಂಬಂಧವಯ್ಯ!' ಎನಿಸುತ್ತದೆ. ಮುಸ್ಲಿಂ ಸಮುದಾಯದ ಸಂಪರ್ಕವಿಲ್ಲದೆಯೇ ಬೆಳೆದ ನನಗೆ, ಮುಸ್ಲಿಂ ಧರ್ಮದಾಕೆ ತಾಯಿ ಪ್ರೀತಿ, ಸ್ಪಂದನೆಯನ್ನು ಕೊಟ್ಟದ್ದು, ಜಾತ್ಯತೀತ ಮನೋಭಾವ ನನ್ನಲ್ಲಿ ಭದ್ರವಾಗಿ ನೆಲೆಯೂರಲು ಮೂಲ ಆಧಾರವಾಯಿತು.

ಕೂಸು ಹುಟ್ಟುವ ಮುನ್ನ ಕುಲಾವಿ ಎಂಬಂತೆ ಗರ್ಭಿಣಿ ಹೇಗೆ ಮುನ್ನೆಚ್ಚರಿಕೆ ವಹಿಸಬೇಕು ಎಂಬುದನ್ನು ತಿಳಿಸುತ್ತಾ, ನನ್ನ ಮಾನಸಿಕ ಒತ್ತಡವನ್ನು ಬಚ್ಚಿಮ್ಮಾ ಇಲ್ಲವಾಗಿಸಿದ್ದರು. ಕೃಷ್ಣಪ್ಪನವರಿಗೆ ಬಚ್ಚಿಮ್ಮಾ ಎಂದರೆ ಬಲು ಇಷ್ಟ. ಆಕೆ ಬಂದೊಡನೆ ಹೆಗಲ ಮೇಲೆ ಕೈ ಹಾಕಿ ಕರಕೊಂಡು ಬಂದು ಕೂರಿಸಿ, ಮಾತನಾಡುವರು. ಅವರು ನನ್ನನ್ನು ನೋಡಿಕೊಳ್ಳುವರು ಎಂಬುದೇ ಅವರಿಗೆ ಸಮಾಧಾನ. ಈಗಲೂ ೮೫ ವರ್ಷದ ಆ ತಾಯಿ ಬತ್ತದ ಪ್ರೀತಿಯ ಒಡಲ ಒರತೆ. ಕಣ್ಣು ಮಂಜಾದರೂ ಆಕೆಯ ಕರುಳಿನ ಕರೆ ದೂರವಾಣಿಯಲ್ಲಿ ನನ್ನನ್ನು ತಣಿಸುತ್ತಿರುತ್ತದೆ.

ಕೃಷ್ಣಪ್ಪ ಕಾಲಕಾಲಕ್ಕೆ ನನ್ನನ್ನು ನ್ಯೂಟೌನ್‌ನಲ್ಲಿದ್ದ ನಿರ್ಮಲಾ ಆಸ್ಪತ್ರೆಯ ಪ್ರಾಥಮಿಕ ಚಿಕಿತ್ಸಾ ಕೇಂದ್ರಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಇದೇ ವೇಳೆಯಲ್ಲೊಮ್ಮೆ ಒಂದು ವರ್ಷದ ಸಂಬಳ ಇವರಿಗೆ ಒಟ್ಟಿಗೇ ಬಂದಿತು. ಇಬ್ಬರಿಗೂ ಬಲು ಸಂತೋಷ. ಮರುದಿನ ಗ್ರಹಣ, ಆದರೂ ಇಬ್ಬರೂ ಬೆಳಿಗ್ಗೆಯೇ ಹೋಗಿ, ಗ್ಯಾಸ್ ಸ್ಟವ್ ಹಾಗೂ ಸಿಲೆಂಡರ್ ತಂದೆವು. ಗ್ರಹಣದ ದಿನ ಬಸಿರು ಹೆಂಗಸನ್ನ ಹೊರಗಡೆ ಓಡಾಡಿಸಿದ್ರಲ್ಲಾ ಅಂತ ಕೆಲವರು ಇವರನ್ನು ತರಾಟೆಗೆ ತಕ್ಕೊಂಡ್ರು, ಆದ್ರೆ ನನಗೆ ಗ್ರಹಣದ ಬಗ್ಗೆ ವೈಜ್ಞಾನಿಕ ಅರಿವು ಇದ್ದುದರಿಂದ, ಯಾವ ಮೂಢ ನಂಬಿಕೆಗಳೂ ಕಾಡಿಸದ್ದರಿಂದ, ನಾನೇ ಇವರೊಡನೆ ಹೊರಟಿದ್ದೆ ಎಂದು ಅವರಿಗೆಲ್ಲ ಹೇಳಿದ್ದೆ. ಕೃಷ್ಣಪ್ಪ ಇನ್ನೊಂದು ದಿನ ನನ್ನನ್ನು ಕರೆದುಕೊಂಡು ಹೋಗಿ ಐದಾರು ಸೀರೆಗಳನ್ನು ಕೊಡಿಸಿದರು. ಮೂರು ಸೀರೆಗಳಲ್ಲೇ ದಿನಗಳನ್ನು ನೂಕುತ್ತಿದ್ದ ನನಗೋ ಸಂಭ್ರಮ!

ಮದುವೆಗೆ ಮುನ್ನ ಲಂಗ–ರವಿಕೆ–ದಾವಣಿಯನ್ನೇ ಹೆಚ್ಚಾಗಿ ಬಳಸುತ್ತಿದ್ದ ನಾನು ಹಬ್ಬ ಹರಿದಿನಗಳಲ್ಲಿ ಮಾತ್ರ ಸೀರೆ ಉಡುತ್ತಿದ್ದವಳಿಗೆ ದಿನನಿತ್ಯ ಸೀರೆ ಉಡುವ ಪರಿಪಾಟಲು ಬಂದದ್ದು, ಮದುವೆಯ ನಂತರವೇ. ಆದರೆ ಪ್ರೀತಿ ಪ್ರೇಮದ ರಂಗು ಗುಂಗಿನಲ್ಲಿ ತೇಲಾಡುವ ಮನಕ್ಕೆ, ರಂಗು ರಂಗಿನ ಸೀರೆ ಉಟ್ಟು ಸಂಭ್ರಮಿಸುವಷ್ಟು ಸೀರೆಗಳೇ ಇರಲಿಲ್ಲ. ಠಾಕುಠೀಕಿನ ಸೂಟು ಬೂಟುಗಳು, ಗರಿಗರಿಯ ಹತ್ತಾರು ಪ್ಯಾಂಟು ಶರ್ಟುಗಳ ಒಡೆಯ ಕೃಷ್ಣಪ್ಪನಿಗೆ ಏನೆನ್ನಿಸಿತೋ, ಒಂದೇ ಬಾರಿಗೆ ನನಗೆ ಅಷ್ಟೊಂದು ಸೀರೆ ಕೊಡಿಸಿದರು. ಅವರು ಮದುವೆಯಂದು ತಂದ ಎರಡು ಸೀರೆಗಳು, ನಂತರ ಕೊಡಿಸಿದ ಈ ಐದಾರು ಸೀರೆಗಳು ಅವುಗಳ ಬಣ್ಣಗಳು ನನ್ನ ಮನಸ್ಸಿನಲ್ಲಿ ಇನ್ನೂ ಮಾಸದಂತಿವೆ. ಇಲ್ಲಿಯವರೆಗಿನ ನನ್ನ ಜೀವನದಲ್ಲಿ ನೂರಾರು ಸೀರೆಗಳನ್ನು ನಾನೇ ಕೊಂಡು ಉಟ್ಟಿದ್ದರೂ, ನನಗವುಗಳ ನೆನಪುಗಳೇ ಉಳಿದಿಲ್ಲ.



ಹೀಗಿರುತ್ತಲೊಮ್ಮೆ ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನವರು, ಕವಿ ಗೋಪಾಲಕೃಷ್ಣ ಅಡಿಗರನ್ನು ಒಂದು ಸಮಾರಂಭಕ್ಕೆ, ಭದ್ರಾವತಿಗೆ ಕರೆಯಿಸಿದ್ದರು. ಆ ಸಮಾರಂಭ ನ್ಯೂಟೌನ್ ಬಾಲಕಿಯರ ಪ್ರೌಢಶಾಲೆಯ ಮುಂಭಾಗದ ಆಟದ ಮೈದಾನದಲ್ಲಿ ಆಯೋಜಿಸಲಾಗಿತ್ತು. ಆ ಸ್ಥಳ ನಮ್ಮ ಮನೆಗೆ ತೀರಾ ಸಮೀಪದಲ್ಲಿತ್ತು. ಆಗ ನನಗೆ ನಾನ್ಯಾಕೆ ಅವರನ್ನೊಮ್ಮೆ ಭೇಟಿಯಾಗಿ ಮನೆಗೆ ಕರೆಯಬಾರದು ಎಂಬ ಆಲೋಚನೆ ಬಂದು, ಕೃಷ್ಣಪ್ಪನನ್ನು ಕೇಳಿದೆ. 'ಆಯ್ತು, ನಿನ್ನಿಷ್ಟ' ಎಂದರು. ಗೋಪಾಲಕೃಷ್ಣ ಅಡಿಗರು ನಮ್ಮ ತಾಯಿಯ ಚಿಕ್ಕಪ್ಪ. ನನಗೆ ಅಜ್ಜನಾಗಬೇಕು. ಅಲ್ಲದೆ ಸಾಗರದ ಲಾಲ್ ಬಹದ್ದೂರ್ ಕಾಲೇಜಿನಲ್ಲಿ ಅಡಿಗರು ಪ್ರಿನ್ಸಿಪಾಲರಾಗಿದ್ದಾಗ ಕೃಷ್ಣಪ್ಪ ಅಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸ ಮಾಡಿದ್ದರು. ಹೀಗೆ ನಮ್ಮ ಈ ಅಜ್ಜನವರಿಗೆ ಕೃಷ್ಣಪ್ಪನೂ ತೀರಾ ಪರಿಚಿತರೇ. ಆದ್ದರಿಂದ ಅವರನ್ನೊಮ್ಮೆ ಮನೆಗೆ ಆಹ್ವಾನಿಸೋಣವೆಂದು ನಾನೂ ಆ ಸಮಾರಂಭಕ್ಕೆ ಹೋಗಿದ್ದೆ.

ಸಭೆ ಮುಗಿಯುವವರೆಗು ಕಾದುಕುಳಿತಿದ್ದೆ. ಸಂಜೆ ಐದರ ಸುಮಾರಿಗೆ ಸಭೆ ಮುಗಿದು ಅಡಿಗರು ಹೊರಟರು. ಅಲ್ಲೇ ಕಾದಿದ್ದ ನಾನು ಅವರಿಗೆ ವಂದಿಸಿ, ಅವರ ಮನೆಯವರ ಕ್ಷೇಮ ಸಮಾಚಾರ ವಿಚಾರಿಸಿ, ನಂತರ ನಮ್ಮ ಮನೆಗೆ ಬರಬೇಕೆಂದು ಕೇಳಿಕೊಂಡೆ. ಅವರು, ತಾವು ಈಗಲೇ ಊರಿಗೆ ಹೊರಡಬೇಕಾಗಿದೆ ಎಂದು ಹೇಳಿದರು. ನನ್ನ ಮದುವೆಯ ವಿಷಯವಾಗಲೀ, ಈ ಮದುವೆಯಿಂದ ಕುಟುಂಬದಲ್ಲಾದ ನೋವು–ಸಂಕಟಗಳ ಬಗ್ಗೆಯಾಗಲಿ, ಕೃಷ್ಣಪ್ಪನ ಬಗ್ಗೆಯಾಗಲೀ ಏನನ್ನೂ ವಿಚಾರಿಸದೆ ಹೊರಟೇ ಬಿಟ್ಟರು. ನನಗೆ ಭ್ರಮನಿರಸನವಾದಂತಾಯಿತು. ಬಂದ ದಾರಿಗೆ ಸುಂಕವಿಲ್ಲದಂತೆ, ನಾನು ಮನೆಗೆ ಹಿಂತಿರುಗಿದ್ದೆ.

ದಾರಿಯಲ್ಲಿ ಸಾಗುತ್ತಿರುವಾಗ, "ಕಟ್ಟುವೆವು ನಾವು ಹೊಸ ನಾಡೊಂದನು, ರಸದ ಬೀಡೊಂದನು" ಎಂದು ಕವನ ಬರೆದರಷ್ಟೇ ಸಾಲದು, ವಾಸ್ತವ ನೆಲೆಯಲ್ಲಿ "ಮನಸ್ಸುಗಳನ್ನು ಕಟ್ಟುವುದು" ಮುಖ್ಯ ಎಂಬುದು ಈ ಕವಿಗಳಿಗೇಕೆ ಹೊಳೆಯುತ್ತಿಲ್ಲ? ಶಿವರಾಮ ಕಾರಂತರು ಮತ್ತು ಅನಂತಮೂರ್ತಿಯವರು ನನ್ನ ಮದುವೆಯ ಸಂದರ್ಭದಲ್ಲಿ ಬರೆದ ಪತ್ರಗಳಲ್ಲಿ ನಮ್ಮ ಜಾತ್ಯತೀತ ಮದುವೆಗೆ ಪ್ರೋತ್ಸಾಹಿಸಿದ ರೀತಿಗೂ, ಕಣ್ಣೆದುರೇ ಬಂದಾಗಲೂ ಉಪಚಾರಕ್ಕೂ ಸ್ಪಂದಿಸದ ಈ ಕವಿಯ ಕವಿತೆಗೂ, ನಿಜ ವರ್ತನೆಗೂ, ತಾಳಮೇಳ ಕಾಣಿಸದಲ್ಲಾ ಎಂದು ಮನಸ್ಸು ಖಿನ್ನವಾಗತೊಡಗಿತ್ತು. **(ಮುಂದುವರೆಯುವುದು)**

**ಪ್ರಿಯ ಓದುಗರೇ,**

**'ಹೊಸ ಮನುಷ್ಯ' ಪತ್ರಿಕೆಯನ್ನು ರಾಜ್ಯದ ಎಲ್ಲ ಸರ್ಕಾರಿ ಗ್ರಂಥಾಲಯಗಳಿಗೂ ತರಿಸಲು ಗ್ರಂಥಾಲಯ ಇಲಾಖೆಯ ನಿರ್ದೇಶಕರಿಂದ ದಿ. ೫.೪.೨೦೧೩ರ ಸಂ: ಸಾಗ್ರಂಇ:ನಿಕ/ಪುಖವಿ/ನಿಕಾಚಂ/೦೧/೯೫/೨೦೧೨-೧೩ ಸುತ್ತೋಲೆಯ ಮೂಲಕ ಸೂಚಿಸಲಾಗಿದೆ. ಪತ್ರಿಕೆ ಕೂಡಾ ಎಲ್ಲ ಜಿಲ್ಲಾ ಮುಖ್ಯ ಗ್ರಂಥಾಲಯಾಧಿಕಾರಿಗಳಿಗೆ ಈ ಸಂಬಂಧ ಮನವಿ ಸಲ್ಲಿಸಿದೆ. ಆದರೂ ಒಂದೆರಡು ಜಿಲ್ಲೆಗಳ ಗ್ರಂಥಾಲಯಗಳ ಹೊರತಾಗಿ ಇನ್ನಾವ ಜಿಲ್ಲಾ ಅಥವಾ ನಗರ ಕೇಂದ್ರ ಗ್ರಂಥಾಲಯಗಳಿಂದಲೂ ಪತ್ರಿಕೆಗೆ ಬೇಡಿಕೆ ಬಂದಿಲ್ಲ. ಜಿಲ್ಲಾ ಕೇಂದ್ರಗಳಲ್ಲಿನ ಅಭಿಮಾನಿ ಓದುಗರು ತಮ್ಮ ನಗರಗಳ ಮುಖ್ಯ ಗ್ರಂಥಪಾಲಕರನ್ನು ಭೇಟಿ ಮಾಡಿ ಪತ್ರಿಕೆ ತರಿಸಲು ಆಗ್ರಹಿಸಿದರೆ ಬೇಡಿಕೆ ಬರಬಹುದು. ಆದುದರಿಂದ ಓದುಗರು ಪತ್ರಿಕೆಯ ಮೇಲಿನ ಪ್ರೀತಿಯಿಂದ ಈ ಪ್ರಯತ್ನ ಮಾಡಬೇಕಾಗಿ ಕೋರುವೆ–ಸಂ**

# ಸಮಕಾಲೀನ: ಬದಲಾಗುತ್ತಿರುವ ಮಹಿಳಾ ಲೋಕ



ಮಹಿಳೆಯರ ಮೇಲಿನ ಅತ್ಯಾಚಾರ ಮತ್ತು ಮಕ್ಕಳೊಂದಿಗೆ ತಾಯಂದಿರ ಆತ್ಮಹತ್ಯೆ ಇವು ಇತ್ತೀಚಿನ ದಿನಗಳಲ್ಲಿ ದಿನ ನಿತ್ಯದ ಸುದ್ದಿಯಾಗುತ್ತಿವೆ. ಆದರೆ ಸಮಾಜ ಅತ್ಯಚಾರಗಳ ಬಗ್ಗೆ ತಲೆ ಕೆಡಿಸಿಕೊಂಡಷ್ಟು ಆತ್ಮಹತ್ಯೆಗಳ ಬಗ್ಗೆ ತಲೆ ಕೆಡಿಸಿಕೊಂಡಂತಿಲ್ಲ. ಆದರೆ ಇವೆರಡೂ ನಮ್ಮ ಸಮಾಜವನ್ನು ಬಾಧಿಸತೊಡಗಿರುವ ಒಂದೇ ರೋಗದ ಎರಡು ಪರಿಣಾಮಗಳಾಗಿರಬಹುದು ಎಂಬ ಅನುಮಾನ ಕೂಡ ನಮ್ಮ ಸಮಾಜಕ್ಕೆ ಬಂದಂತಿಲ್ಲ. ಹಾಗಾಗಿಯೇ ಅತ್ಯಾಚಾರಗಳ ವಿರುದ್ಧ ಏಕಮುಖದ ಕಾನೂನಾತ್ಮಕ ಹೋರಾಟ ನಡೆದಿದೆಯೇ ಹೊರತು, ಅದು ಈಗ ದಿನ ನಿತ್ಯದ ಸಾಮಾನ್ಯ ಸುದ್ದಿಯಾಗಿ, ದಿನೇ ದಿನೇ ಮಾಹಿತಿ ಎಂಬ ರಾಕ್ಷಸ ರಾಶಿಯ ದೊಡ್ಡ ತಿಪ್ಪೆಯಂತಾಗುತ್ತಿರುವ ನಮ್ಮ ಪ್ರಜ್ಞೆಯಾಳದಲ್ಲಿ ಕಳೆದು ಹೋಗುವ ಅಪಾಯದ ಬಗ್ಗೆ ಚಿಂತೆ-ಆತಂಕಗಳ ಸುಳಿವೇ ಇಲ್ಲದಂತಾಗಿದೆ.

ತೀವ್ರ ಗತಿಯಲ್ಲಿ ಬದಲಾಗುತ್ತಿರುವ ನಮ್ಮ ಬದುಕಿನ ಕ್ರಮ ಮತ್ತು ಜೀವನ ದೃಷ್ಟಿಯಿಂದ ಇಂದು ಹೆಚ್ಚು ಬಾಧಿತರಾಗುತ್ತಿರುವವರು ಮಹಿಳೆಯರು ಮತ್ತು ಮಕ್ಕಳು ಎಂದು ಕಾಣುತ್ತದೆ. ಜಾಗತೀಕರಣ ರೂಪದ ಅತ್ಯಾಧುನಿಕತೆ ನಮ್ಮ ಮಹಿಳಾ ಲೋಕದ ಬದುಕಿನ ಲಂಗರುಗಳನ್ನೇ ನಿರ್ಣಾಯಕವಾಗಿ ಸಡಿಲಿಸಿ ಅದನ್ನು ಹೊಸ ಅಲ್ಲೋಲ-ಕಲ್ಲೋಲಗಳಿಗೆ ಈಡು ಮಾಡಿದಂತಿದೆ. ತಮ್ಮ ಪಾಲಿನ ತೀವ್ರ ಗತಿಯ ಬದಲಾವಣೆಯ ಈ ದಿನಗಳನ್ನು ಮಹಿಳಾ ಲೋಕ ಅರ್ಥ ಮಾಡಿಕೊಳ್ಳುತ್ತಿರುವ ಮತ್ತು ಎದುರಿಸಲು ಸಜ್ಜಾಗುತ್ತಿರುವ ಬಗೆಗಳನ್ನು ಇಲ್ಲಿ ಮೂರು ನೆಲೆಗಳಲ್ಲಿನ ಮೂರು ಲೇಖನಗಳ ಮೂಲಕ ಗಮನಿಸುವ ಪ್ರಯತ್ನ ಮಾಡಲಾಗಿದೆ. ಓದಿ, ಬರೆಯಿರಿ-ಸಂ.

## ಜಾಗತೀಕರಣದ ಸುಳಿಯಲ್ಲಿ ಮಹಿಳೆ

-ಟಿ.ಎಲ್. ರೇಖಾಂಬ



**ನ**ಮ್ಮ ತಾಯಿಯ ತಂದೆಗೆ ೯೩ವರ್ಷ. ತಾಯಿಯ ತಾಯಿಗೆ ೮೭ವರ್ಷ. ನಾನು ಕಂಡಂತೆ ಅಜ್ಜಿಗೆ ತುಂಬಾ ಜೀವನ ಪ್ರೀತಿ. ಅವರ ಜೀವನೋತ್ಸಾಹವನ್ನು ಇಡಿಯ ಕುಟುಂಬದ ಮತ್ಯಾರಲ್ಲೂ ನಾನು ಕಂಡಿಲ್ಲ. ಇತ್ತೀಚೆಗೆ ಈ ಇಳಿ ವಯಸ್ಸಿನಲ್ಲಿ ಅಜ್ಜ ಅಜ್ಜಿಯನ್ನು ಹೊಡೆದು ಅಜ್ಜಿ ಕಣ್ಣಿಗೆ ವಾಸಿಯಾಗದಂತಹ ಘಾಸಿಯಾಯಿತು. ಅಜ್ಜನ ಮೇಲೆ ಪ್ರೀತಿಯಿದ್ದರೂ ಈ ಗಂಡು ಸಂತಾನದ ಮೇಲೆ ಸಿಟ್ಟೂ ಬಂತು. ಯಾವತ್ತೂ ಹೆಂಡತಿಯ ಬಗ್ಗೆಯಾಗಲೀ ಮಕ್ಕಳ ಬಗ್ಗೆಯಾಗಲೀ ಯೋಚಿಸದ ಇವರಿಗೆಲ್ಲ ಹೀಗೆ ಹಿಂಸಿಸುವ ಅಧಿಕಾರ ಕೊಟ್ಟವರು ಯಾರು? ಇಷ್ಟು ವರ್ಷ ಇವನ್ನೆಲ್ಲ ಸಹಿಸಿಕೊಂಡು ಈಗಲೂ ಕಣ್ಣಲ್ಲೇ ಪ್ರೀತಿ ತುಳುಕಿಸುವ ಅಜ್ಜಿಯ ಮೇಲೆ ನನಗೆ ಪ್ರೀತಿ ಗೌರವಗಳು ನೂರು ಪಟ್ಟು ಹೆಚ್ಚಾಯಿತು. ಮನೆಯಲ್ಲಿ ಮಕ್ಕಳೋ ಸೊಸೆಯಂದಿರೋ ಯಾರಾದರೊಬ್ಬರು ಬಸುರಿಯರಿರುತ್ತಿದ್ದು, ಹುಟ್ಟುವ ಹೊಸ ಜೀವದ ಬಗೆಗೆ ವಿಶೇಷವಾಗಿ ಸಂಭ್ರಮಿಸುತ್ತಿದ್ದ, ಮೊಮ್ಮಕ್ಕಳು ಬಂದಾಗಲೆಲ್ಲ ಮೈಯೆಲ್ಲ ಪ್ರೀತಿಯಾಗಿ ತುತ್ತಿಡುತ್ತಿದ್ದ, ಈಗಲೂ ಮೊಮ್ಮಕ್ಕಳು ಹೆತ್ತಾಗ ಅದೆಷ್ಟು ಕಷ್ಟವಾದರೂ ಬಂದು ಮಗುವನ್ನು ಎತ್ತಿ ಮುದ್ದಿಡುವ ಅಜ್ಜಿಯನ್ನು ನೆನೆದು ನಾವೆಲ್ಲ ಎಲ್ಲೋ ಕಳೆದುಹೋಗಿದ್ದೇವೆಂದು ತೀವ್ರವಾಗಿ ಅನಿಸಹತ್ತಿತು.

ಅಮ್ಮ ಹೇಳುತ್ತಿದ್ದುದು ನೆನಪಿದೆ. ಎರಡನೇ ಬಾರಿಗೆ ಹೆಣ್ಣು ಮಗುವಿಗೆ ಜನ್ಮವಿತ್ತಾಗ ಗಂಡನಾದಿಯಾಗಿ ಯಾರೂ ನೋಡಲು ಬಾರದಿದ್ದುದು, ಗಂಡ ಹೆಚ್ಚೂ ಕಡಿಮೆ ಹೆಂಡತಿಯನ್ನು ಬಿಟ್ಟೇಬಿಡುವ ಯೋಚನೆ ಮಾಡಿದ್ದುದು, ಮಡಿ ಹೆಂಗಸೊಬ್ಬರು ಆಪದ್ಭಾಂದವರಾಗಿ ಬಂದು ಅಮ್ಮನನ್ನು ಆಸ್ಪತ್ರೆಯಲ್ಲಿ ನೋಡಿಕೊಂಡದ್ದು ಇತ್ಯಾದಿ. ಆಗೆಲ್ಲ ಹೆಣ್ಣು ಸಂಪೂರ್ಣವಾಗಿ ಗಂಡಿನ ಅಧೀನಳಾಗಿ ಇರಬೇಕಾದ ಪರಿಸ್ಥಿತಿ ಇತ್ತು. ತವರು ಮನೆಯಲ್ಲಿ ತಂದೆಯ ಅಧಿಕಾರ ಮತ್ತು ಮದುವೆಯಾದ ಮೇಲೆ ಗಂಡನ ಅಧಿಕಾರಕ್ಕೊಳಪಟ್ಟು ಯಾವ ಆಯ್ಕೆಯ ಸ್ವಾತಂತ್ರ್ಯವೂ ಇಲ್ಲದೇ ಇರಬೇಕಾಗಿತ್ತು. ಫುಟ್ಬಾಲ್ ಚೆಂಡಿನ ಹಾಗೆ ಅಲ್ಲಿಂದ ಒದೆಸಿಕೊಂಡರೆ ಇಲ್ಲಿಗೆ, ಇಲ್ಲಿಂದ ಒದೆಸಿಕೊಂಡರೆ ಅಲ್ಲಿಗೆ, ಇಬ್ಬರೂ ಒದ್ದರೆ ಆವರಣದಿಂದ ಹೊರಗೆ! ಆಗೆಲ್ಲ ಅಜ್ಜಿಗೆ ಸಂಬಂಧಗಳೆಂದರೆ ಇಷ್ಟೇಯೇ ಎನಿಸುತ್ತಿತ್ತಂತೆ. ಇನ್ನು ವಿಧವೆಯರ ಪಾಡಂತೂ ನಾಯಿ ಬಾಳಿಗಿಂತಲೂ ಕಡೆ! ಸತ್ತ ಮೇಲೆ ಮೋಕ್ಷ ಸಂಪಾದಿಸಲು ಗಂಡು ಮಗ ಬೇಕು. ಗಂಡು ಮಗ ದುಡಿದು ಸಾಕಬೇಕಾದವನು. ಹೆಣ್ಣು ದೊಡ್ಡ ಹೊರೆ. ಮದುವೆ ಮಾಡಿ



ಸಾಗಹಾಕುವುದೆಂದರೆ ಜೀವನದ ಬಹುದೊಡ್ಡ ಸವಾಲು. ಆ ಕಾಲಕ್ಕೆ ಹೆಣ್ಣು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಪುರುಷನನ್ನೇ ನಂಬಿ ಬದುಕುವ ಕುರಿ ಅಷ್ಟೇ.

ಯಾಕೆ ಹೀಗೆ? ಇದರಲ್ಲಿ ಹೆಣ್ಣುಮಕ್ಕಳ ತಪ್ಪಾದರೂ ಏನು? ಎನಿಸದೇ ಇರಲಿಲ್ಲ. ಆದರೂ ನಮ್ಮ ತಲೆಮಾರಿನ ಹೊತ್ತಿಗೆ ನಮಗೆ ಸಿಗುತ್ತಿದ್ದ ಶಿಕ್ಷಣ ಮತ್ತು ತಕ್ಕಮಟ್ಟಿಗಿನ ಸ್ವಾತಂತ್ರ್ಯ ಅದನ್ನು ಮರೆಸುತ್ತಿತ್ತು. ಭ್ರಮಾಲೋಕದಲ್ಲಿದ್ದ ನಾವುಗಳು ಗಂಡು ಧೈರ್ಯವನ್ನು ಬೆಳೆಸಿಕೊಳ್ಳುತ್ತಾ ಬೆಳೆಯುತ್ತಾ ಹೋದಂತೆ ಹೆಣ್ಣು ಮಕ್ಕಳು ಕೆಲಸಕ್ಕೆ ಸೇರಿ ದುಡಿದು ತರುತ್ತಿದ್ದುದನ್ನು ನೋಡುತ್ತಿದ್ದೆವು. ಅದು ಯಾವ ರೀತಿ ಯಾರಿಗೆ ಉಪಯೋಗವಾಗುತ್ತಿತ್ತೋ? ಅದೇನೇ ಇರಲಿ, ಅಂತೂ ಹೆಣ್ಣಿನ ಮದುವೆ ವಯಸ್ಸೂ ಮುಂದಕ್ಕೆ ಹೋಗುತ್ತಾ ಬಂತು. ಹೀಗೇ ಕೆಲವು ಬದಲಾವಣೆಗಳಾಗುತ್ತಾ ಬಂದರೂ ಕುಟುಂಬದೊಳಗೆ ಹೆಣ್ಣಿಂದ ಅಪೇಕ್ಷಿಸುತ್ತಿದ್ದ ನಡವಳಿಕೆಗಳು ಮಾತ್ರ ಬದಲಾಗಲಿಲ್ಲ. ಎಂದಿನಂತೆಯೇ ಅಡುಗೆ ಕಲಿಯಬೇಕು, ಸಿದ್ಧ ಮಾದರಿಯ ಉಡುಗೆಗಳನ್ನೇ ತೊಡಬೇಕು, ಗಂಡಸಿನೊಂದಿಗೆ ಕಡಿಮೆ ಮಾತನಾಡಬೇಕು ಇತ್ಯಾದಿ ಕಟ್ಟಳೆಗಳೇ! ಹೆಣ್ಣು ಕುಟುಂಬಕ್ಕೆ ಮಾತ್ರ ಸೀಮಿತ ಎಂಬ ಸಂಪ್ರದಾಯದಿಂದ ಅಂತೂ ಹೊರಗೆ ದುಡಿಯಬಲ್ಲೆವು ಎಂಬ ಅರಿವು ಮೂಡುವ ಹೊತ್ತಿಗೆ ಮದುವೆಯಾಗಿರುತ್ತಿತ್ತು.

ದುಡಿಯಲು ಹೋಗಿ ಕುಟುಂಬವನ್ನು ನಿರ್ಲಕ್ಷ್ಯ ಮಾಡುತ್ತಾಳೆ ಎಂಬ ಭಾವನೆ ಬೆಳೆದು ಹೆಣ್ಣು ಇನ್ನೂ ಹೆಚ್ಚಿನ ಹಿಂಸೆಗೆ ಒತ್ತಡಕ್ಕೆ ಸಿಕ್ಕಿದ್ದು ನಿಜ. ದುಡಿಮೆಯ ಸ್ಥಳಗಳಲ್ಲೂ ಮಹಿಳೆಯ ಕಷ್ಟಗಳನ್ನೇನೂ



ಅರ್ಥಮಾಡಿಕೊಳ್ಳುತ್ತಿರಲಿಲ್ಲ. ಮಕ್ಕಳನ್ನು ಹೊರುವ, ಹೆರುವ ಪಾಲಿಸುವ ಆನಂದದಾಯಕ ಜೈವಿಕ ಕ್ರಿಯೆಯಲ್ಲಿಯೂ ಸಂತೋಷ ಪಡಲಾಗದೇ ದುಡಿಮೆಯ ಒತ್ತಡಕ್ಕೆ, ಮನೆಯ ಗಂಡಸರ ಅಸಹಕಾರಕ್ಕೆ ಸಿಕ್ಕು ನಲುಗುವಂತಾಯಿತು. ಹಾಗೇ ಹೆಣ್ಣಿಗೆ ಪಾಪಪ್ರಜ್ಞೆ ಹುಟ್ಟಿಸುವಲ್ಲಿ ಪುರುಷ ಜಗತ್ತು ಸಫಲವಾಯಿತು ಕೂಡ. ಕೌಟುಂಬಿಕ ದೌರ್ಜನ್ಯವೆಂಬುದು ಯಾವ ಕಾನೂನಿಗೂ ಸಿಗದ, ಯಾರ ಕಣ್ಣಿಗೂ ಕಾಣದ(ಕಾಣಗೊಡದ ಹೆಣ್ಣಿನ ಗುಣದಿಂದಾಗಿಯೂ) ಹೆಣ್ಣನ್ನು ನಿಯಂತ್ರಿಸುವ ಸುಲಭ ಸಾಧನವಾಯಿತು. ಮನೆಯ ಮರ್ಯಾದೆಯನ್ನು ಕಾಪಾಡುವ, ಮಕ್ಕಳನ್ನು ಜೋಪಾನ ಮಾಡುವ, ದುಡಿಮೆಯಲ್ಲೂ ನೆರವಾಗುವ ಜವಾಬ್ದಾರಿಗಳೆಲ್ಲ ಹೆಣ್ಣಿನ ತಲೆಗೆ ಹೊರಿಸಲಾಯಿತು. ಒಟ್ಟಿನಲ್ಲಿ ಅಂದಿನಂದ ಇಂದಿನವರೆಗೆ ನಮ್ಮ ಪರಿಸ್ಥಿತಿ ಬಾಣಲೆಯಿಂದ ಬೆಂಕಿಗೆ ಎಂಬಂತೆಯೇ!

ಇಷ್ಟೆಲ್ಲಾ ಆದರೂ ಹೇಗೋ ಸಾವರಿಸಿಕೊಂಡು ಬಿಡುಗಡೆಯ ನಾನಾ ದಾರಿಗಳನ್ನು ಹುಡುಕಿಕೊಳ್ಳುತ್ತಾ ಸಾಧನೆಯ ಮಾರ್ಗಗಳನ್ನು ಕಂಡುಕೊಳ್ಳುತ್ತಾ ಸಾಗಿರುವಾಗ ಜಾಗತೀಕರಣ ಉದಾರೀಕರಣಗಳೆಂಬ ಮಾಯಾಜಿಂಕೆಗಳು ಸುತ್ತ ಸುಳಿಯಲಾರಂಭಿಸಿವೆ! ಬಿಡುಗಡೆಯ ಅವಕಾಶವಿದೆಂದು ಭಾವಿಸಿದ ಮಹಿಳೆ ಇಂದು ಸಿಕ್ಕಿರುವುದೊಂದು ರಾಕ್ಷಸ ಲೋಕದ ಹಿಡಿತಕ್ಕೆ. ಖಾಸಗೀ ಉದ್ಯಮಗಳು ಅಂಕೆಯಿಲ್ಲದೇ ಬೆಳೆಯಲು ಅವಕಾಶ ಕೊಟ್ಟ ಕಾರಣ ಮಹಿಳೆಗೆ ದುಡಿಯಲು ಹೆಚ್ಚಿನ ಅವಕಾಶಗಳು ಸಿಕ್ಕಿದ್ದು ಖಾಸಗೀ ಕ್ಷೇತ್ರದಲ್ಲೇ. ಖಾಸಗೀ ಅಂದ ಮೇಲೆ ವರ್ಷಗಟ್ಟಲೆ ನಡೆದ ಚಳುವಳಿ ಹೋರಾಟಗಳ ಫಲವಾಗಿದ್ದ ಸೇವಾ ನಿಯಮಗಳನ್ನು ಗಾಳಿಗೆ ತೂರಲು ಅವಕಾಶ ಎಂದೇ ಆಗಿದೆಯಲ್ಲವೇ? ಅಲ್ಲಿಂದ ಶುರುವಾದದ್ದು ಸಾರ್ವಜನಿಕವಾಗಿ ಮಹಿಳೆಯನ್ನು ಮೂರ್ತ ಮತ್ತು ಅಮೂರ್ತ ನೆಲೆಗಳೆರಡರಲ್ಲೂ ಶೋಷಿಸುವ ಕೆಲಸ. ಖಾಸಗಿ ವಲಯ ತನ್ನ ಉತ್ಪನ್ನಗಳಿಗೆ ಗಿರಾಕಿಗಳನ್ನು ಸೆಳೆಯಲು ಮೊದಲು ಹೆಣ್ಣನ್ನು ಮಾರಾಟದ ಸರಕಾಗಿಸಿತು. ಕ್ರಮೇಣ ದುಡಿಯುವ ಮಾರ್ಗ ಯಾವುದಾದರೇನು ಎಂದು ಕೇಳುತ್ತಾ ತನ್ನ ಸ್ವಾರ್ಥದಲ್ಲಿ ಶಾಮೀಲಾಗಿಸಿಕೊಂಡಿತು. ಸಾಧ್ಯವಾದ ಎಲ್ಲ ನೆಲೆಗಳಲ್ಲೂ ಮಹಿಳೆಯ ದೈಹಿಕತೆಯನ್ನು ಹಿಂಜುತ್ತಾ ಹೋಗಿ ಹೆಣ್ಣು ತನಗೆ ಗೊತ್ತಿಲ್ಲದಂತೆಯೇ ತನ್ನತನವನ್ನು ತಾನೇ ಮೀರುವ ಅನಿವಾರ್ಯ ಸ್ಥಿತಿಯನ್ನು ಸೃಷ್ಟಿಸಿತು. ನಮ್ಮ ಶಿಕ್ಷಣ ಕೊಟ್ಟಿದ್ದು ಪದವಿಗಳನ್ನೇ ಹೊರತು ಜೀವನ ಶಿಕ್ಷಣವನ್ನಲ್ಲವಲ್ಲ? ಅವಳೂ ಸಮೂಹದ ಮನುಷ್ಯಳೇ ಅಲ್ಲವೇ? ಎಲ್ಲಿಯವರೆಗೆ ಎಲ್ಲವನ್ನೂ ಸಹಿಸಲು ಸಾಧ್ಯ? ರೈತರ ಆತ್ಮಹತ್ಯೆಗಳನ್ನು ಮೀರಿಸುವಂತೆ ಹೆಣ್ಣು ಮಕ್ಕಳ ಆತ್ಮಹತ್ಯೆಗಳು ಸಾಲು ಸಾಲಾಗಿ ವರದಿಯಾಗುತ್ತಿವೆ. ಅದೂ ತನ್ನದೇ ಮಕ್ಕಳ ಸಮೇತ ನೀರಿಗೆ ಹಾರುವುದು, ವಿಷವನುಣಿಸುದು! ಎಲ್ಲಿ ಹೋಯಿತು ಆ ನನ್ನಜ್ಜಿಯ ಜೀವನ ಪ್ರೀತಿ? ಬದುಕೆಂದರೆ ದುಡಿಮೆ ಮಾತ್ರವೇ? ಮನಸ್ಸು ತಲ್ಲಣಗೊಳ್ಳುತ್ತದೆ.

ಇವತ್ತು ಬೆಂಗಳೂರೆಂಬ ಮಾಯಾನಗರಿಯಲ್ಲೇ ಅತಿ ಹೆಚ್ಚಿನ ವಿವಾಹ ವಿಚ್ಛೇದನಗಳಾಗುತ್ತವೆ. ಬೆಂಗಳೂರೇನೂ ಈಗ ನಮಗೆ ಬಹಳ ದೂರವಿಲ್ಲ. ಇದನ್ನು ಸ್ತ್ರೀ ಸ್ವಾತಂತ್ರ್ಯ ಎಂದೇನೂ ಕರೆಯಬೇಕೆನಿಸುವುದಿಲ್ಲ ನನಗೆ. ಸ್ತ್ರೀವಾದವು ಸ್ತ್ರೀತನದವಾದವೆಂದೇ ನಾನು ತಿಳಿಯುತ್ತೇನೆ. ಜೀವ ಕಾರುಣ್ಯವನ್ನು ಉಳಿಸಿಕೊಂಡೂ, ನಮ್ಮ ಅರ್ಥಪುರುಷನ ಪ್ರಾಮುಖ್ಯತೆಯನ್ನು ಮನಗಂಡೂ, ಅರ್ಥದೊಂದಿಗೆ ಅರ್ಥವನ್ನು ಕೂಡಿಸಿಕೊಂಡು ಸಮವಾಗಿಸುವ ಕಠಿಣ ದಾರಿಯಲ್ಲಿ ಆಂತರಿಕವಾಗಿಯೇ ಹೋರಾಡಬೇಕಿದ್ದ ಮಹಿಳೆ ನಾನೇನು ಕಡಿಮೆ ಎಂಬ ಹಮ್ಮನ್ನೂ, ಗಂಡಿನ ಬಗ್ಗೆ ತಿರಸ್ಕಾರವನ್ನೂ, ದ್ವೇಷವನ್ನೂ ಬೆಳೆಸಿಕೊಳ್ಳುತ್ತಾ ಸಾಗುತ್ತಿರುವಳೇ? ಎಂದು ಅನುಮಾನವಾಗುತ್ತದೆ ನನಗೆ. ಏಕೆ ಹೀಗಾಯಿತು? ಪುರುಷ ಜಗತ್ತು ಇದನ್ನು ಹೇಗೆ ಗ್ರಹಿಸುತ್ತಿದೆ? ಇತ್ತೀಚಿನ ಅತ್ಯಾಚಾರಗಳ ವರದಿಗಳನ್ನು ನೋಡಿದರೆ ನನ್ನ ಅನುಮಾನ ನಿಜವಾಗುತ್ತಿದೆಯೇನೋ ಎನಿಸುತ್ತದೆ. ಒಂದರೊಳಗೊಂದು ಹೆಣೆದುಕೊಂಡಂತಿರುವ ನಮ್ಮೆಲ್ಲ ಸಮಸ್ಯೆಗಳಿಗೆ ಕಾರಣಗಳೇನು? ಯೋಚಿಸಲೇಬೇಕು.

ಲೈಂಗಿಕ ಅತ್ಯಾಚಾರಗಳು ಮಹಿಳಾ ಜಗತ್ತಿಗೆ ಹೊಸತೇನಲ್ಲ. ಆದರೂ ಇಂದು ಅದು ಯಾವ ಮಟ್ಟದ ಕ್ರೌರ್ಯವನ್ನು ಒಳಗೊಂಡಿದೆಯೆಂದು ನೆನೆದರೆ ಭಯವಾಗುತ್ತದೆ. ಇದು ಮೂರು ವರ್ಷದ ಮಗುವಿನಿಂದ ಹಿಡಿದು ಅರವತ್ತು ವರ್ಷದ ಮುದುಕಿಯವರೆಗೆ ಯಾವ ಮಹಿಳೆಯ ಮೇಲೂ ನಡೆಯಬಹುದು. ಇಂದಿನ ಸಮಾಜ ಹೆಚ್ಚೆಚ್ಚು ಹಿಂಸಾತ್ಮಕವಾಗುತ್ತಿದೆಯೇ ಎಂಬ ಸಂದೇಹ ನನಗೆ. ಕುಟುಂಬದ ಒಳಗೂ ಹೊರಗೂ ಅತ್ಯಾಚಾರಗಳು ನಡೆಯುತ್ತಿವೆ. ಸಮಾಜ ಈಗ ಗಂಡು-ಹೆಣ್ಣೆಂಬ ಪ್ರತಿಸ್ಪರ್ಧಾತ್ಮಕ ನೆಲೆಯಲ್ಲಿ ವಿಭಜನೆಯಾಗಿಬಿಟ್ಟಿದೆಯೇ? ಏಕೆಂದರೆ, ವರದಿಗಳೇ ಹೇಳುವಂತೆ ಬರೀ ಯುವತಿಯರ, ರೂಪಸಿಯರ ಮೇಲಷ್ಟೇ ಅತ್ಯಾಚಾರ ನಡೆಯುತ್ತಿಲ್ಲ. ಕನಿಷ್ಠ ಉಡುಗೆಯನ್ನು ತೊಟ್ಟವರ ಮೇಲೂ ಅಲ್ಲ. ಯಾವ ನೀತಿ ಸಂಹಿತೆಯ ಎಗ್ಗೂ ಇಲ್ಲದೆ ಸರ್ವ ವ್ಯಾಪಕವಾಗುತ್ತಿರುವ ಭೋಗ ಸಂಸ್ಕೃತಿ ಸಮಾಜವನ್ನು ಹೆಚ್ಚು ಗಂಡಾಗಿಸುತ್ತಾ ಹೆಣ್ಣನ್ನು ಭೋಗಿಸಲು ಇರುವ ವಸ್ತು ಮಾತ್ರ ಎಂಬಂತೆ ಗ್ರಹಿಸಲಾರಂಭಿಸಿದೆಯೆ? ಇದೇ ಮನಃಸ್ಥಿತಿ ಇತ್ತೀಚೆಗೆ ಹುಟ್ಟು ಹಾಕಿರುವ ಧಾರ್ಮಿಕ ರಾಜಕಾರಣವೂ ಪುರುಷರು ಹಾಕಿದ್ದ ಲಕ್ಷ್ಮಣ ರೇಖೆಯನ್ನು ಮೀರಿ ಹೊರಹೋಗುತ್ತಿರುವ ಹೆಣ್ಣನ್ನು ಮತ್ತೆ ಮನೆಯೊಳಗೆ ಬಂಧಿಸಿಡಲು ನೈತಿಕ ಪೋಲೀಸ್ ಗಿರಿಯನ್ನು ಆರಂಭಿಸಿರುವುದನ್ನು ನಾವು ಗಮನಿಸಬಹುದು. ಇನ್ನು ದೃಶ್ಯ ಮತ್ತು ಇಂಟರ್ನೆಟ್ ಮಾಧ್ಯಮಗಳು ಈ ಸಂಬಂಧ ದುರುಪಯೋಗವಾಗಿತ್ತಿರುವ ರೀತಿಯಂತೂ ತಲ್ಲಣವನ್ನುಂಟು ಮಾಡುವಂತಹುದು. ಮೊಬೈಲಿನ ಒಂದು ಬಟನ್ನಿಗೆ ಸುಲಭವಾಗಿ ಲಭ್ಯವಾಗುವ ಅಶ್ಲೀಲ ವೀಡಿಯೋಗಳ ಜಾಲ. ಇವತ್ತು ಹಳ್ಳಿ ಮೂಲೆ ಮೂಲೆಗಳಲ್ಲಿ ಹುಡುಗರು ಗುಂಪು ಕಟ್ಟಿಕೊಂಡು ಮಾಡುವ ಕೆಲಸ ಇದೇ. ಹಳ್ಳಿಯೊಂದರಲ್ಲಿ ಬದುಕುತ್ತಿರುವ ಮಧ್ಯ ವಯಸ್ಸಿನ ನನಗೇ ಇದೇ ಹಳ್ಳಿಯೊಳಗಿಂದ ಅಶ್ಲೀಲ ದೂರವಾಣಿ ಕರೆಯೊಂದು ಬಂದಿತ್ತು ಒಂದು ಬೆಳ್ಳಂಬೆಳಗ್ಗೆ! ಯಾವ ಸಂಬಂಧಗಳನ್ನೂ ಗೌರವಿಸದ ವಿಕೃತಿಯೊಂದು ಸಮಾಜದೊಳಗೆ ಹಬ್ಬುತ್ತಿದೆ.

ಏನೆಲ್ಲ ಆದರೂ ಮಹಿಳೆ ತನಗೆ ಸಾಧ್ಯವಾದ ಎಲ್ಲ ಹೊರಳು ದಾರಿಗಳಲ್ಲೂ ಧೃತಿಗೆಡದೇ ಮುನ್ನುಗ್ಗುತ್ತಿರುವುದು ಪ್ರಶಂಸನೀಯವೇ ಹೌದು. ಇದೆಲ್ಲದರ ಮಧ್ಯೆ ಮಹಿಳೆ ತನ್ನ ಸ್ತ್ರೀತನದ ಸಂಪೂರ್ಣ ಅರಿವಿನಲ್ಲಿ ಆತ್ಮವಿಶ್ವಾಸವನ್ನು ಉಳಿಸಿಕೊಂಡು ಬೆಳೆಸಿಕೊಳ್ಳಬೇಕಾಗಿದೆ. ತುರ್ತು ಅಗತ್ಯವೆಂದರೆ ಹೆಣ್ಣು ವಿಶಿಷ್ಟವಾದ ಮೌಲ್ಯಾಧಾರಿತ ಶಿಕ್ಷಣ. ವಿವೇಕವನ್ನೂ, ವೈಚಾರಿಕತೆಯನ್ನೂ ಬೆಳೆಸುವ ಶಿಕ್ಷಣ. ಹೆಚ್ಚಿನ ಹೆಣ್ಣು ಮಕ್ಕಳು ಹೆಚ್ಚಿನ ಆದಾಯದ ಉದ್ಯೋಗಗಳ ಹಪಾಹಪಿಯಲ್ಲಿ ಇಂದು ವಿಜ್ಞಾನ-ತಂತ್ರಜ್ಞಾನ ವಿಷಯಗಳನ್ನು ಆಯ್ದುಕೊಳ್ಳುತ್ತಿರುವುದರಿಂದ ಕಾನೂನಿನ, ಹಕ್ಕಿನ, ಅಧಿಕಾರದ ಸಾರ್ವತ್ರಿಕ ಅರಿವು ಅವರಲ್ಲಿ ಕಡಿಮೆಯಾಗುತ್ತಿದೆ ಎನಿಸುತ್ತದೆ. ಹಾಗಾಗಿ ಪದವಿಯೆಂಬ ಹಣೆಪಟ್ಟಿಯನ್ನು ಮಾತ್ರ ಹಚ್ಚುವ ಶಿಕ್ಷಣಕ್ಕೆ ಬದಲಾಗಿ ಕಾನೂನಿನ ಜ್ಞಾನವನ್ನೂ, ಸಾಮಾಜಿಕ ಜವಾಬ್ದಾರಿಯನ್ನೂ ಬೆಳೆಸುವ ಶಿಕ್ಷಣಕ್ಕಾಗಿ ಇಂದು ನಾವು ಒತ್ತಾಯಿಸಬೇಕಿದೆ. ಇದರ ಜೊತೆಗೆ ಸ್ವಯಂರಕ್ಷಣೆಯ ದೈಹಿಕ ತರಬೇತಿಯೂ ಬೇಕು. ನಿಜವಾಗಿಯೂ ನಮಗೆಲ್ಲರಿಗೂ ಬೇಕಾಗಿರುವುದು ಶಾಂತಿಯುತ ಸಹಜೀವನ ಮತ್ತು ನೆಮ್ಮದಿಯ ಬದುಕು. ಇದರ ಅರಿವು ಮೂಡಿಸುವ ಕಾರ್ಯಾಚರಣೆ ಇಂದು ಬಹಳ ಅಗತ್ಯವಾಗಿದೆ.

# ವಿಸ್ತರಿಸಿಕೊಳ್ಳಬೇಕಾದ ನಮ್ಮ ಸ್ತ್ರೀವಾದದ ಎಲ್ಲೆಗಳು...

–ತಾರಿಣಿ ಶುಭದಾಯಿನಿ



**ಸಂ**ಪಾದಕರು ದೂರವಾಣಿ ಕರೆ ಮಾಡಿ ಇಂದಿನ ಸ್ತ್ರೀವಾದದ ಮಿತಿಗಳ ಬಗ್ಗೆ(ಅವು ಇವೆಯೆನಿಸಿದರೆ) ಒಂದು ಟಿಪ್ಪಣಿ ಬರೆಯಬೇಕೆಂದೂ ಅದು ಜನಸಾಮಾನ್ಯರ ಓದಿಗೆ ಸಿಕ್ಕುವಂತಿರಬೇಕೆಂದೂ ಹೇಳಿದಾಗ ಸ್ತ್ರೀವಾದದ ಮಿತಿ ಏನು ಅನ್ನುವುದು ನನಗೆ ಹೊಳೆದಂತಾಯ್ತು. ಆನಂದ ಝುಂಜರವಾಡರ ಸಾಲು 'ಆಂಟಿಸೆಪ್ಟಿಕ್ ಸ್ತ್ರೀವಾದಿ' ಎನ್ನುವ ಮಾತು ಇದರ ಜೊತೆಯಲ್ಲೇ ನೆನಪಾಯ್ತು. ಮನಸ್ಸು ಈ ಸಾಲಿನ ಕೊಂಕಿಗೆ ಮುದುಡಿದರೂ ಕೊಂಚ ಆಲೋಚನಾಪರವಾಗುತ್ತದೆ. ವಿಶಾಲವಾದ ಆಶಯಗಳನ್ನು ಒಡಲಲ್ಲಿ ಹೊತ್ತು ಸಾಗಿದ ಸ್ತ್ರೀವಾದ ವಿಪರೀತ ಸ್ಟೆರಿಯಲೈಷೇನ್ನಿಗೆ ಒಳಗಾಯಿತೆ? ಹಾಗಿದ್ದರೆ ಅದಕ್ಕೆ ಯಾರು ಕಾರಣ? ಸ್ತ್ರೀವಾದವೆಂದರೆ ಬೇಸರಿಸುವ ಗಂಡಸರೇ?(ಪಿತೃ ಪ್ರಧಾನ ಆಶಯವುಳ್ಳ ಗಂಡಸರು–ಎನ್ನುವುದು ಇಲ್ಲಿನ ತಿದ್ದುಪಡಿ) ಅಥವಾ ಸ್ತ್ರೀವಾದವನ್ನು ಗೀಳಿನಂತೆ ಬೆಳೆಸುತ್ತಾ ಮಹಿಳೆ ಎಂದರೆ ಶೋಷಣೆಗೆ ತುತ್ತಾದ ಸಂಕುಲಕ್ಕೆ ಸೇರಿದವಳು ಎನ್ನುವ ಭಾವದಿಂದ ಒತ್ತಡವನ್ನು ಅನುಭವಿಸುತ್ತಿರುವ ಸ್ತ್ರೀವಾದಿಗಳೇ?

ಎಲ್ಲರನ್ನೂ ಸಮಾನವಾಗಿ ಕಾಣಬೇಕೆನ್ನುವ ಮೂಲ ಆಶಯದಿಂದ ಹೊರಟ ಸ್ತ್ರೀವಾದ ತನ್ನ ಹಾದಿಯನ್ನು ಸವೆಸಿದ್ದು ಕಲ್ಲು ಮುಳ್ಳುಗಳ ಮೇಲೆ ಅಡಿಯಿಟ್ಟೇ. ಇದಕ್ಕೆ ಸಂಶಯವಿಲ್ಲ. ನಮ್ಮ ಹಿರಿಯ ತಾಯಂದಿರಾದ ಸಿಮೊನ್ ದ ಬುವಾ, ಬೆಟ್ಟಿ ಫ್ರೀಡನ್, ವರ್ಜಿನಿಯಾ ವೂಲ್ಫ್ ಇವರೆಲ್ಲಾ ಸ್ತ್ರೀ ಕುಲವನ್ನು ವಿವರಿಸಿದ ರೀತಿ ಸ್ತ್ರೀಯರಿಗೆ ಆತ್ಮವಿಶ್ವಾಸವನ್ನು ತಂದಿತ್ತಿತು. ಅದೇ ಸಮಯದಲ್ಲಿ ಗಂಡಸರಿಗೆ ಮುಟ್ಟಿ ನೋಡಿಕೊಳ್ಳುವಂತಹ ಸತ್ಯಗಳನ್ನೂ ಇವರು ಹೇಳಿದರು. ಮನೆ–ಮನದೊಳಗಿನ, ನಾಡು–ನುಡಿಯೊಳಗಿನ ಲಿಂಗದ ಕಹಿವಾಸನೆಯುಳ್ಳ ಶರೀರಗಳನ್ನು ಹೊತ್ತು ಓಡಾಡಿಕೊಂಡಿರುವ ಸಮಾಜ ಬಾಂಧವರಲ್ಲಿ ಗಂಡು ಹೆಣ್ಣು ಇಬ್ಬರೂ ನಾರುವ ಜೀವಿಗಳೇ ಆಗಿಬಿಟ್ಟಿದ್ದು ಆರೋಗ್ಯಪೂರ್ಣವಾಗಿ ಎಲ್ಲರನ್ನೂ ಸಮಾನವಾಗಿ ನೋಡುವ ಜೀವಕಾರುಣ್ಯದ ದೃಷ್ಟಿ ಮೊಳೆಯಬೇಕೆನ್ನುವುದು ಸ್ತ್ರೀವಾದದ ಮೂಲ ಆಶಯ. ಇದನ್ನು ಒಪ್ಪದವರು ಅಂತಿರಲಿ. ಇಡೀ ಸಮಾಜದಲ್ಲಿ ಅತ್ಯಾಚಾರಗಳೇ ಸಂಭವಿಸುತ್ತಿರುವಂತೆ ಕಂಡು ತಂದೆಗೆ ಹೆಣ್ಣುಕೂಸಿನ ಸಂಪರ್ಕ ಬರದಂತೆ, ಅಣ್ಣ ತಮ್ಮಂದಿರಿಗೆ ಸಹೋದರಿಯ ಸ್ಪರ್ಶ ಸಿಗದಂತೆ ಆಗುತ್ತಿರುವ ಸಂದರ್ಭದಲ್ಲಿ ಸ್ತ್ರೀವಾದ ಬಯಲಲ್ಲಿ ಮೊರೆಯಿಡುತ್ತಿರುವ ದನಿಯಂತೆ ಕೇಳುತ್ತಿದೆ. ಎಷ್ಟು ಚಳವಳಿ ಮಾಡಿದರೂ ಇವೆಲ್ಲಾ ನಿಲ್ಲುತ್ತಲೇ ಇಲ್ಲವಲ್ಲ. ಹಾಗಿದ್ದರೆ ತಲೆಮಾರುಗಳ ಕಾಲದಿಂದ ಲಿಂಗಭೇದದ ಅಸೂಕ್ಷ್ಮತೆಗಳನ್ನು ಕುರಿತು 'ಕಾಣುವಂತೆ', 'ಕೇಳುವಂತೆ' ಮಾಡಿದ್ದೇ ಸ್ತ್ರೀವಾದದ ಮಿತಿಯೇ? ಏಕೆಂದರೆ ಗೋಳುಗಳ ನಡುವೆ ಹುಟ್ಟಿ ಬೆಳೆದ ಸ್ತ್ರೀವಾದವು ಗೋಳನ್ನೇ ಹೇಳುತ್ತಿರುವಂತೆ ಅನ್ಯರಿಗೆ ಕಂಡರೆ ಏನು ಮಾಡುವುದು? ಅಥವಾ ಗೋಳಿನ ಕತೆಗಳಿಗೆ ಮಿತಿಯಿಲ್ಲವೇ?



ಕನ್ನಡದ ಮಟ್ಟಿಗೆ ಸ್ತ್ರೀವಾದ ಎನ್ನುವ ತಿಳಿವಳಿಕೆ ಬಂದಿದ್ದು ಇಪ್ಪತ್ತನೇ ಶತಮಾನದ ಕೊನೆಯಲ್ಲಿ (ಈ ಮೊದಲು ಸ್ತ್ರೀವಾದೀ ಅರಿವು, ಜಾಗೃತಿ ಇದ್ದಿತಾದರೂ ಅದು ನಿಚ್ಚಳವಾಗಿ ಕಾಣತೊಡಗಿದ್ದು ಚಳವಳಿಯ ಚಹರೆಯನ್ನು ಪಡೆದುಕೊಂಡ ಈ ಸಂದರ್ಭದಲ್ಲಿ). ಓದು ಚಳವಳಿಗಳೆರಡರಲ್ಲಿಯೂ ಚಾಲನೆ ಪಡೆದುಕೊಂಡ ಸ್ತ್ರೀವಾದೀ ಅರಿವು ಈ ಮೊದಲು ಮಧ್ಯಮ ವರ್ಗೀಯ ಸಂವೇದನೆಗಳನ್ನು ಬಿಂಬಿಸುವ ಕಾರ್ಯಕ್ರಮ ಎಂದು ಭಾವಿಸಲಾಗಿತ್ತು. ಅದಕ್ಕೆ ತಕ್ಕನಾಗಿ ಉದ್ಯೋಗದ ಅವಕಾಶಗಳು ಹಾಗೂ ಹೊರಗಿನ ಶಿಕ್ಷಣ ದ ಸ್ವಾತಂತ್ರ್ಯಗಳು ಮೇಲು ಮಧ್ಯಮವರ್ಗದ ಸಂರಚನೆಗಳನ್ನು ಕೊಂಚ ಸಡಿಲಗೊಳಿಸತೊಡಗಿತು. ಮಧ್ಯಮವರ್ಗಕ್ಕೆ ಅನುಕೂಲವೆನ್ನಿಸುತ್ತಿದ್ದ ಸ್ತ್ರೀವಾದವನ್ನು ಅದಕ್ಕೇ ಕಟ್ಟಿ ಹಾಕುವಂತಾಗಿದ್ದು ಸ್ತ್ರೀವಾದದ ಬಗೆಗೆ ಪೂರ್ವಾಗ್ರಹ ಉಂಟಾಗಲು ಒಂದು ಪ್ರಮುಖ ಕಾರಣವಾದಂತೆ ತೋರುತ್ತದೆ. ದುರಂತ ಎಂದರೆ ಹೀಗೆ ವರ್ಗ ಸಂವೇದಿಯಾಗಿ ಸ್ತ್ರೀವಾದವನ್ನು ಭಾವಿಸಿದ್ದರಿಂದ ಅದನ್ನು ಅಷ್ಟಕ್ಕೇ ಕಟ್ಟಿ ಹಾಕುವ ಯತ್ನವೂ ಯಶಸ್ವಿಯಾದಂತಾಯ್ತು. ಇದಕ್ಕೆ ಹಿನ್ನೆಲೆಯಾಗಿ ಕನ್ನಡದಲ್ಲಿ ಬಂದ ಮೊದಲ ಸ್ತ್ರೀವಾದೀ ಫಸಲನ್ನು ಗಮನಿಸಿದರೆ ಅದರಲ್ಲಿ ಭಾಗವಹಿಸಿದ ಮಹಿಳೆಯರು ಸಾಧಾರಣವಾಗಿ ಮಧ್ಯಮ ಅಥವಾ ಮೇಲ್ ಮಧ್ಯಮವರ್ಗದವರಾಗಿದ್ದರು. ನಮ್ಮ ನೆರೆಯ ಮಹಾರಾಷ್ಟ್ರ, ಕೇರಳಗಳಲ್ಲಿ ಹೀಗಾಗಲಿಲ್ಲ. ಅಲ್ಲಿ ನಿಮ್ನ ವರ್ಗದವರು, ಮುಸ್ಲಿಮರು, ಕ್ರಿಶ್ಚಿಯನ್ನರು ತಂತಮ್ಮ ಭಾಷೆಯಲ್ಲಿ ಸ್ತ್ರೀ ಸಂವೇದನೆಯನ್ನು ಮೂಡಿಸಿ, ಸಾಮಾಜಿಕ ಸಂಚಲನವನ್ನುಂಟುಮಾಡಿದವು

ಸ್ತ್ರೀವಾದಕ್ಕೆ ಎಷ್ಟೊಂದು ಆಯಾಮಗಳಿವೆ. ಅದರ ವೈಶಾಲ್ಯತೆಯೇ ಅದರ ತೊಡಕಾಗಿರಬಹುದೇ ಎಂಬ ಅನುಮಾನ ನನಗೆ.. ಸ್ತ್ರೀವಾದ ಏಕಮುಖಿಯಲ್ಲ. ಸ್ತ್ರೀವಾದವೆಂಬ ಛತ್ರಿಯ ಅಡಿಯೊಳಗೆ ಅನೇಕ ಸ್ತ್ರೀವಾದಗಳೇ ಅಡಗಿವೆ.ಒಂದೊಂದು ಹೆಣ್ಣಿನ ಪ್ರಕಾರ ಹೋದರೆ ಲಕ್ಷಾಂತರ ಸ್ತ್ರೀವಾದಗಳಿರಲಿಕ್ಕೂ ಸಾಧ್ಯ! ಈ ತಕ್ಷಣಕ್ಕೆ ನೆನಪಾಗುತ್ತಿರುವುದು ಸವಿತಾ ನಾಗಭೂಷಣ ಅವರ 'ಸ್ತ್ರೀ ಲೋಕ' ಕಾದಂಬರಿಯ ಅಸಂಖ್ಯ ಮಹಿಳಾ ದನಿಗಳು. ಅವು ಭಾರತೀಯ ಸಮಾಜದಲ್ಲಿಯೂ ಇರಬಹುದಾದ ಸಂಕೀರ್ಣ ಸ್ತ್ರೀವಲಯಗಳನ್ನು ಬಿಚ್ಚಿಡುವಂತವು. ಮಹಿಳಾ ಲೋಕವು ಒಂದಲ್ಲ, ಹಲವು ಎನ್ನುವುದು ಸ್ತ್ರೀವಾದದ ಹೊಸ ಗ್ರಹಿಕೆ. ಅದು ಸ್ತ್ರೀವಾದದ ಮಿತಿಯನ್ನು ಮೀರುವ ಯತ್ನ ಎಂದೇ ಕರೆಯಬಹುದು. ಹಕ್ಕು ಮಾನ್ಯತೆಗಳಿಗೆ ಪ್ರಾಶಸ್ತ್ಯ ನೀಡಿದ ಆರಂಭದ ಸ್ತ್ರೀವಾದದ ನಂತರ ಯುರೋಪಿನಲ್ಲಿಯೇ ಅನೇಕಾನೇಕ ಸ್ತ್ರೀವಾದಗಳು ಹುಟ್ಟಿಕೊಂಡವು. ಜನಾಂಗೀಯವಾದಕ್ಕೆ ತಕ್ಕಂತೆ ಕಪ್ಪು ಸ್ತ್ರೀವಾದ, ವರ್ಗ ಹಿತಾಸಕ್ತಿಗಳಿಗನುಗುಣವಾಗಿ ಮಾರ್ಕ್ಸವಾದಿ ಸ್ತ್ರೀವಾದ, ಸಲಿಂಗಾಸಕ್ತಿಯ ಸ್ತ್ರೀವಾದು ಹೀಗೆ ಸ್ತ್ರೀವಾದ ತನ್ನ ಬಹುತ್ವವನ್ನು ಕಂಡುಕೊಂಡು ತನ್ನ ಎಲ್ಲೆಗಳನ್ನೂ, ಅಭ್ಯಾಸಶೀಲತೆಯನ್ನೂ ಹಿಗ್ಗಿಸಿಕೊಂಡಿತು.


ಸಿಮೊನ್ ದ ಬುವಾ


ವರ್ಜಿನಿಯಾ ವೂಲ್ಫ್


ಗಾಯತ್ರಿ ಸ್ಪೀವಾಕ್

ಸ್ತ್ರೀವಾದೀ ಚಿಂತನೆಗಳು ಬೆಳೆಯುವಾಗ ಆಯಾ ಪ್ರಚಲಿತ ವಾದಗಳನ್ನು ಅವಲಂಬಿಸಿ ತನ್ನ ಚಿಂತನಾಕ್ರಮಗಳನ್ನು ರೂಪಿಸಿಕೊಂಡ ಮಾದರಿಗಳು ನಮ್ಮ ಮುಂದಿವೆ. ಉದಾಹರಣೆಗೆ ಮಾರ್ಕ್ಸವಾದದ ಸಿದ್ಧಾಂತವನ್ನು ಅವಲಂಬಿಸಿ ಬೆಳೆದ ಮಾರ್ಕ್ಸವಾದೀ ಸ್ತ್ರೀವಾದ; ಆಧುನಿಕೋತ್ತರವಾದದ ಜೊತೆ ಬೆಳೆದ ಆಧುನಿಕೋತ್ತರವಾದಿ ಸ್ತ್ರೀವಾದ; ಅಸ್ತಿತ್ವವಾದೀ ಸ್ತ್ರೀವಾದ ಹೀಗೆ ಅನೇಕ ಇವೆ. ಇಲ್ಲಿಯೇ ಉಲ್ಲೇಖಿಸಬೇಕು, ಅನೇಕರು ಭಾರತೀಯ ಸ್ತ್ರೀವಾದ ಇನ್ನೂ ಪಾಶ್ಚಾತ್ಯ ಸ್ತ್ರೀವಾದೀ ತರ್ಕಗಳಿಂದ ತತ್ವಗಳಿಂದ ಮುಕ್ತವಾಗಿಲ್ಲ ಎಂದು ಆರೋಪಿಸುತ್ತಾರೆ. ಹೌದು, ಭಾರತೀಯ ಸ್ತ್ರೀವಾದ ಮೊದಲಾಗಿ ಕನ್ನಡದ ಸ್ತ್ರೀವಾದವು ಮೊದಲಲ್ಲಿ ಆಭಾರಿಯಾಗಿದ್ದು ಪಾಶ್ಚಾತ್ಯ ಸ್ತ್ರೀವಾದಿ ಚಿಂತಕಿಯರಿಗೆ. ಆ ಸಂಪನ್ಮೂಲಗಳನ್ನು ಬಳಸಿಕೊಂಡು ನಮ್ಮ ಸಮಾಜ ಮತ್ತು ಸಾಹಿತ್ಯದಲ್ಲಿಯೂ ಸ್ತ್ರೀವಾದೀ ಅರಿವು ಉಂಟಾಯಿತು. ಭಾರತೀಯ ಸ್ತ್ರೀವಾದದ ಮೇಲಿರುವ ಒಂದು ಸಾಮಾನ್ಯ ಆಪಾದನೆ ಎಂದರೆ ಅದು ಪಾಶ್ಚಾತ್ಯ ಸ್ತ್ರೀವಾದೀ ಚಿಂತನೆಗಳನ್ನು ಅವಲಂಬಿಸಿ ಪರಾಧೀನವಾಗಿದೆ ಎನ್ನುವುದು. ಆದರೆ ತೇಜಸ್ವಿನಿ ನಿರಂಜನರಂತಹ ಸ್ತ್ರೀವಾದಿ ಚಿಂತಕಿಯರು  ಪ್ರಕಾರ ಮಾರ್ಕ್ಸವಾದವನ್ನು ಒಪ್ಪಿಕೊಂಡಿರುವ ಭಾರತೀಯ ಸಮಾಜಕ್ಕೆ ಸ್ತ್ರೀವಾದೀ ಚಿಂತನೆ ಮಾತ್ರ ಏಕೆ ಪರಕೀಯವಾಗಿ ಕಾಣಬೇಕು ಎಂದು ಪ್ರಶ್ನಿಸುತ್ತಾರೆ.

ಇದೆಲ್ಲ ಒತ್ತಟ್ಟಿಗಿರಲಿ. ಭಾರತೀಯ ಸಮಾಜ ಎದುರಿಸುತ್ತಿರುವ ಸ್ತ್ರೀ ಸಮಸ್ಯೆಗಳು ಮತ್ತು ಅಸ್ಮಿತೆಯ ಪ್ರಶ್ನೆಗಳು ಭಿನ್ನವಾಗಿವೆ. ಆದುದರಿಂದ ಅದು ಅಪೇಕ್ಷಿಸಬಹುದಾದ ಸ್ತ್ರೀವಾದಕ್ಕೆ ಪಶ್ಚಿಮದ ಮಂಡನೆಗಳಾಚೆ ಒಂದು ಜಾಗ ಬೇಕಾಗುತ್ತದೆ. ತೃತೀಯ ಜಗತ್ತಿನ ಬಗ್ಗೆ ಪ್ರಶ್ನೆಗಳನ್ನೆತ್ತಿದ ಗಾಯತ್ರಿ ಸ್ಪೀವಾಕ್ ಜಾಗತಿಕ ಮಟ್ಟದಲ್ಲಿ ಇರುವ ಪಿತೃಪ್ರಧಾನತೆಯ ಜೊತೆಗೆ ತೃತೀಯ ಜಗತ್ತುಗಳೊಳಗಿನ ಪಿತೃಪ್ರಧಾನತೆಯನ್ನು ಸಮೀಕರಿಸಿ ನೋಡುವುದು ಸಲ್ಲ ಎನ್ನುತ್ತಾರೆ. ಆನಂತರ ಲತಾಮಣಿ, ಚಂದ್ರ ತಲ್ಪಾಡ್ ಮುಂತಾದ ಚಿಂತಕಿಯರು ಭಾರತೀಯ ಸಮಾಜಗಳ ಸ್ತ್ರೀವಾದೀ ಪ್ರತಿನಿಧೀಕರಣವು ಬಹುತ್ವದ್ದು ಎಂದು ಗುರುತಿಸಿ ಇದು ಆಧುನಿಕೋತ್ತರದ ಬಹುತ್ವಕ್ಕಿಂತ ಭಿನ್ನವಾದ ಸಮಸ್ಯೀಕರಣ ಎಂದು ಪ್ರತಿಪಾದಿಸುತ್ತಾರೆ. ಭಾರತೀಯ ಸಮಾಜವು ಜಾತಿ, ವರ್ಗಗಳಲ್ಲಿ ಒಡೆದುಕೊಂಡಿದ್ದು ಸ್ತ್ರೀ ಪ್ರತಿನಿಧೀಕರಣ ಎನ್ನುವುದು ಈ ದಿಸೆಯಲ್ಲಿ ಸಹ ನೋಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಭಾರತೀಯ ಸ್ತ್ರೀವಾದವೂ ಲೋಹಿಯಾ, ಅಂಬೇಡ್ಕರ್ ಹಾಗೂ ಇನ್ನಿತರ ಭಾರತೀಯ ಚಿಂತಕರ ಚಿಂತನೆಗಳನ್ನು ಬಳಸಿಕೊಂಡು ಹೊಸ ಸ್ತ್ರೀವಾದೀ ಚಿಂತನಾಕ್ರಮಗಳನ್ನು ನಿರೂಪಿಸಬಹುದಿತ್ತಲ್ಲವೇ ಎನ್ನಿಸದಿರದು. ನೆಲಮುಖಿ ಚಿಂತನೆಗಳನ್ನು ಆಧರಿಸಿದ ಸ್ತ್ರೀವಾದವು ಪಿತೃಪ್ರಧಾನತೆಯನ್ನು ಹೇಗೆ ಪುರ್ನವ್ಯಾಖ್ಯಾನ ಮಾಡಿಕೊಳ್ಳುತ್ತದೆ ಎನ್ನುವುದು ತೆರೆದಿಟ್ಟ ಅವಕಾಶವಾಗಿದೆ. ಅಲ್ಲದೆ ರಾಷ್ಟ್ರೀಯತೆಯ ಸಂಕಥನಗಳು ನಿರೂಪಿಸುತ್ತಿರುವ ಪಿತೃಪ್ರಧಾನತೆಯು ಸ್ತ್ರೀವಾದೀ ಕಥನಗಳನ್ನು ಕಟ್ಟುತ್ತಾ ಮದರ್ ಲ್ಯಾಂಡ್ ಎನ್ನುವ ಕಲ್ಪನೆಯನ್ನು ಒಡೆದುಕೊಳ್ಳುತ್ತಿರುವ ಪರಿಯನ್ನು ಕೂಡ ನಾವಿಂದು ಗಮನಿಸಬಹುದಾಗಿದೆ. ಈ ಹಂತದಲ್ಲಿ ನಿಜವಾದ ಭಾರತೀಯ ಸ್ತ್ರೀವಾದವು ಮೈದಳೆಯುತ್ತಾ ಒಂದು ಸಂಕಥನದ ಮಾದರಿಯಾಗಿ ರೂಪುಗೊಳ್ಳುತ್ತಿರುವುದನ್ನು ಗಮನಿಸಬಹುದು.

ಕನ್ನಡದಲ್ಲಿ ಶುರುವಿನ ಸ್ತ್ರೀವಾದದಿಂದ ಹಿಡಿದು ಈಗಿನವರೆಗು ಅನೇಕ ಮಹಿಳಾ ಅಧ್ಯಯನಗಳಲ್ಲಿ ಈಗಲೂ ಕಾಣಿಸಿಕೊಳ್ಳುವುದು ಪಾಶ್ಚಾತ್ಯ ಸ್ತ್ರೀಚಿಂತಕಿಯರೇ. ಅವರ ಉಲ್ಲೇಖಗಳಿಲ್ಲದೆ ಮಹಿಳಾ ಅಧ್ಯಯನವೇ ಸಾಧ್ಯವಿಲ್ಲವೇನೊ ಎಂಬಂತೆ. ಅದರಿಂದ ಕೇಡೇನೂ ಇಲ್ಲ. ಆದರೆ ಸ್ವಂತಿಕೆ ಹಾಗೂ ಸತ್ವಗಳ ಪ್ರಶ್ನೆ ಬಂದಾಗ ನೆಲದ ಚಿಂತನೆಗಳು ಸ್ತ್ರೀವಾದವನ್ನು ಬೆಳೆಸಲು ಸಾಧ್ಯವಿಲ್ಲವೇ ಎನ್ನುವ ಪ್ರಶ್ನೆ ಎದುರಾಗುತ್ತಿದೆ. ವಿಜಯಾ ದಬ್ಬೆ, ಎಚ್.ಎಸ್. ಶ್ರೀಮತಿ, ಬಿ.ಎನ್ ಸುಮಿತ್ರಾಬಾಯಿ, ಇಂದಿರಾ ಇವರುಗಳೆಲ್ಲಾ ನಮ್ಮ ಹೆಮ್ಮೆಯ ಸ್ತ್ರೀವಾದಿ ಚಿಂತಕಿಯರು. ಆದರೆ ಇವರು ಮಾದರಿಯಾಗಿ ಬಳಸಿಕೊಂಡಿದ್ದು ಪಾಶ್ಚಿಮಾತ್ಯ ಸ್ತ್ರೀವಾದದ ಚಿಂತನೆ ಮತ್ತು ಪರಿಭಾಷೆಗಳನ್ನು. ಪಂಪನಾದಿಯಾಗಿ ಅನ್ವಯಿಕವಾಗಿ ಕನ್ನಡ ಸಾಹಿತ್ಯವನ್ನು ಮರು ಓದಿಗೆ



ತೇಜಸ್ವಿನಿ ನಿರಂಜನ  ವಿಜಯಾ ದಬ್ಬೆ  ಸುಮಿತ್ರಾಬಾಯಿ

ಒಳಪಡಿಸಬೇಕೆಂಬ ಚಿಂತನೆಯೂ ಸಹ ಪಶ್ಚಿಮದ ತಿಳಿವಳಿಕೆಯೇ ಆಗಿತ್ತು. ಹೀಗಾಗಿ ಕನ್ನಡದ ಮಟ್ಟಿಗೆ ಸ್ತ್ರೀವಾದಕ್ಕೆ ಇನ್ನೂ ಆರಂಭದ ಹುಮ್ಮಸ್ಸು ಇಳಿದಿಲ್ಲ. ಸ್ತ್ರೀವಾದೀ ಚಿಂತನೆಗಳನ್ನು ವ್ಯಾಪಕವಾಗಿ ಭಾಷೆ, ಜ್ಞಾನ ಹಾಗೂ ಸಂರಚನೆಗಳ ನಿಟ್ಟಿನಲ್ಲಿ ಬೆಳೆಸುವ ಪ್ರಯತ್ನಗಳು ನಡೆದಿದ್ದರೂ ದೊಡ್ಡ ಮಟ್ಟದಲ್ಲಿ ಅವು ಕೈಗೂಡಿಲ್ಲ. ಬದಲಾಗುತ್ತಿರುವ ಓದುವ ಕ್ರಮಗಳಿಂದ ಸುಮಿತ್ರಾಬಾಯಿ ಅವರಂತಹ ಸ್ತ್ರೀವಾದೀ ವಿಮರ್ಶಕಿಯರ ಸ್ತ್ರೀವಾದ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಿದ್ದರೂ ಯಾಕೊ ಅವರಿನ್ನೂ ಹೊಸ ಶುರುವನ್ನು ಅಷ್ಟಾಗಿ ಪ್ರಕಟ ಪಡಿಸುತ್ತಿಲ್ಲ.

ಈಗೀಗ ಕೆಲವು ಲೇಖಕಿಯರು ನಾವು ಸ್ತ್ರೀವಾದಿಗಳಲ್ಲ ಎಂದು ತುಂಬ ಸಂಕೋಚದಿಂದ ಹೇಳಿಕೊಳ್ಳುತ್ತಾರೆ. ಅದಕ್ಕೆ ಪ್ರತಿಯಾಗಿ ಸ್ತ್ರೀವಾದಿಗಳು ಅಸ್ಮಿತೆಯ ಲಾಭ ಪಡೆದುಕೊಂಡ ನಂತರ 'ಹೊಳೆದಾಟಿದ ನಂತರ ಅಂಬಿಗನ್ಯಾರು?' ಎಂಬಂತೆ ವರ್ತಿಸುವುದು ಸರಿಯಲ್ಲ ಎಂದು ಜಾಡಿಸುತ್ತಾರೆ. ಆದರೆ ಲೇಖಕಿಯರು ಹೀಗೆ ಹೇಳಲು ಕಾರಣವೇನೆಂದು ಹುಡುಕಿದರೆ ಅವರಿಗೆ ಸ್ತ್ರೀವಾದದ ಅಸ್ಮಿತೆಯು ಖಂಡಿತ ಅಗತ್ಯವಾದ ಸಂಗತಿಯಾಗಿದ್ದರೂ ತಮ್ಮ ಅಭಿವ್ಯಕ್ತಿಗೆ ಬೇಕಾದ ವಿಶಾಲವಾದ ಭಿತ್ತಿ ಇದರಿಂದ ಸಾಧಿತವಾಗುತ್ತದೆಯೇ ಎನ್ನುವ ಸಂದಿಗ್ಧದಲ್ಲಿದ್ದಾರೆ. ತಮ್ಮ ಸಾಹಿತ್ಯ, ಕಲೆ ಬರಿಯ 'ಸ್ತ್ರೀವಾದಿ ಪಠ್ಯ' ಎಂದು ಬಿಂಬಿತವಾದರೆ ಅದರ ವ್ಯಾಪಕ ಓದು ಸಾಧ್ಯವಾಗಲಾರದು ಎಂಬ ಆತಂಕ ಕೂಡ ಕೆಲಸ ಮಾಡುತ್ತದೆ. ಸೆಕ್ಟೇರಿಯನ್ ಆದ ಎಲ್ಲ ಸಾಹಿತ್ಯಕ್ಕೂ ಈ ಆತಂಕ ಇರುತ್ತದೆ. ಏಕೆಂದರೆ ಅದು ತಮ್ಮ ಅಸ್ಮಿತೆಯನ್ನು ಕೆಲವೊಮ್ಮೆ ಉತ್ಪ್ರೇಕ್ಷಿಸಿಕೊಳ್ಳಬೇಕಾಗುವ ವೇಳೆಯಲ್ಲೇ ಸಮಗ್ರತೆಯನ್ನೂ ಅಪೇಕ್ಷಿಸುತ್ತಿರುತ್ತದೆ.

ವಾಸ್ತವವಾಗಿ ಸ್ತ್ರೀವಾದ ಇನ್ನೂ ಸರಿಯಾಗಿ ಮೂಡಿಯೇ ಇಲ್ಲ. ಆಗಲೇ ಗ್ರಹಣ ಬಡಿದಂತೆ ಅನೇಕರು ಅದು ಮುಗಿದು ಹೋದ ಕತೆ/ಸಂಕಥನ ಎಂದು ಅದನ್ನು ಪಕ್ಕಕ್ಕೆ ಸರಿಸುತ್ತಿದ್ದಾರೆ. ಇದು ಸ್ತ್ರೀವಾದಕ್ಕೆ ನಿಜಕ್ಕೂ ಪರೀಕ್ಷಾ ಸಮಯ. ಅದು ತನ್ನ ಪರಿಭಾಷೆ, ನುಡಿಗಟ್ಟು, ಅಭಿವ್ಯಕ್ತಿ ಎಲ್ಲವಕ್ಕೂ ಹೊಸತನದ ಸ್ಪರ್ಶ ಕೊಡಬೇಕಿದೆ. ಇಲ್ಲವಾದರೆ ಕ್ಲೀಷೆಗಳ ಮಹಾಪೂರದಲ್ಲಿ ಅದು ಏನನ್ನು ಹೇಳಬೇಕಿದೆಯೋ ಅದನ್ನು ಹೇಳಲಾಗದೆ, ಅರ್ಥ ಮಾಡಿಸಲು ಸಾಧ್ಯವಾಗದೆ ಹಿಮ್ಮೆಟ್ಟ ಬೇಕಾಗುತ್ತದೆ. ಸಾಮಾನ್ಯವಾಗಿ ಸ್ತ್ರೀವಾದವನ್ನು ಆವರಿಸಿರುವ ಪರಿಭಾಷೆ ಹಾಗು ಅದರ ಗೋಳುಗಳ ಸಂಕಥನಗಳ ಪುನರಾವರ್ತನೆ ಸ್ತ್ರೀವಾದವನ್ನು ದೂರೀಕರಿಸಿ ನೋಡಲು ಪ್ರಬಲವಾದ ಕಾರಣಗಳು. ಅವನ್ನು ಹೇಗೆ ದಾಟಿಕೊಳ್ಳಬೇಕು ಎಂದು ಚಿಂತಿಸಬೇಕಾದ ಸಮಯ ಈಗ ಬಂದಿದೆ ಎನಿಸುತ್ತೆ.

ಸ್ತ್ರೀವಾದವು ತನ್ನ ವೈಶಾಲ್ಯವನ್ನು ಸಾಧಿಸುತ್ತಾ ಹೊಸ ಹೊಸ ಸಂಕಥನಗಳನ್ನು ಕಟ್ಟಿಕೊಳ್ಳುತ್ತಿದೆ. ರಾಷ್ಟ್ರೀಯತೆ, ವಸಾಹತುಶಾಹಿ ನೆಲೆಗಳು, ತೃತೀಯ ಜಗತ್ತಿನ ಪ್ರತಿನಿಧೀಕರಣ, ಪರಿಸರ, ಸಮಗ್ರ ಮಾನವೇತಿಹಾಸ ಹೀಗೆ ಅದರ ಮುಂಚಾಚುಗಳನ್ನು ಗಮನಿಸದೆ ಸ್ತ್ರೀವಾದವು ಸ್ಥಗಿತಗೊಳ್ಳುತ್ತಿದೆ ಎನ್ನುವುದು ಅವಸರದ ತೀರ್ಮಾನವಾಗುತ್ತದೆ. ಅನೇಕ ಹಂತಗಳನ್ನು ದಾಟಿ ಬಂದಿರುವ ಸ್ತ್ರೀವಾದವು ಇಂದು  ಅಖಂಡ ಸೋದರಿತ್ವದ ಜೊತೆಗೆ ಸಾಮಾಜಿಕವಾಗಿ ಸ್ಥಿರಗೊಂಡ ಕೆಲವು ಸಂರಚನೆಗಳ ಪಾತಳಿಯಲ್ಲಿ ಎಷ್ಟೊಂದು ಸ್ತ್ರೀವಾದಗಳಿವೆ ಎನ್ನುವುದನ್ನು ಗುರುತಿಸತೊಡಗಿ, ಹೊಸ ದಿಕ್ಕು ದೆಸೆಗಳನ್ನು ಶೋಧಿಸಿಕೊಳ್ಳುತ್ತಿದೆ. ಆ ಪ್ರಯತ್ನಗಳನ್ನು ಸಮಾಜಕ್ಕೆ, ಸಾಹಿತ್ಯಕ್ಕೆ ಕಾಣಿಸುವ ಸವಾಲು ಅದರ ಮುಂದಿದೆ. *

# ಹವಾಮಾನ ಬದಲಾವಣೆಯ ರಾಜಕೀಯ ಆರ್ಥಿಕತೆ ಮತ್ತು ಪರಿಸರ ಸ್ತ್ರೀವಾದ

– ವಿಭೂತಿ ಪಟೇಲ್



ಲಿಂಗ ಮತ್ತು ಅಭಿವೃದ್ಧಿ ಅರ್ಥಶಾಸ್ತ್ರವು ಪ್ರಕೃತಿಯ ದುರ್ಬಳಕೆ, ಪ್ರಕೃತಿಯ ಅವನತಿ ಮತ್ತು ಮಹಿಳೆಯರ ದಮನ ಇವುಗಳ ನಡುವೆ ಒಂದು ಸಂಬಂಧವಿರುವುದನ್ನು ಗುರುತಿಸುತ್ತದೆ. ೧೯೭೦ರ ಮಧ್ಯಭಾಗದಲ್ಲಿ ಸ್ತ್ರೀವಾದದ ದ್ವಿತೀಯ ಅಲೆ ಮತ್ತು ಪರಿಸರ ಚಳುವಳಿಗಳ ಜೊತೆಯಲ್ಲಿ ಪರಿಸರ ಸ್ತ್ರೀವಾದ (Eco-feminism) ಜನ್ಮ ತಳೆಯಿತು. ಪರಿಸರ ಸ್ತ್ರೀವಾದವು ಸ್ತ್ರೀವಾದ ಮತ್ತು ಪರಿಸರವಾದವನ್ನು ಒಟ್ಟುಗೂಡಿಸುತ್ತದೆ. ಅದೇ ಸಮಯದಲ್ಲಿ ಇವೆರಡಕ್ಕೂ ಒಂದು ಸವಾಲನ್ನೂ ಒಡ್ಡುತ್ತದೆ. ಮನುಷ್ಯೇತರ ಪ್ರಪಂಚದ ಮೇಲೆ ಮನುಷ್ಯ ಚಟುವಟಿಕೆಗಳ ಪರಿಣಾಮವನ್ನು ಕುರಿತ ತಿಳುವಳಿಕೆಯನ್ನು ಅದು ಪರಿಸರವಾದದಿಂದ ಪಡೆದುಕೊಳ್ಳುತ್ತದೆ. ಹಾಗೆಯೇ ಸ್ತ್ರೀಯರನ್ನು ಅಧೀನಗೊಳಿಸಿ ದಮನ ಮಾಡುವ ರೀತಿಯಲ್ಲಿ ಮನುಕುಲದ ದೃಷ್ಟಿ ಲಿಂಗಾಧಾರಿತಗೊಂಡಿರುವುದನ್ನು ಕುರಿತ ತಿಳುವಳಿಕೆಯನ್ನು ಸ್ತ್ರೀವಾದದಿಂದ ಪಡೆದುಕೊಳ್ಳುತ್ತದೆ. ಅದು ಒಂದು ಸಕ್ರಿಯವೂ, ಶೈಕ್ಷಣಿಕವೂ ಆದ ಚಳುವಳಿಯಾಗಿದ್ದು, ಪ್ರಕೃತಿಯ ಮೇಲಿನ ಆಕ್ರಮಣಕ್ಕೂ ಮಹಿಳೆಯರ ಶೋಷಣೆಗೂ ನಡುವೆ ಒಂದು ತೀವ್ರವಾದ ಸಂಬಂಧವಿರುವುದನ್ನು ಅದು ಗುರುತಿಸುತ್ತದೆ. ೧೯೮೦ ಮತ್ತು ೧೯೯೦ರ ದಶಕದಲ್ಲಿ ಅಣುಶಕ್ತಿ ವಿರೋಧಿ ಚಳುವಳಿ, ಪರಿಸರ ಚಳುವಳಿ ಮತ್ತು ಮಹಿಳೆಯರ ಹಕ್ಕುಗಳ ಚಳುವಳಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಮಹಿಳೆಯರಿಂದ ಪಾರಿಸರಿಕ ಸ್ತ್ರೀವಾದಿ ಚಳುವಳಿ ಹುಟ್ಟಿಕೊಂಡಿತು.

ಪಾರಿಸರಿಕ ಸ್ತ್ರೀವಾದಿಗಳು ಹೇಳುವುದು ಇದು: ಇನ್ನು ಕಾಯುವುದು ಸಾಧ್ಯವಿಲ್ಲ. ಒಂದು ಆಪತ್‌ಸ್ಥಿತಿಯಲ್ಲಿ ನಾವಿದ್ದೇವೆ. ನಾವು ಏನಾದರೂ ಮಾಡಲೇ ಬೇಕು. ವಿಶ್ವದಾದ್ಯಂತ ಆರ್ಥಿಕತೆಗಳು, ಸಂಸ್ಕೃತಿಗಳು ಮತ್ತು ಪ್ರಾಕೃತಿಕ ಸಂಪತ್ತು ದಾಳಿಗೀಡಾಗಿವೆ. ಇದರಿಂದ ಪ್ರಪಂಚದಲ್ಲಿ ಕೇವಲ ಶೇ.೨೦ರಷ್ಟಿರುವ ವಿಶೇಷ ಸವಲತ್ತಿನ ಅಧಿಪತಿಗಳಾದ ಉತ್ತರ ಅಮೇರಿಕನ್ನರು ಮತ್ತು ಯೂರೋಪಿಯನ್ನರು 'ಅಭಿವೃದ್ಧಿ'ಯ ಹೆಸರಿನಲ್ಲಿ ಶೇ. ೮೦ರಷ್ಟು ಸಂಪತ್ತನ್ನು ಕಬಳಿಸುವುದನ್ನು ಮುಂದುವರೆಸಬಹುದು. ಆದುದರಿಂದ ನಮ್ಮ ಗುರಿ, ಉತ್ತರ(ಗೋಳ)ವು ದಕ್ಷಿಣ(ಗೋಳ)ವನ್ನು, ಪುರುಷರು ಸ್ತ್ರೀಯರನ್ನು ಶೋಷಣೆ ಮಾಡುವ ಮೂಲಕ ಹೆಚ್ಚು ಹೆಚ್ಚು ಪ್ರಾಕೃತಿಕ ಸಂಪತ್ತನ್ನು ಹೆಚ್ಚು ಹೆಚ್ಚು ಆತುರದಿಂದ ಕೊಳ್ಳೆ ಹೊಡೆದು ಹೆಚ್ಚು ಹೆಚ್ಚು ಅಸಮಾನತೆಗಳನ್ನು ಉಂಟು ಮಾಡುವ ಈ ಸಂಕುಚಿತ ದೃಷ್ಟಿಯನ್ನು ಮೀರಿ ನಲ್ಲಲು ನಮ್ಮಲ್ಲಿಯ ವೈವಿಧ್ಯತೆಯನ್ನು ವಿಭಿನ್ನ ರೀತಿಯಲ್ಲಿ ಪ್ರಕಟಗೊಳಿಸುವುದಾಗಿದೆ. ಪರಿಸರದ ನಾಶವನ್ನು ಎಲ್ಲೆಲ್ಲೂ ಮೊದಲು ಪ್ರತಿಭಟಿಸಿದವರು ಮಹಿಳೆಯರೇ. ಪರಿಸರ ಚಳುವಳಿಯಲ್ಲಿದ್ದ ನಮಗೆ, ವಿಜ್ಞಾನ ಮತ್ತು ತಂತ್ರಜ್ಞಾನವೂ ಕೂಡ ಲಿಂಗ–ತಟಸ್ಥವಲ್ಲ ಎಂಬುದು ಸ್ಪಷ್ಟವಾಯಿತು. ಇದರಿಂದಾಗಿ, ಮನುಷ್ಯ ಮತ್ತು ಪ್ರಕೃತಿಯ ನಡುವಿನ ಶೋಷಕ ಪ್ರವೃತ್ತಿಯ ಸಂಬಂಧ ಮತ್ತು ಅತ್ಯಂತ ಆಧುನಿಕ ಕೈಗಾರಿಕೀಕೃತ ಸಮಾಜಗಳನ್ನು ಒಳಗೊಂಡಂತೆ ಎಲ್ಲಾ ಪಿತೃ ಪ್ರಧಾನ ವ್ಯವಸ್ಥೆಗಳಲ್ಲಿ ಇರುವ ಮಹಿಳೆ ಮತ್ತು ಪುರುಷರ ನಡುವಿನ ಶೋಷಣಾತ್ಮಕ ಮತ್ತು ದಮನಾತ್ಮಕ ಸಂಬಂಧ ಇವೆರಡರ ನಡುವೆ ಇರುವ ಸಂಬಂಧ ನಮಗೆ ಸ್ಪಷ್ಟವಾಗ ತೊಡಗಿದೆ.





ಅತ್ಯಂತ ಬಡವರಾದ ಜನ ಪರಿಸರ ಮಾಲಿನ್ಯಕ್ಕೆ ಕನಿಷ್ಠ ಕಾರಣರಾದವರು. ಆದರೆ ಮಾಲಿನ್ಯದ ಸಂಕಷ್ಟಕ್ಕೆ ಹೆಚ್ಚು ಸಿಲುಕಿದವರು ಅವರೇ ಎಂದು ವಿಶ್ವಸಂಸ್ಥೆಯ ಅಧ್ಯಯನಗಳು ಹೇಳುತ್ತವೆ. ವಂಚಿತರಲ್ಲಿಯೇ ವಂಚಿತರು ಎಂದರೆ ಮಹಿಳೆಯರೇ. ವಿಶ್ವದ ಒಟ್ಟು ಆಹಾರೋತ್ಪಾದನೆಯಲ್ಲಿ ಶೇ.೫೦ರಷ್ಟು ಮಹಿಳೆಯರ ಕೊಡುಗೆ. ಆದರೆ ಅತ್ಯಂತ ಅಸಮಾನ ಪರಿಣಾಮ ಬೀರುವ ನಮ್ಮ ಕಾಲದ ಒಂದು ಪಿಡುಗಾಗಿರುವ ಪಾರಿಸರಿಕ ಆಪತ್ತು ಸಂಭವಿಸಿದಾಗ ಹೆಚ್ಚು ನೋವುಣ್ಣುವವರೂ ಅವರೇ. ಏಕೆಂದರೆ ಕೃಷಿ ಕಾರ್ಮಿಕರಲ್ಲಿ ಹೆಚ್ಚಿನ ಭಾಗ ಮಹಿಳೆಯರೇ ಮತ್ತು ಈ ಪಿಡುಗಿನಿಂದ ಆದಾಯ ಗಳಿಕೆಯ ಅವಕಾಶಗಳು ಕಡಿಮೆಯಾಗುವುದು ಮಹಿಳೆಯರಿಗೇ.

ಏಷ್ಯಾ ಖಂಡದಲ್ಲಿ ಹವಾಮಾನದ ವೈಪರಿತ್ಯದಿಂದ ಹೆಣ್ಣುಮಕ್ಕಳ ಸಂಕಷ್ಟಗಳು ತೀವ್ರಗೊಂಡಿವೆ. ಏಷ್ಯಾದ ೨.೨ ಬಿಲಿಯನ್‌ನಷ್ಟು ಜನ ತಮ್ಮ ಹೊಟ್ಟೆಪಾಡಿಗಾಗಿ ಕೃಷಿಯನ್ನು ಅವಲಂಬಿಸಿರುವುದರಿಂದ ನೆರೆ, ಬರ, ಅನಿಯಮಿತ ಮಳೆ ಮತ್ತು ಇತರೆ ಪರಿಸರಿಕ ವೈಪರೀತ್ಯಗಳ ಪರಿಣಾಮವಾಗಿ ಕ್ಷೀಣಿಸುವ ಇಳುವರಿಯಂಥ ಅಪಾಯವನ್ನು ಇವರು ಎದುರಿಸುತ್ತಿದ್ದಾರೆ. ಸದ್ಯದ ಹವಾಮಾನ ವೈಪರೀತ್ಯದ ಮಾದರಿಯು ೨೦೫೦ರ ಹೊತ್ತಿಗೆ ಅಕ್ಕಿಯ ಬೆಲೆ ಶೇ. ೨೯ರಿಂದ ೩೭ ಜೋಳದ ಬೆಲೆ ಶೇ. ೫೮ರಿಂದ ೯೭ ಮತ್ತು ಗೋಧಿಯ ಬೆಲೆ ಶೇ. ೮೧ರಿಂದ ೧೦೨ರಷ್ಟು ಹೆಚ್ಚುತ್ತದೆ ಎಂದು ವಿಶ್ವಸಂಸ್ಥೆಯ ವರದಿಯೊಂದು ಹೇಳುತ್ತದೆ. ಕುಟುಂಬದ ಆಹಾರ ಜವಾಬ್ದಾರಿಯನ್ನು ಹೊತ್ತಿರುವ ಮಹಿಳೆಯರು ಇಂತಹ ಸಂದರ್ಭದಲ್ಲಿ ಅತ್ಯಂತ ಹೆಚ್ಚಿನ ಹೊರೆಯನ್ನು ಹೊರಬೇಕಾಗುತ್ತದೆ.

ಭಾರತದಲ್ಲಿ ನೂರಕ್ಕೆ ೮೪ ಕ್ಕಿಂತಲೂ ಹೆಚ್ಚಿನ ಮಹಿಳೆಯರು ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಹಾಗಾಗಿ ಹವಾಮಾನ ವೈಪರೀತ್ಯದ ಪರಿಣಾಮಗಳ ಹೆಚ್ಚಿನ ಬಲಿಪಶುಗಳು ಮಹಿಳೆಯರೇ. ಜೊತೆಗೆ ಲಿಂಗ ತಾರತಮ್ಯವು ಅವರನ್ನು ಈ ವಿಷಯದಲ್ಲಿ ಅಸಮಾನ ಪ್ರಮಾಣದಲ್ಲಿ ಅಪಾಯಕ್ಕೀಡು ಮಾಡುತ್ತದೆ. ಭಾರತೀಯ ಮಹಿಳೆಯರು ಪರಿಸರದ ಏರುಪೇರಿನಿಂದ ಅತಿ ಹೆಚ್ಚು ಬಾಧಿಸಲ್ಪಡುತ್ತಾರೆ. ಕುಟುಂಬಗಳಲ್ಲಿ ಆಹಾರ ನೀರು ಒದಗಿಸುವ ಜವಾಬ್ದಾರಿ ಮಹಿಳೆಯರದ್ದೇ ಆಗಿರುವುದರಿಂದ ಬಡ ಕುಟುಂಬಗಳನ್ನು ಪಾರಿಸರಿಕ ವಿಪತ್ತುಗಳು ಬಾಧಿಸಿದಾಗ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲೆ ಕೆಲಸದ ಹೊರೆ ಹೆಚ್ಚುತ್ತದೆ. ಇದರಿಂದಾಗಿ ಅವರು ಸಬಲೀಕರಣದ ಅವಕಾಶಗಳಿಂದ ವಂಚಿತರಾಗುತ್ತಾರೆ. ೧೯೭೦ರಲ್ಲಿ ಬರ ಅಥವಾ ಪ್ರವಾಹದ ಸಂದರ್ಭಗಳಲ್ಲಿ ಜನಿಸಿದ ಹೆಣ್ಣು ಮಕ್ಕಳು ಪ್ರಾಥಮಿಕ ಶಾಲೆಗೆ ಹೋಗುವ ಅವಕಾಶದಿಂದ ಶೇ. ೧೯ರಷ್ಟು ವಂಚಿತರಾಗಿದ್ದಾರೆ ಎಂಬುದು ಅಧ್ಯಯನದಿಂದ ತಿಳಿದು ಬಂದಿದೆ. ಹೀಗೆ ಪಾರಿಸರಿಕ ಏರುಪೇರು ತೀವ್ರಗೊಂಡಂತೆ ಭಾರತದ ಅತ್ಯಂತ ಬಡ ಹೆಣ್ಣುಮಕ್ಕಳು ಆರಂಭಿಕ ಹಂತದಲ್ಲಿಯೇ ಅಭಿವೃದ್ಧಿಯಲ್ಲಿ ಭಾಗವಹಿಸುವ ಅವಕಾಶದಿಂದ ವಂಚಿತರಾಗುತ್ತಾರೆ.

ವಾತಾವರಣದಲ್ಲಿನ ಏರುಪೇರುಗಳು ಹವಾಮಾನದ ವೈಪರೀತ್ಯದ ಆವರ್ತನೆ ಮತ್ತು ತೀವ್ರತೆಯನ್ನು ಹೆಚ್ಚಿಸಲಿದೆ ಎಂದು



ಅಧ್ಯಯನಗಳು ತಿಳಿಸುತ್ತವೆ. ಇದರಿಂದ ವಿಶ್ವದಾದ್ಯಂತ ಪ್ರಾಕೃತಿಕ ವಿಕೋಪಗಳು ಹೆಚ್ಚಬಹುದು ಎಂದೂ ಹೇಳಲಾಗುತ್ತಿದೆ. ಲಂಡನ್ ಅರ್ಥಶಾಸ್ತ್ರ ವಿದ್ಯಾಲಯವು ೨೦೦೭ರಲ್ಲಿ ೧೯೮೧ರಿಂದ ೨೦೦೨ರ ನಡುವಿನ ಅವಧಿಯಲ್ಲಿ ೧೪೧ ದೇಶಗಳಲ್ಲಿ ಉಂಟಾದ ಪ್ರಾಕೃತಿಕ ವಿಕೋಪಗಳ ಅಧ್ಯಯನ ನಡೆಸಿದ್ದು ಅದು ಪ್ರಾಕೃತಿಕ ವಿಕೋಪಗಳು ಮಹಿಳೆಯರ ಸರಾಸರಿ ಜೀವಿತಾವಧಿಯನ್ನು ಕಡಿಮೆ ಮಾಡುವುದನ್ನು ಕಂಡು ಕೊಂಡಿದೆ.

ಪ್ರಕೃತಿ ವಿಕೋಪಗಳ ಸಂದರ್ಭಗಳಲ್ಲಿ ಪುರುಷರಿಗೆ ಹೋಲಿಸಿದರೆ ಮಹಿಳೆಯರು ಮತ್ತು ಮಕ್ಕಳು ಸಾವಿಗೀಡಾಗುವ ಸಾಧ್ಯತೆ ೧೪ ಪಟ್ಟು ಹೆಚ್ಚು. ವಿಕೋಪಗಳಿಂದ ಸಾಯುವವರಲ್ಲಿ ಶೇ.೮೫ ಮಹಿಳೆಯರೇ ಉದಾಹರಣೆಗೆ, ೨೦೦೪ರ ಏಷ್ಯಾದ ಸುನಾಮಿಯ ಸಂದರ್ಭದಲ್ಲಿ ಸತ್ತವರಲ್ಲಿ ಶೇ.೭೦-೮೦ರಷ್ಟು ಮಹಿಳೆಯರು. ೧೯೯೧ರಲ್ಲಿ ಬಾಂಗ್ಲಾದಲ್ಲಿ ಚಂಡಮಾರುತ ಅಪ್ಪಳಿಸಿದಾಗ ಮಡಿದವರಲ್ಲಿ ಶೇ.೯೦ರಷ್ಟು ಮಹಿಳೆಯರು. ಕತ್ರಿನಾ ಎಂಬ ಚಂಡಮಾರುತದಿಂದ ಸ್ಥಳಾಂತರಗೊಂಡವರಲ್ಲಿ ಶೇ. ೮೩ರಷ್ಟು ಜನ ಕಡಿಮೆ ಆದಾಯದ ಒಂಟಿ ತಾಯಂದಿರು ಎಂದು ತಿಳಿದು ಬಂದಿದೆ.

ಪಾರಿಸರಿಕ ಏರುಪೇರು ಉಂಟಾದಾಗಲೆಲ್ಲ ಅದಕ್ಕೆ ಹೊಂದಿಕೊಂಡು ಪರಿಣಾಮದ ತೀವ್ರತೆಯನ್ನು ಕಡಿಮೆ ಮಾಡುವ ವಿಶೇಷವಾದ ಸಾಮರ್ಥ್ಯ ಮತ್ತು ತಿಳುವಳಿಕೆ ಹೆಣ್ಣುಮಕ್ಕಳಲ್ಲಿರುತ್ತದೆ. ಆದರೆ ಇಂಥ ವಿಚಾರದಲ್ಲಿ ಮುಂದೊಡಗಲು ಅವರಿಗೆ ಸಂಪನ್ಮೂಲದ ಕೊರತೆ ಅಡ್ಡಿಯಾಗುತ್ತದೆ. ಆರ್ಥಿಕ ಸ್ವಾತಂತ್ರ್ಯ, ಆಸ್ತಿಯ ಉತ್ತರಾಧಿಕಾರತ್ವದ ಹಕ್ಕು, ಸಂಪನ್ಮೂಲಗಳಿಗೆ ಪ್ರವೇಶ, ವಿದ್ಯೆ, ತಂತ್ರಜ್ಞಾನ ಇವುಗಳ ಕೊರತೆಯಿಂದ ಮಹಿಳೆಯರು ನಿರ್ಬಂಧಿತರಾಗಿದ್ದಾರೆ. ಪಾರಿಸರಿಕ ಏರುಪೇರಿನಿಂದಾಗುವ ಪರಿಣಾಮಗಳ ತೀವ್ರತೆಯನ್ನು ತಗ್ಗಿಸುವ ನಟ್ಟಿನ ಕಾರ್ಯಕ್ರಮ-ಒಡಂಬಡಿಕೆಗಳ ರಚನೆ ಮತ್ತು ಅನುಷ್ಠಾನದ ವಿಚಾರದಲ್ಲಿ ಮಹಿಳೆಯರ ಪ್ರಾತಿನಿಧ್ಯ ಬಹಳವೇ ಕಡಿಮೆಯಿದೆ.

ಈ ವಾಸ್ತವವನ್ನು ಮತ್ತಷ್ಟು ಕಠಿಣಗೊಳಿಸಿರುವ ವಿಚಾರವೆಂದರೆ ರಾಜಕೀಯ ನೀತಿಗಳನ್ನು ರೂಪಿಸುವ ಮತ್ತು ನಿರ್ಧಾರ ಕೈಗೊಳ್ಳುವ ವಲಯಗಳಲ್ಲಿ ಮಹಿಳೆಯರಿಗಿರುವ ಅತ್ಯಂತ ಕಡಿಮೆ ಪ್ರಾತಿನಿಧ್ಯ. ಹಾಗೇ, ಪ್ರಪಂಚದಾದ್ಯಂತ ಇರುವ ಲಿಂಗಾಧಾರಿತ ಅಸಮಾನತೆಯಿಂದಾಗಿ ಮಹಿಳೆಯರು ಶಿಕ್ಷಣ, ಮಾಹಿತಿ, ಸಂಚಾರ ಸ್ವಾತಂತ್ರ್ಯ, ಭೂ ಒಡೆತನ ಇವುಗಳ ಮೇಲಿನ ಸಾಂಪ್ರದಾಯಿಕ ಮತ್ತು ಕೆಲವೆಡೆಯ ಕಾನೂನಾತ್ಮಕ ನಿರ್ಬಂಧಗಳ ವಿರುದ್ಧ ಹೋರಾಡಬೇಕಾದ ಸ್ಥಿತಿ.

ಏಷ್ಯಾದಲ್ಲಿಯ ಒಟ್ಟು ಆಹಾರ ಉತ್ಪಾದನೆಯಲ್ಲಿ ಮಹಿಳೆಯರ ಕೊಡುಗೆ ಶೇ. ೬೦. ಆಫ್ರಿಕಾದ ಆಹಾರೋತ್ಪಾದನೆಯಲ್ಲಿ ಮಹಿಳೆಯರ ಪಾಲು ಶೇ. ೮೦. ಆದರೆ ವಿಶ್ವದಾದ್ಯಂತ ಕೃಷಿ ಸಾಲದಲ್ಲಿ ಮಹಿಳೆಯರ ಪಾಲು ಬರೀ ಶೇ. ೧! ದೃಢಕಾಯರಾದ ಪುರುಷರು ಜೀವನೋಪಾಯವನ್ನು ಅರಸುತ್ತಾ ನಗರಗಳಲ್ಲಿ ತಿರುಗುತ್ತಿದ್ದಾರೆ. ಇದರಿಂದಾಗಿ ೧೯೭೦ರ ಮಧ್ಯಭಾಗದಲ್ಲಿ ತಮ್ಮ ಚಿಪ್ಕೋ ಚಳುವಳಿಯ ಮೂಲಕ ಚಮೋಲಿ ಜಿಲ್ಲೆಯ ಅರಣ್ಯ ಮಾಫಿಯಾವನ್ನು ಎದುರಿಸಿದ ರೇನಿ ಎಂಬ ಗ್ರಾಮದ ಮಹಿಳೆಯರು ಅಥವಾ ತಮ್ಮ ಕಾಡನ್ನು



ಬೋಳಿಸುತ್ತಿರುವ ಮಧ್ಯಪ್ರದೇಶದ ಸೋಂಡ್ವಾ ಬ್ಲಾಕ್‌ನಲ್ಲಿ ಗಸ್ತು ತಿರುಗುವ ಭಿಲ್ ಆದಿವಾಸಿ ಮಹಿಳೆಯರು ಇಂದು ಹಿಂದಿನ ಕಾಲದಲ್ಲಿ ಮಹಿಳೆಯರಿಗೆ ನಿಷೇಧಿತವಾಗಿದ್ದ ಉಳುಮೆಯಂಥಾ ಕೆಲಸಗಳನ್ನು ಒಳಗೊಂಡಂತೆ ಕನಿಷ್ಠ ಆದಾಯದ ಕೃಷಿ ಕೆಲಸಗಳನ್ನು ಮಾಡಬೇಕಾಗಿದೆ.

ತನ್ನ ಪ್ರದೇಶಕ್ಕೆ ಇತ್ತೀಚಿಗೆ ಅಪ್ಪಳಿಸಿದ ಹಲವಾರು ಚಂಡಮಾರುತಗಳಿಗೆ ಪಶ್ಚಿಮ ಬಂಗಾಳದ ಸುಂದರ ಬನದ ಶ್ಯಾಮಲಿದಾಸ್ ಸಾಕ್ಷಿಯಾಗಿದ್ದಾಳೆ. ಚಂಡಮಾರುತ ಅಪ್ಪಳಿಸಿದ ವಿಶಾಲವಾದ ಗದ್ದೆ ಬಯಲುಗಳು ಬಹುಕಾಲ ನೀರಲ್ಲಿ ಮುಳುಗಿಸಿದವು. ಒಂದು ಮೀನುಗಾರಿಕಾ ಸಮುದಾಯದ ಸದಸ್ಯೆಯಾದ ಆಕೆ ಸುಮಾರು ೨೦ ಜಾತಿಯ ಮೀನುಗಳ ನಾಶದ ಪರಿಣಾಮಗಳನ್ನು ಅನುಭವಿಸಬೇಕಾಯಿತು. "ಹವಾಮಾನ ಬದಲಾವಣೆಗೆ ಹೊಂದಿಕೊಂಡು ಅದರ ಪರಿಣಾಮಗಳನ್ನು ನಿವಾರಿಸಿಕೊಳ್ಳುವ ನಮ್ಮನ್ನು ಮತ್ತು ನಮ್ಮ ತಿಳುವಳಿಕೆಗೆ ಅಧಿಕೃತ ಮಾನ್ಯತೆ ನೀಡಿ" ಎಂಬುದು ಆಕೆಯ ಅಹವಾಲು.

ಆಹಾರವು ಒಂದು ಮಾನವ ಹಕ್ಕು. ಅದು ಸಟ್ಟಾ ವ್ಯವಹಾರದ ಕಾರ್ಪೋರೇಟ್ ವಸ್ತುವಲ್ಲ. ಪ್ರಕೃತಿ ಮಾತೆಯು ಬೋರ್ಡ್ ರೂಂ ಲಾಭದ ಆಧಾರದಲ್ಲಿ ಕೆಲಸ ಮಾಡುವುದಿಲ್ಲ. ಆದರೆ ಕಾರ್ಪೋರೇಟ್ ಲಾಭವೆಂಬುದು ಇಂದು ದೊಡ್ಡ ಆಹಾರ ಬಿಕ್ಕಟ್ಟಿಗೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಹವಾಮಾನದ ವೈಪರೀತ್ಯದ ಪರಿಣಾಮವನ್ನು ತಗ್ಗಿಸುವಲ್ಲಿ ಭಾರತೀಯ ಮಹಿಳೆಯೊಬ್ಬಳ ಪ್ರಯತ್ನ 'ಗಮನಾರ್ಹವಾಗಿದೆ. ಭಾರತದ ಶ್ರೇಣೀಕೃತ ಸಮಾಜದ ಅತ್ಯಂತ ಕೆಳಸ್ತರದ ದಲಿತ ಹೆಣ್ಣು ಮಗಳೊಬ್ಬಳು ಜಹೀರಾಬಾದ್ ಎಂಬಲ್ಲಿ ಹೆಚ್ಚು ನೀರು, ರಾಸಾಯನಿಕ ಪೋಷಕಾಂಶ ಮತ್ತು ಕೀಟನಾಶಕಗಳನ್ನು ಬೇಡದ ರೀತಿಯಲ್ಲಿ ಬೆಳೆಗಳನ್ನು ಮಿಶ್ರ ಮಾಡಿ ಬೇಸಾಯ ಮಾಡುವ ಮೂಲಕ ಹವಾಮಾನದ ಏರುಪೇರುಗಳ ದುಷ್ಪರಿಣಾಮಗಳನ್ನು ನಿವಾರಿಸಿಕೊಳ್ಳುವ ಒಂದು ಹೊಸ ಬೆಳೆ ಪದ್ಧತಿಯನ್ನು ಪರಿಚಯಿಸಿದ್ದಾಳೆ. ಆ ಪ್ರಕಾರ ಅಲ್ಲಿನ ರೈತರು ತಾವೇ ಪುನರುಜ್ಜೀವನಗೊಳಿಸಿದ ಒಣ ಬರಡು ಭೂಮಿಯಲ್ಲಿ ಪ್ರತಿ ಎಕರೆಗೆ ೧೯ ಬಗೆಯ ಸ್ಥಳೀಯ ತಳಿಗಳ ಬೆಳೆಗಳನ್ನು ಬೆಳೆಯುತ್ತಾರೆ. ಇದರಿಂದ ಸ್ಫೂರ್ತಿಗೊಂಡು ದಕ್ಷಿಣ ಭಾರತದ ಒಳಭಾಗದ ೭೫ ಹಳ್ಳಿಗಳಲ್ಲಿ ಹರಡಿಕೊಂಡಿರುವ ೫೦೦೦ ಮಹಿಳೆಯರು, ರಾಸಾಯನಿಕ ಮುಕ್ತವಾದ, ನೀರಾವರಿಯಿಲ್ಲದ ಸಾವಯವ ಕೃಷಿ ಮಾದರಿಯೊಂದನ್ನು ಭೂಮಿಯ ತಾಪಮಾನ ಹೆಚ್ಚಳದ ಪರಿಣಾಮಗಳ ನಿವಾರಣೆಯ ಒಂದು ವಿಧಾನವಾಗಿ ಪ್ರಸ್ತುತಪಡಿಸಿದ್ದಾರೆ.

ಇದೆಲ್ಲವೂ ಸಾಧ್ಯವಾಗಿರುವುದು ಮಹಿಳಾ ಸಮುದಾಯಗಳಲ್ಲಿ ಎಚ್ಚೆತ್ತ ಪರಿಸರ ಪ್ರಜ್ಞೆ ಮತ್ತು ಅದರಿಂದ ಒಡಮೂಡಿದ ಪರಿಸರ ಸ್ತ್ರೀವಾದದ ಪ್ರೇರಣೆಯಿಂದ ಎಂಬುದನ್ನೂ ನಾವು ಗಮನಿಸಬೇಕು.

**( ಕನ್ನಡಕ್ಕೆ: ಎಂ. ರಾಜು**
**ಕೃಪೆ: ಜನತಾ)**





## ಪಶ್ಚಿಮ ಘಟ್ಟಗಳ ಜೀವ ಪರಿಸರ ಸಂರಕ್ಷಣಾ ವರದಿ ವಿವಾದ

# ಕಸ್ತೂರಿರಂಗನ್‌ಗೆ ಮಾಧವ ಗಾಡ್ಗೀಳರ ಬಹಿರಂಗ ಪತ್ರ





ಪ್ರಿಯ ಡಾ. ಕಸ್ತೂರಿ ರಂಗನ್,

೧೯ನೇ ಶತಮಾನದ ವಿಜ್ಞಾನಿ ಮತ್ತು ಮಾನವತಾವಾದಿ ಜೆ.ಬಿ.ಎಸ್. ಹಾಲ್ಡೇನ್ ಬಗ್ಗೆ ನಿಮಗೆ ಗೊತ್ತಿರಬೇಕು. ಅವರು ಸೂಯೆಜ್‌ನ ಸಾಮ್ರಾಜ್ಯಶಾಹಿ ಆಕ್ರಮಣದ ವಿರುದ್ಧ ಪ್ರತಿಭಟನೆಯಾಗಿ ಇಂಗ್ಲೆಂಡನ್ನು ತ್ಯಜಿಸಿ ಭಾರತದ ಪ್ರಜೆತನವನ್ನು ಪಡೆದವರು ಅವರು ಸತ್ಯವು ನಾವು ಅಂದುಕೊಳ್ಳುವುದಕ್ಕಿಂತ ಅಷ್ಟೇ ಅಲ್ಲ, ಅಂದುಕೊಳ್ಳಬಲ್ಲುದದಕ್ಕಿಂತ ಹೆಚ್ಚು ಅಪರಿಚಿತವಾಗಿರುತ್ತದೆ ಎಂದಿದ್ದರು! ಪಶ್ಚಿಮ ಘಟ್ಟಗಳನ್ನು ಕುರಿತ ಉನ್ನತ ಹಂತದ ಕಾರ್ಯತಂಡ ನೀಡಿರುವ ಇತ್ತೀಚಿನ ವರದಿಯಲ್ಲಿ ನಿಮ್ಮಂತಹವರು ಪಾಲುದಾರರಾಗಿರುತ್ತೀರಿ ಎಂದು ನಾನೆಂದುಕೊಂಡಿರಲಿಲ್ಲ. ಆದರೆ ಹೌದಲ್ಲ, ಸತ್ಯ ನಾವು ಅಂದುಕೊಳ್ಳಬಲ್ಲದುದಕ್ಕಿಂತ ಅಪರಿಚಿತವಾಗಿರುತ್ತದೆ!

ನಾವು ವಿಸ್ತಾರವಾದ ಚರ್ಚೆ ಮತ್ತು ಕ್ಷೇತ್ರ ಕಾರ್ಯಗಳ ನಂತರ ಪಶ್ಚಿಮ ಘಟ್ಟಗಳ ಪರಿಸರ ಸೂಕ್ಷ್ಮತೆಯ ಸಂರಕ್ಷಣೆಗಾಗಿ ನೆಲಮಟ್ಟದ ಮಾಹಿತಿಯನ್ನಾಧರಿಸಿದ ಶ್ರೇಣೀಕೃತ ವಿಧಾನವೊಂದನ್ನು ಪರಿಸರ ಮತ್ತು ಅರಣ್ಯ ಖಾತೆಗೆ ಸಲ್ಲಿಸಿದ ನಮ್ಮ ವರದಿಯಲ್ಲಿ ಶಿಫಾರ್ಸು ಮಾಡಿದ್ದೆವು. ಆದರೆ ನೀವು ಅದನ್ನು ತಿರಸ್ಕರಿಸಿ, ಪಶ್ಚಿಮ ಘಟ್ಟಗಳನ್ನು ಎರಡು ವಿಭಾಗಗಳನ್ನಾಗಿ ಮಾಡಿ, ಹೆಚ್ಚೂ ಕಡಿಮೆ ಮೂರನೇ ಒಂದು ಭಾಗವನ್ನು ಬಂದೂಕುಗಳ ಮೂಲಕ ರಕ್ಷಿಸಬೇಕಾದ ನೈಸರ್ಗಿಕ ಭೂವಲಯವೆಂದೂ, ಉಳಿದ ಮೂರನೇ ಎರಡು ಭಾಗವನ್ನು ಈಗ ಗೋವಾದಲ್ಲಿ ಮುವ್ವತ್ತೈದು ಸಾವಿರ ಕೋಟಿ ರೂಪಾಯಿಗಳ ಹಗರಣವನ್ನು ಸೃಷ್ಟಿಸಿರುವ ಗಣಿಗಾರಿಕೆಯಂತಹ ಅಭಿವೃದ್ಧಿ ಚಟುವಟಿಕೆಗಳಿಗೆ ತೆರೆದಿಡಬಹುದಾದ ಸಾಂಸ್ಕೃತಿಕ ಭೂವಲಯವೆಂದು ವಿಂಗಡಿಸಿ ನೀಡಿದ್ದೀರಿ. ಇದು ಪರಿಸರ ವಿನಾಶದ ಮರುಭೂಮಿಯಲ್ಲಿ ಜೀವ ವೈವಿಧ್ಯತೆಯ ಓಯಸಿಸ್‌ಗಳನ್ನು ಕಾಪಾಡುವಂತಹ ಪ್ರಯತ್ನ ಮಾತ್ರವಾಗುತ್ತದೆ. ಏಕೆಂದರೆ, ಇಂತಹ ವಿಭಾಗೀಕರಣ ಬಹು ಬೇಗ ಓಯಸಿಸ್‌ಗಳನ್ನು ಮರುಭೂಮಿ ಆಕ್ರಮಿಸಿಕೊಳ್ಳುವಂತೆ ಮಾಡುತ್ತದೆ ಎಂದು ಪರಿಸರ ವಿಜ್ಞಾನದ ಪಾಠ ಹೇಳುತ್ತದೆ. ಸಮೃದ್ಧ ಜೀವ ವೈವಿಧ್ಯತೆಯ ಪ್ರದೇಶಗಳ ದೀರ್ಘಕಾಲಿಕ ಸಂರಕ್ಷರಣೆಗಾಗಿ ಸ್ವಾಭಾವಿಕ ಜೀವ ನೆಲೆಗಳ ಅವಿಚ್ಛನ್ನತೆಯನ್ನು ಕಾಪಾಡುವುದು ಮತ್ತು ಪಾರಿಸರಿಕ ಹಾಗೂ ಸಾಮಾಜಿಕ ಸ್ನೇಹಿಯಾದ ಅಂಶಗಳ ಸಂಯೋಜಿತ ನೀತಿಯನ್ನು ಅನುಸರಿಸುವುದು ಮುಖ್ಯವೆಂಬುದು ನಮ್ಮ ವರದಿಯ ಸೂಚನೆಯಾಗಿತ್ತು. ಹೆಚ್ಚಿನ ಆತಂಕ ಅರಣ್ಯ ಜೀವ ವೈವಿಧ್ಯತೆಗಿಂತ ನೈಸರ್ಗಿಕ ಜಲಮೂಲಗಳ ಜೀವ ವೈವಿಧ್ಯತೆಗಿದ್ದು, ಅದು ನೀವು ಯಾವುದನ್ನು ಸಾಂಸ್ಕೃತಿಕ ಭೂವಲಯವೆಂದು ವಿಂಗಡಿಸಿದ್ದೀರೋ ಅಲ್ಲಿಯೇ ಹೆಚ್ಚಾಗಿರುವುದು. ಅಲ್ಲದೆ, ನಮ್ಮ ಜನಸಮುದಾಯಗಳ ಬಹುಭಾಗದ ಬದುಕು ಮತ್ತು ಪೌಷ್ಠಿಕತೆಗಳ ದೃಷ್ಟಿಯಿಂದಲೂ ನೈಸರ್ಗಿಕ ಜಲಮೂಲಗಳ ರಕ್ಷಣೆ ಬಹು ಮುಖ್ಯವೆನಿಸುತ್ತದೆ. ಹಾಗಾಗಿಯೇ ನಾವು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಲೋಟ್ ಕೆಮಿಕಲ್ಸ್ ಕೈಗಾರಿಕಾ ಸಂಕೀರ್ಣವನ್ನೇ ಪ್ರತ್ಯೇಕವಾಗಿ ಅಧ್ಯಯನ ಮಾಡಿ, ಆ ಕೈಗಾರಿಕೆ ಹೇಗೆ ಕೇವಲ ೧೧ ಸಾವಿರ ಜನರಿಗೆ ಕೈಗಾರಿಕಾ ಉದ್ಯೋಗ ಒದಗಿಸಿದ್ದರ ಮರೆಯಲ್ಲಿ ಕಾನೂನುಗಳನ್ನೆಲ್ಲ ನಿರ್ಲಕ್ಷಿಸಿ ಸ್ಥಳೀಯ ಮೀನುಗಾರಿಕೆಯನ್ನು ಧ್ವಂಸಗೊಳಿಸಿ ೨೦ ಸಾವಿರ ಜನರ ಜೀವನೋಪಾಯವನ್ನೇ ನಾಶ ಮಾಡಿದೆ ಎಂಬುದನ್ನು ವಿಷದೀಕರಿಸಿದ್ದೆವು. ಆದರೂ ಸರ್ಕಾರ ಅಲ್ಲಿ ಮತ್ತಷ್ಟು ಪರಿಸರ ಮಾಲಿನ್ಯದ ಕೈಗಾರಿಕೆಗಳನ್ನು ಸ್ಥಾಪಿಸಬಯಸಿದೆ ಮತ್ತು ಅದಕ್ಕಾಗಿ ತಾನೇ ರಚಿಸಿದ ಕೈಗಾರಿಕಾ ವಲಯದ ನಕ್ಷೆಯನ್ನೇ ಅಸಿಂಧುಗೊಳಿಸುವ ಪ್ರಯತ್ನ ಮಾಡುತ್ತಿದೆ.



ನಿಮ್ಮ ವರದಿ ಆರ್ಥಿಕ ನೀತಿ–ನಿರ್ಧಾರಗಳ ವಿಷಯದಲ್ಲಿ ಸ್ಥಳೀಯ ಸಮುದಾಯಗಳು ಯಾವುದೇ ಪಾತ್ರ ವಹಿಸುವಂತಿಲ್ಲ ಎಂದು ಸೂಚಿಸುವ ಮೂಲಕ ಸಂವಿಧಾನ ದತ್ತವಾದ ಸ್ಥಳೀಯ ಜನತೆಯ ಮೂಲ ಅಧಿಕಾರಗಳನ್ನೇ ಮೊಟಕುಗೊಳಿಸುವ ಯತ್ನ ಮಾಡಿದೆ. ಹಾಗಾಗಿಯೇ, ನಿಮ್ಮ ವರದಿ ಲೋಟ್ ಸಂಸ್ಥೆ ಕಾನೂನು ಮೀರಿ ನಡೆಸಿರುವ ಪರಿಸರ ಮಾಲಿನ್ಯದ ವಿರುದ್ಧ ಯಾವುದೇ ಕ್ರಮ ಸೂಚಿಸದೆ ಅದರ ವಿರುದ್ಧ ಅಲ್ಲಿನ ಜನ ೧೮೦ ದಿನ ಕಾನೂನುಬದ್ಧವಾಗಿಯೇ ನಡೆಸಿದ ಶಾಂತಿಯುತ ಪ್ರತಿಭಟನೆಗಳನ್ನು ದಮನ ಮಾಡಲು ಪೋಲೀಸ್ ಬಲವನ್ನು ಬಳಸಿತೆಂದು ನಮ್ಮ ವರದಿ ನೀಡಿರುವ ಮಾಹಿತಿಯುನ್ನು ನಿರ್ಲಕ್ಷಿಸಿರುವುದು ನಮಗೆ ಆಶ್ಚರ್ಯವನ್ನೇನೂ ಉಂಟು ಮಾಡಿಲ್ಲ.

ಭಾರತದ ಸಾಂಸ್ಕೃತಿಕ ಲೋಕದಿಂದಾಗಿಯೇ ಜೀವ ವೈವಿಧ್ಯಯತೆಯ ಹಲವು ಮೌಲಿಕ ತಳಿಗಳು ಇಂದೂ ಉಳಿದಿವೆ. ಪಶ್ಚಿಮ ಘಟ್ಟಗಳಲ್ಲಿ ಮಾತ್ರ ಇರುವ ಸಿಂಹ ಬಾಲದ ಕಪಿ ಜಾತಿಯೊಂದು ಶೇ. ೭೫ರಷ್ಟು ಈ ಸಾಂಸ್ಕೃತಿಕ ಭೂವಲಯದ ಚಹಾ ತೋಟಗಳಲ್ಲಿಯೇ ವಾಸಿಸುವುದು. ನಾನು ವಾಸ ಮಾಡುತ್ತಿರುವ ಪುಣೆ ನಗರ ಆಧನಿಕ ಜೀವ ಪರಿಸರಶಾಸ್ತ್ರದಲ್ಲಿ ‘ಶ್ರೀಮಾತೆ’ಯೆಂದೇ ಕರೆಯಲಾಗುವ ಮತ್ತು ವ್ಯಾಪಕ ಜೀವ ವೈವಿಧ್ಯವನ್ನು ಪೋಷಿಸುವುದೆಂದು ಹೇಳಲಾದ ಆಲ, ಅರಳಿ ಮತ್ತು ಗುಲಾರ್ ಜಾತಿಯ ಅನೇಕ ಮರಗಳಿಂದ ತುಂಬಿದೆ. ಇಲ್ಲಿ ರಾತ್ರಿಯಿಡೀ ನವಿಲುಗಳ ಕೂಗು ಕೇಳಿಸುತ್ತಿರುತ್ತದೆ. ಮನೆಗಳ ಛಾವಣಿಗಳ ಮೇಲೆ ಹೋದರೆ ಅವು ಮುಕ್ತವಾಗಿ ನರ್ತಿಸುತ್ತಿರುವುದನ್ನು ಕಾಣಬಹುದು. ಭಾರತದ ಆಳವಾದ ಸಾಂಸ್ಕೃತಿಕ ಪರಂರೆಯಯಲ್ಲಿ ಬೇರುಬಿಟ್ಟಿರುವ ನಮ್ಮ ಸಾಮಾನ್ಯ ಜನತೆಯ ಬದುಕು ನಿಸರ್ಗದ ಬಗ್ಗೆ ಅಪಾರ ಗೌರವವನ್ನಿಟ್ಟುಕೊಂಡು ಪವಿತ್ರ ಮತ್ತು ದೈವಸ್ವರೂಪಿಯೆಂದು ಮರ, ಕೋತಿ ಮತ್ತು ನವಿಲುಗಳನ್ನು ರಕ್ಷಿಸಿದೆ. ಈಗ ಇದೆಲ್ಲದರ ನಾಶ ಆರಂಭವಾದಂತಿದೆ. ಈಗ ನನಗೆ ಭಾರತದ ಕಾಡು–ತೋಪುಗಳೆಲ್ಲವೂ ಈಸ್ಟ್ ಇಂಡಿಯಾ ಕಂಪನಿಯು ತನ್ನ ಕಾನೂನುಬದ್ಧ ಆಸ್ತಿಯನ್ನು ಸಂಪಾದಿಸಿಕೊಳ್ಳಲು ಇರುವ ಮಾಯಾವಿ ಅಡೆತಡೆಗಳಷ್ಟೇ ಎಂದು ೧೮೦೧ರಲ್ಲಿ ಬರೆದ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕುಪ್ರಸಿದ್ಧ ಏಜೆಂಟನಾಗಿದ್ದ ಫ್ರಾನ್ಸಿಸ್ ಬುಚನನ್‌ನ ಮಾತುಗಳು ನೆನಪಿಗೆ ಬರುತ್ತಿವೆ. ಹಾಗಾಗಿ ನಾವೀಗ ಬ್ರಿಟಿಷರಿಗಿಂತ ಹೆಚ್ಚು ಬ್ರಿಟಿಷರಾಗಲು ಹೊರಟಿರುವಂತೆ ಕಾಣುತ್ತದೆ. ನಮ್ಮ ಸಾಂಸ್ಕೃತಿಕ ವಲಯದಲ್ಲಿನ ನಿಸರ್ಗ ಸ್ನೇಹಿಯಾದ ಆಚರಣೆಗಳು ಈ ದೇಶದ ಹಾಗೂ ಈಗ ಗೋಳೀಕರಣಗೊಂಡಿರುವ ಈ ಜಗತ್ತಿನ ಶ್ರೀಮಂತ ಮತ್ತು ಬಲಾಢ್ಯ ವರ್ಗಗಳು ಕಾನೂನುರಹಿತ ಮತ್ತು ಉದ್ಯೋಗರಹಿತ ಆರ್ಥಿಕ ಪ್ರಗತಿ ಸಾಧಿಸಲು ಎಲ್ಲ ಭೂಮಿ ಮತ್ತು ನೀರಿನ ಒಡೆತನ ಗಳಿಸಿ ತಮ್ಮ ಸುಖ ಮತ್ತು ಲಾಭೋದ್ದೇಶಗಳಿಗಾಗಿ ಅವನ್ನು ಲೂಟಿ ಹೊಡೆದು ಮಲಿನಗೊಳಿಸುವ ಕಾರ್ಯಕ್ರಮಕ್ಕೆ ಒಡ್ಡಲಾಗುತ್ತಿರುವ ತಡೆಗೋಡೆಯಂತೆ ಕಾಣುತ್ತಿದೆ.

ನಿಮ್ಮ ವರದಿ ಇಂತಹ ಕಾರ್ಯಕ್ರಮವನ್ನು ಅನುಮೋದಿಸುತ್ತದೆ ಎಂಬುದು ನನ್ನನ್ನು ಆಘಾತಕ್ಕೀಡು ಮಾಡಿದೆ. ನಿಜ, ಸತ್ಯ ಎನ್ನುವುದು ನಾವು ಅಂದುಕೊಳ್ಳಬಲ್ಲದ್ದನ್ನೂ ಮೀರಿ ಅಪರಿಚಿತವಾಗಿರಬಲ್ಲುದು!

ಆತ್ಮೀಯ ವೈಯುಕ್ತಿಕ ವಂದನೆಗಳೊಂದಿಗೆ

ನಿಮ್ಮ

ಮಾಧವ್

**(ಕನ್ನಡಕ್ಕೆ: ಡಿಎಸ್ಸೆನ್)**

ಸಾಹಿತ್ಯ-ಸಂಸ್ಕೃತಿ-ನಾಟಕ ಇತ್ಯಾದಿ

# 'ಭಾರತ ಯಾತ್ರೆ' ಎಂಬ ಕೃತಕ ನಾಟಕ



'ಭಾರತ ಯಾತ್ರೆ' ನೀನಾಸಂನ ಕೆ.ವಿ. ಅಕ್ಷರ ಅವರ ಇತ್ತೀಚಿನ ರಂಗಪ್ರಯೋಗ. ಅಕ್ಷರ ಅವರೇ ರಚಿಸಿ ನಿರ್ದೇಶಿಸಿರುವ ಈ ಪ್ರಯೋಗ ಮೇ ಮೊದಲ ವಾರದಲ್ಲಿ ಹೆಗ್ಗೋಡಿನ ಶಿವರಾಮ ಕಾರಂತ ರಂಗ ಮಂದಿರದಲ್ಲಿ ಪ್ರದರ್ಶಿತವಾಯಿತು. ಬದುಕೇ ಒಂದು ಯಾತ್ರೆಯಾಗಿದ್ದು, ಈ ಯಾತ್ರೆಗೆ ಏನಾದರೂ ಉದ್ದೇಶ ಅಥವಾ ಅರ್ಥ ಇದೆಯೇ ಎಂಬ ಪ್ರಶ್ನೆಗಳ ವಿಶಾಲ ತಾತ್ವಿಕ ಭಿತ್ತಿಯೊಂದಿಗೆ ಕಟ್ಟಲ್ಪಟ್ಟಿರುವಂತೆ ತೋರುತ್ತಾ ಆರಂಭವಾಗುವ ಈ ನಾಟಕ, ಬದುಕೆಂಬುದರ ವ್ಯಾಪ್ತಿಯನ್ನು ತನಗೆ ಬೇಕಾದ ಒಂದು ಮಾದರಿಯಲ್ಲಿ ರೂಪಿಸಿಕೊಂಡ ಭಾರತ ಯಾತ್ರೆಗೆ ಮಾತ್ರ ಸೀಮಿತಗೊಳಿಸಿಕೊಂಡು ಬೆಳೆಯುತ್ತಾ, ಈಗ ನೀನಾಸಮ್ಮೂ ಸೇರಿದಂತೆ ಹಲವು ಮೂಲಗಳಿಂದ ಚಾಲ್ತಿಗೆ ಯತ್ನಿಸುತ್ತಿರುವ ಭಾರತೀಯರಿಗೆ ತಮ್ಮದೇ ನಿಜ ಅನುಭವವೆಂಬುದು ಸಾಧ್ಯವಾಗುತ್ತಿಲ್ಲ ಎಂಬ ವಿದ್ವಾನ್ ಬಾಲಗಂಗಾಧರರ ಪ್ರಮೇಯವನ್ನು ಹಲವು ನೆಲೆಗಳಿಂದ ವಿಷದೀಕರಿಸುವ ಪ್ರಯತ್ನ ಮಾಡುವಲ್ಲಿ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ. ಹೀಗಾಗಿ ಈ ನಾಟಕ ತಾತ್ವಿಕ ನೆಲೆಯಲ್ಲಿಯೇ ಸಮಸ್ಯಾತ್ಮಕವಾಗಿದ್ದು, ಈ ಸಮಸ್ಯಾತ್ಮಕತೆ ಸಹಜವಾಗಿಯೇ ಅದರ ಭೌತಿಕ ರಚನೆಯಲ್ಲೂ ಎದ್ದು ಕಾಣುವಂತಾಗಿ, ಇಡೀ ಪ್ರಯೋಗ ಅಕ್ಷರ ಅವರು ಸಾಧಿಸಿಕೊಂಡಿರುವ ರಂಗ ಕೌಶಲ್ಯಗಳು, ಈ ನಾಟಕವನ್ನು ಅಭಿನಯಿಸಿರುವ ನೀನಾಸಂ ರಂಗ ಶಿಕ್ಷಣ ಕೇಂದ್ರದ ಪ್ರಸಕ್ತ ಸಾಲಿನ ನಟ-ನಟಿಯರ ಪ್ರತಿಭೆ ಮತ್ತು ಶಿಶಿರ ಅವರ ಪ್ರಯೋಗಾತ್ಮಕ ಸಮ್ಮಿಶ್ರ ಸಂಗೀತ ರಚನೆಯ ಹೊರತಾಗಿಯೂ ಹಲವು ನೆಲೆಗಳಲ್ಲಿನ ಆಂತರಿಕ ಶಿಥಿಲತೆಗಳಿಂದಾಗಿ ಸೋತು ಬೀಳುತ್ತದೆ. ನಾಟಕದ ಚೌಕಟ್ಟನ್ನು ಹಿಗ್ಗಿಸಲು ಬಳಸಿರುವ ಎಕ್ಕುಂಡಿಯವರ ಪದ್ಯವೂ ಇಲ್ಲಿ ನೆರವಿಗೆ ಬಂದಿಲ್ಲ.

ಹಾಗೆ ನೋಡಿದರೆ ಇದು ನಾಟಕವೇ ಅಲ್ಲ. ಅಕ್ಷರ ನಂಬಿರುವ ಪ್ರಮೇಯವನ್ನು ಮಹಾ ಜನತೆಗೆ 'ಪರಿಣಾಮಕಾರಿ'ಯಾಗಿ ತಲುಪಿಸಲು ಅದಕ್ಕೆ ಬೇಕಾದ ತರ್ಕದೊಂದಿಗೆ ಸೃಷ್ಟಿಸಿಕೊಂಡಿರುವ ದೃಶ್ಯಾವಳಿಯಿದು. ಇಂದು ಚರ್ವಿತ ಚರ್ವಣವಾಗಿ ಚರ್ಚಿತವಾಗುತ್ತಿರುವ ಅಭಿವೃದ್ಧಿ, ಧರ್ಮ ನಿರಪೇಕ್ಷತೆ, ಕೋಮು ಗಲಭೆ, ರಾಜಕೀಯ ಭ್ರಷ್ಟತೆ, ಉಗ್ರ ಎಡಪಂಥೀಯತೆ, ಮುಕ್ತ ಮಾರುಕಟ್ಟೆ, ಜಾತಿ ಪದ್ಧತಿ, ನಂಬಿಕೆ v/s ವೈಚಾರಿಕತೆ ಇತ್ಯಾದಿಗಳ ಬಗ್ಗೆ ರಂಗದ ಮೇಲೆ ಉದ್ದೇಶಪೂರ್ವಕವಾಗೆಂಬಂತೆ ಬಂದು, ಬದರಿ ಯಾತ್ರೆಯ ನೆಪದಲ್ಲಿ ಭಾರತ ಯಾತ್ರೆಗೆ ಹೊರಟ ಹಿರಿಯ ಉದಾರವಾದಿ ಬ್ರಾಹ್ಮಣ ಯಾತ್ರಿಕನೊಬ್ಬನೊಡನೆ ತಮ್ಮ ಪಾಲಿನ 'ಚರ್ಚೆ' ನಡೆಸಿ ಹೋಗುವ ಬೇರೆ ಬೇರೆ ಪಾತ್ರಗಳ(ಶೂದ್ರ ಮನೆಗೆಲಸದಾಕೆ, ರೆಡ್ಡಿ ರಾಜಕಾರಣಿ, ಮಹಿಳಾ ನಕ್ಸಲೈಟ್, ಪಾರ್ಸಿ ಬ್ಯುಸಿನೆಸ್ ಎಕ್ಸಿಕ್ಯೂಟಿವ್, ಮುಸ್ಲಿಂ ಆಟೋ ಚಾಲಕ, ಗುಂಡು ಪಾರ್ಟಿಯ ಬುದ್ಧಿಜೀವಿಗಳು, ಆಧುನಿಕ ಜೀವನ ಪದ್ಧತಿಯಿಂದ ಬೇಸತ್ತ ಮೊಮ್ಮಗ ಇತ್ಯಾದಿ) ಮೂಲಕ ಕಟ್ಟಲ್ಪಡುವ ಈ 'ನಾಟಕ', ಶಂಕರಾಚಾರ್ಯರ ಅದ್ವೈತ ದರ್ಶನ ಕುರಿತಂತೆ ಬದರಿಯಲ್ಲಿ ನೆಲೆಸಿರುವ ಅದ್ವೈತ 'ಸಾಧಕ'ರೊಬ್ಬರ ಪ್ರವಚನದೊಂದಿಗೆ ಮುಗಿಯುತ್ತದೆ.



ಶಂಕರರ ಈ ಅದ್ವೈತ ದರ್ಶನದ ಬಗ್ಗೆ ಇರುವಂತೆಯೇ, ಪ್ರತಿ ದೃಶ್ಯವೂ ಅಂತ್ಯದಲ್ಲಿ ಶಂಕರ ವಿರಚಿತ ದೇವೀ ಸ್ತೋತ್ರದ ಒಂದೊಂದು ಸಾಲಿನ ಘೋಷಕ್ಕೆ ಎಡೆ ಮಾಡಿಕೊಡುವ ಹಾಗೆ ವಿನ್ಯಾಸಗೊಂಡು ಈ ದರ್ಶನದತ್ತ ಧಾವಿಸುವ ದೃಶ್ಯಾವಳಿಯಲ್ಲಿ ಬರುವ ಅನೇಕ ಮಾತುಗಳ ಬಗ್ಗೆ ಅನೇಕ ಪ್ರಶ್ನೆಗಳು ಏಳುತ್ತವೆ. ಆದರೆ ನಮ್ಮ ಈ ಪ್ರಶ್ನೆಗಳು ಹುಟ್ಟುವ ಸಂದರ್ಭಗಳ ಸೃಷ್ಟಿ ಮತ್ತು ಅಲ್ಲಿನ ಬರಡು ಮಾತುಗಳ ಅಸಂಬದ್ಧತೆ ಈ ಪ್ರಶ್ನೆಗಳನ್ನು ಎತ್ತುವುದೇ ಇಲ್ಲಿ ಅಸಂಬದ್ಧ ಎನ್ನಿಸುವಂತೆ ಮಾಡಿಬಿಡುತ್ತದೆ. ಪ್ರತಿ ದೃಶ್ಯದಲ್ಲೂ ಯಾತ್ರಿಕನು ಪಾಪಿ-ಪರದೇಶಿಯೊಬ್ಬನನ್ನು ಹಿಡಿದುಕೊಂಡು 'ನಿನ್ನನ್ನು ಎಲ್ಲಿಯೋ ನೋಡಿದಂತಿದೆಯಲ್ಲಾ!' ಎಂದು ಕೇಳುತ್ತಾ ಕಾಡುವಲ್ಲಿ ವ್ಯಕ್ತವಾಗುವ ನಾಟಕಕಾರರ 'ತಾತ್ವಿಕ ಸ್ಟಂಟ್'ನಂತೆಯೇ...

ಇಲ್ಲಿ ಅಕ್ಷರ ಮೊದಲ ಬಾರಿಗೆ ಅಧ್ಯಾತ್ಮಿಕ ಅಥವಾ ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ ಅದ್ವೈತ ತತ್ವ ಮೀಮಾಂಸೆಯ ಸ್ಪರ್ಶ-ಸಂಪರ್ಕಕ್ಕೆ ಬಂದಂತೆ; ಮತ್ತು ಅದು ತಾವೀಗ ನಂಬಿರುವ 'ಭಾರತೀಯ ನಿಜ ಅನುಭವ' ಕುರಿತ ಪ್ರಮೇಯವನ್ನು ಪೋಷಿಸುವಂತೆ ಕಂಡು ಅದರಿಂದ ರೋಮಾಂಚಿತರಾದಂತೆ ದೃಶ್ಯಾವಳಿಯನ್ನು ಕಟ್ಟುತ್ತಾ ಹೋಗಿದ್ದಾರೆ. ಅವರಿಗೆ ಇಲ್ಲಿ ಪ್ರಶ್ನೆಯೆಂಬುದೇ ಇಲ್ಲ. ಹಾಗಾಗಿ, ಶೋಧನೆಯೆಂಬುದು ದೂರವೇ ಉಳಿಯಿತು.

ಈ ದೃಷ್ಟಿಯಿಂದ ಅಕ್ಷರ ಇಲ್ಲಿ ಆತ್ಯಂತಿಕವಾಗಿ ಕೇಳಿಕೊಳ್ಳಬೇಕಾದ ಎರಡು ತಾತ್ವಿಕ ಪ್ರಶ್ನೆಗಳಿವೆ ಎನಿಸುತ್ತದೆ. ಒಂದು, ಈ ನಾಟಕದಲ್ಲಿ ಸೂಚಿತವಾಗಿರುವ ಹಾಗೆ ಎಲ್ಲರಲ್ಲಿರುವುದು ಒಂದೇ ಆತ್ಮ; ಅದು ಶಿವಸ್ವರೂಪಿಯಾದದ್ದು ಎನ್ನುವುದು ಶಂಕರರು ಹೇಳುವ ಸತ್ಯವಾದರೆ, ಕಾಶಿಯಲ್ಲಿ ಎದುರಾದ ಚಾಂಡಾಲನಲ್ಲಿ ಅವರಿಗೆ ಆತ ಎದುರು ಬೀಳುವವರೆಗೂ ಏಕಾತ್ಮರೂಪಿಯಾದ ಶಿವನೇಕೆ ಕಾಣಲಿಲ್ಲ? ಎರಡು: ಎಲ್ಲರಲ್ಲಿ ಶಿವನಿರುವುದು ಆತ್ಮದ ನೆಲೆಯಲ್ಲಿನ ಸತ್ಯವೇ ಹೊರತು ದೇಹದ ನೆಲೆಯದ್ದು ಅಲ್ಲ ಎಂದೂ ಶಂಕರರ ಅದ್ವೈತ ಮೀಮಾಂಸೆ ಹೇಳುತ್ತದಲ್ಲದೆ; ಅದಕ್ಕೊಂದು ದೈಹಿಕ ನೆಲೆಯ ಸಂಹಿತೆಯನ್ನೂ ಅದು ಒಪ್ಪುತ್ತದೆಯಲ್ಲವೇ? ಈ ಹಿನ್ನೆಲೆಯಲ್ಲಿ ಈ ನಾಟಕದ ಯಾತ್ರಿಕ ಮಹಾಶಯ ತಾನೇ ಹೇಳಿಕೊಂಡಂತೆ ಒಬ್ಬ 'ಬ್ರಾಹ್ಮಣ'(ಅಕ್ಷರ ಅವರೇನೋ ಬಾಲಗಂಗಾಧರ ಪ್ರಣೀತ 'ಭಾರತೀಯ ನಿಜ ಅನುಭವ'ವನ್ನು ಶೋಧಿಸಿ ಆತನನ್ನು ನಿರ್ದಿಷ್ಟವಾಗಿ 'ಹವ್ಯಕ'ನೆಂದೇ ಗುರುತಿಸಿರುವರಾದರೂ) ದೇಹಿಯಾಗದೆ ಅನ್ಯ ದೇಹಿಯಾಗಿದ್ದರೆ ಈ ನಾಟಕ ಹೇಗಿರುತ್ತಿತ್ತು ಮತ್ತು ಅದು ಹೇಳುವ 'ಸತ್ಯ'ದ ಪಾಡೇನಾಗಿರುತ್ತಿತ್ತು?

ನಾನು ಈ ನಾಟಕವನ್ನು ನೋಡಿ ಸುಸ್ತಾಗಿ, ಆ ಸುಸ್ತನ್ನು ನಿವಾರಿಸಿಕೊಳ್ಳಲು ನನ್ನ ಸ್ನೇಹಿತರೊಂದಿಗೆ ಲಘು ಲಹರಿಯಲ್ಲಿ ಈ ನಾಟಕಕ್ಕೆ 'ಶಂಕರ ವಿಜಯ' ಎಂದು ಹೆಸರಿಟ್ಟಿದ್ದರೆ ಸೂಕ್ತವಾಗಿರುತ್ತಿತ್ತು ಎಂದು ಚಟಾಕಿ ಹಾರಿಸಿದ್ದೆ. ಆದರೆ ನಂತರ ಈ ನಾಟಕದ ಪ್ರಕಟಿತ ಪಠ್ಯ ತೆಗೆದು ನೋಡಿದರೆ ಸ್ವತಃ ಅಕ್ಷರ ಅವರೇ ತಮ್ಮ ಈ 'ನಾಟಕ'ದ ಕೊನೆಯ ದೃಶ್ಯಕ್ಕೆ 'ಶಂಕರ ವಿಜಯ' ಎಂಬ ಶೀರ್ಷಿಕೆ ಕೊಟ್ಟುಬಿಟ್ಟಿದ್ದಾರೆ! ಅವರ ಈ ಧೈರ್ಯ ಮೆಚ್ಚತಕ್ಕದ್ದೇ ಆಗಿದೆ! ಆದರೆ ಇಂತಹುದೇ ಧೈರ್ಯ ವಹಿಸಿ ಅಕ್ಷರರಷ್ಟೇ 'ಬುದ್ಧಿವಂತ'ರಾದ ಉಡುಪಿ ಕಡೆಯ ಮಾಧ್ವರೊಬ್ಬರು ಇದೇ ನೆಲೆಯಲ್ಲಿ 'ಮಧ್ವ ವಿಜಯ' ಎಂಬ ತಮ್ಮ 'ದರ್ಶನ'ಕ್ಕನುಸಾರವಾದ ದೃಶ್ಯಾವಳಿಯನ್ನು ರಚಿಸಿ ಅಕ್ಷರ ಅವರಿಗೆ ಸವಾಲು ಹಾಕಲು ಸಾಧ್ಯವಿದೆ ಎಂದಷ್ಟೇ ಇಲ್ಲಿ ಹೇಳಿದರೆ ಸಾಕೆಂದು ಕಾಣುತ್ತದೆ.

**-ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

**ಪು: ಹೂ ಮನಸ್ಸಿನ ಹೋರಾಟಗಾರ ಮತ್ತು ಇತರ ಲೇಖನಗಳು**
**ಲೇ: ಸವಿತಾ ನಾಗಭೂಷಣ ಪ್ರ: ಲೋಹಿಯಾ ಪ್ರಕಾಶನ, ಬಳ್ಳಾರಿ ಪು : ೨೨೮ ಬೆಲೆ : ರೂ. ೧೨೫/-**

# ಸಮಾಜವಾದಿ ಸ್ತ್ರೀ ಸಂಕಥನಗಳು




**ಕ**ವಿ ಸವಿತಾ ನಾಗಭೂಷಣ ಕಳೆದ ಇಪ್ಪತ್ತು ವರ್ಷಗಳಲ್ಲಿ ಪ್ರಾಸಂಗಿಕವಾಗಿ ಬರೆದ ಗದ್ಯ ಬರಹಗಳನ್ನು ಸಂಕಲಿಸಿ ಕೊಟ್ಟಿರುವ ಪುಸ್ತಕ 'ಹೂ ಮನಸ್ಸಿನ ಹೋರಾಟಗಾರ ಮತ್ತು ಇತರ ಲೇಖನಗಳು'. ಇಲ್ಲಿ ಪ್ರಾಸಂಗಿಕ ಎಂಬ ಪದವನ್ನು ಬಳಸಿರುವುದು ಏಕೆಂದರೆ, ಇಲ್ಲಿನ ಗದ್ಯ ಬರಹಗಳು ಹೆಚ್ಚೂ ಕಡಿಮೆ ಅವರ ಪದ್ಯ ಬರಹದ ಅಂಗವಾಗಿ ಅಥವಾ ಆ ಕಾರಣವಾಗಿ ಹುಟ್ಟಿರುವಂತವೇ ಆಗಿರುವುದು. ಪುಸ್ತಕದ ಕೊನೆಯ ಭಾಗದ ವಿಶಿಷ್ಟ ಬರಹಗಳು ಮತ್ತು ಈ ಕೃತಿಯ ಶೀರ್ಷಿಕೆಯ ಬರಹವನ್ನೂ ಒಳಗೊಂಡು ಕೆಲವು ಲೇಖನಗಳನ್ನು ಈ ಪಟ್ಟಿಯಿಂದ ಹೊರಗಿಡಬಹುದು. ಹಲವು ಸಂದರ್ಭಗಳಲ್ಲಿ ಕವಿತೆ ಹುಟ್ಟುವ ಕುರಿತಾದ ಪ್ರಶ್ನೆಗಳಿಗೆ ಸವಿತಾ ಕೊಟ್ಟ ಅಥವಾ ಕಂಡುಕೊಂಡ ಉತ್ತರಗಳು ಇಲ್ಲಿವೆ. ಅವರೊಡನೆಯ ಮೂರು ಸಂದರ್ಶನಗಳೂ ಇಲ್ಲಿವೆ.

ಮೇಲ್ನೋಟಕ್ಕೆ ಸವಿತಾರದು ಒಂದು ಭಾವುಕ ನಿಲುವು ಅಂತ ಅನಿಸುತ್ತದಾದರೂ ಅದು ಅಷ್ಟೇ ಅಲ್ಲ ಎಂಬುದಕ್ಕೆ ಈ ಪುಸ್ತಕ ಒಂದು ನಿದರ್ಶನವಾಗಿದೆ. ಸಮಾಜ ಮತ್ತು ಮನುಷ್ಯ ಸಂಬಂಧಗಳ ಕುರಿತು ಅವರೊಳಗೆ ಹುಟ್ಟಿದ ಮಾನವೀಯ ಸ್ಪಂದನಗಳು ಅವರ ಕವಿತೆಗಳಾಗಿ ರೂಪು ತಳೆದಿವೆ. ಈ ಸ್ಪಂದನಗಳಿಗೊಂದು ದಾರಿ ನಿರ್ದೇಶಿಸಿದ್ದು ಮುಂದೆ ಅವರಿಗೆ ದಕ್ಕಿದ ಸಮಾಜವಾದಿ ಸಿದ್ಧಾಂತಗಳ ಸ್ಪರ್ಶ ಮತ್ತು ಅವರೊಳಗೆ ಮಥಿಸಿದ ರಾಮಕೃಷ್ಣ ಪರಮಹಂಸರ ವಿಚಾರಧಾರೆಗಳು. ಹೀಗಾಗಿ ಸವಿತಾರ ಮಂಡನೆಯಲ್ಲಿ ಒಂದು ಸಂಯಮ ತಾನೇ ತಾನಾಗಿ ರೂಪುಗೊಳ್ಳುತ್ತದೆ. ತಾಯಿಯಂತೆ ತಿಳಿಹೇಳುವ ಮಾರ್ಗದಲ್ಲಿ ಅವರಿಗೆ ಹೆಚ್ಚು ನಂಬಿಕೆ. ಹೂಗಳ ಕುರಿತ ಅಪರಿಮಿತ ಪ್ರೀತಿಯು ಸುವ್ಯಕ್ತವಾಗಿ ಗೋಚರಿಸುತ್ತದಾದರೂ ಹೂವಿನಂತೆ ಮೃದು ಮಾತುಗಳಲ್ಲೇ ಕಠಿಣವಾದುದನ್ನೂ ಅವರು ಹೇಳಬಲ್ಲರು ಎಂಬುದಕ್ಕೆ ಅವರು ಕ್ವಚಿತ್ತಾಗಿ ಬರೆದಿದ್ದರೂ ಕೆಲವು ಪುಸ್ತಕಗಳ ಕುರಿತು, ಕವಿಗಳ ಕುರಿತು ಅವರು ವ್ಯಕ್ತಪಡಿಸುವ ಹಲವು ಅಭಿಪ್ರಾಯಗಳಲ್ಲಿ ಕಾಣಬಹುದು. ಉದಾಹರಣೆಗೆ, ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ಅಭಿನಂದನ ಗ್ರಂಥದಲ್ಲಿ ಕನ್ನಡದ ಕೆಲವು ಮುಂಚೂಣಿ ವಿಮರ್ಶಕರ ವಿಮರ್ಶೆಗಳ ಕುರಿತು ಅವರ ಮಾತುಗಳು ಹೀಗಿವೆ: "(ಮೇಲೆ ಕಾಣಿಸಿದ ಈ ಪತ್ರಿಕಾ ವಿಮರ್ಶೆಗಳೂ ಸೇರಿದಂತೆ) ಈ ಗ್ರಂಥದ ಅನೇಕ ಲೇಖನಗಳನ್ನು ಓದಿದಾಗ , ನನ್ನ ಮನಸ್ಸಿಗೆ ಢಾಳಾಗಿ ಗೋಚರಿಸಿದ್ದು, ನಮ್ಮ ಕನ್ನಡ ವಿಮರ್ಶೆಯ ಹಿಪಾಕ್ರಸಿ. ಈ ನಿಟ್ಟಿನಲ್ಲಿ ತಮ್ಮ ದಾಕ್ಷಿಣ್ಯ ಪರ ವಿಮರ್ಶೆಯ ಮೂಲಕ ಅವರು ಭಟ್ಟರಿಗೆ ಅನ್ಯಾಯ ಬಗೆದಿದ್ದಾರೆ ಎಂದೇ ಹೇಳಬಹುದು!"(ಪು.೬೬) 'ಹೂದೋಟದಲ್ಲೊಂದು ಸುತ್ತು' ಎಂಬ ಲೇಖನದಲ್ಲಿ ಬರುವ ಮಾತೊಂದು ಇಂತಿದೆ : "ಇನ್ನು ಸರ್ಕಾರಿ ಕಛೇರಿಗಳಂತೆ ಕಾರ್ಯ ನಿರ್ವಹಿಸುತ್ತಿರುವ, ಯಾವುದೇ ಹೊಸ ಪ್ರಯೋಗಗಳಿಗೆ ತೆರೆದು ಕೊಳ್ಳದ ನಮ್ಮ ಪ್ರಭಾವಿ-ಜನಪ್ರಿಯ ಪತ್ರಿಕೆಗಳ ಬಗ್ಗೆ ಏನೂ ಹೇಳದಿರುವುದೇ ಒಳಿತು"(ಪು.೬೯)

ಈ ಕೃತಿಯ ಕೊನೆಯ ಭಾಗದಲ್ಲಿ ಬರುವ ಫೋನ್ ಸಂಭಾಷಣೆಯ ರೂಪದಲ್ಲಿರುವ ಹದಿನೆಂಟು ಬರಹಗಳು ಸಮಕಾಲೀನತೆಗೆ ಸ್ಪಂದಿಸುವ ಕಾರಣಕ್ಕೆ ಮುಖ್ಯವೆನಿಸುತ್ತವೆ. ಇವುಗಳಲ್ಲಿ ಸವಿತಾರ ಸಾಮಾಜಿಕ ನಿಲುವುಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಮಧ್ಯಮ ವರ್ಗದ ತಳವಿಲ್ಲದ ಜೀವನ ಮಾರ್ಗಗಳನ್ನು ಕುರಿತ, ಬದುಕಿನ ಬಗೆಗಿನ ಹುಸಿ ಭ್ರಮೆಗಳ ಕುರಿತ ವಿಷಾದ ಮತ್ತು ವ್ಯಂಗ್ಯಗಳನ್ನು ಸವಿತಾ ಇಲ್ಲಿ ದಾಖಲಿಸುತ್ತಾರೆ. ವಾರಪತ್ರಿಕೆಯೊಂದರ 'ಸ್ತ್ರೀಮತ' ಎಂಬ ಅಂಕಣಕ್ಕಾಗಿ ಬರೆದ ಬರಹಗಳು ಇವಾಗಿದ್ದರೂ ಇವು ಕೇವಲ ಸ್ತ್ರೀಯರನ್ನಷ್ಟೆ ಕೇಂದ್ರವಾಗಿರಿಸಿಕೊಂಡಿಲ್ಲ. ಬದಲಾಗುತ್ತಿರುವ ಕಾಲಘಟ್ಟದಲ್ಲಿ ಬದಲಾಗುತ್ತಿರುವ ಮನುಷ್ಯ ಸಂಬಂಧಗಳ ಭಿನ್ನ ಎಳೆಗಳನ್ನು ಈ ಅಂಕಣ ಬರಹ ಪರಿಶೀಲಿಸುತ್ತದೆ. ಹಾಗೇ, ಹೆಣ್ಣು ಗಂಡು ಭೇದವಿಲ್ಲದೆ ವ್ಯಾವಹಾರಿಕತೆಗೆ ಪಕ್ಕಾಗುತ್ತಿರುವ ದುರಂತವನ್ನು ಹಿಡಿದಿಡುವ ಪ್ರಯತ್ನವನ್ನೂ ಮಾಡುತ್ತದೆ. 'ಉಣ್ಣಕ್ಕೊಂದ್ ತಂಬ್ಗಿ, ಹೊದಿಯೊಕ್ ಒಂದ್ ಕಂಬ್ಳಿ...' ಎಂಬ ಬರಹ ತುಂಬ ಲವಲವಿಕೆಯಿಂದ, ಜೊತೆಗೇ ಪಾರಂಪರಿಕ ಅಡುಗೆಯ ಜ್ಞಾನದಿಂದ ಹೆಚ್ಚು ಇಷ್ಟವಾಗುತ್ತದೆ. ಆದರೆ ಒಂದೇ ರೀತಿಯ ಅಭಿವ್ಯಕ್ತಿ ತಂತ್ರವನ್ನು ಬಳಸಿದ್ದು ಏಕತಾನತೆಗೆ ಕಾರಣವಾಗುತ್ತದೆ. ಫೋನ್ ಸಂಭಾಷಣೆಯ ಜೊತೆಗೆ ಬೇರೆ ಬಗೆಯ ತಂತ್ರಗಳನ್ನೂ ಬಳಸಬಹುದಿತ್ತು ಎನಿಸದಿರದು.

ಗಾಂಧಿಮಾರ್ಗದಲ್ಲಿನ ಸವಿತಾ ಅವರ ನಂಬಿಕೆ ಮತ್ತು ಈ ಮಾರ್ಗದಲ್ಲಿ ನಡೆಯದ ಜಗತ್ತಿನ ಕುರಿತ ವಿಷಾದ ಅವರ ಈ ಕೃತಿಯಲ್ಲಿನ ಬರಹಗಳ ಸ್ಥಾಯಿ ಭಾವ ಎನ್ನಬಹುದು. 'ಹೂ ಮನಸ್ಸಿನ ಹೋರಾಟಗಾರ:ಕಿಷನ್ ಪಟ್ನಾಯಕ್' ಎಂಬ ಲೇಖನದಲ್ಲಿ ಈ ಭಾವ ನೇರವಾಗಿ ವ್ಯಕ್ತವಾಗುತ್ತದೆ. "ಆಧುನಿಕ ಜಗತ್ತಿನ ಮುಂದೆ ಇರುವುದು ಎರಡೇ ಆಯ್ಕೆ; ಒಂದು ಅಣುಬಾಂಬ್ ಮತ್ತೊಂದು ಗಾಂಧಿ"(ಪು.೫೩) ಎನ್ನುವ ಕಿಷನ್ ಮಾತನ್ನು ಉಲ್ಲೇಖಿಸುವ ಲೇಖಕಿ, ಅವರೊಂದಿಗಿನ ತಮ್ಮ ಒಡನಾಟವನ್ನು ತುಂಬಾ ಸಹಜವಾಗಿ ಹಂಚಿಕೊಳ್ಳುತ್ತಾರೆ. ಹಾಗೆಯೇ ಸಾಂದರ್ಭಿಕವಾಗಿ ತಾನು ಭಾಗವಹಿಸಿದ್ದ ಶಿಬಿರವೊಂದರಲ್ಲಿನ ಅನುಭವವನ್ನು ಹೀಗೆ ಹೇಳುತ್ತಾರೆ: "ಆ ಶಿಬಿರದಲ್ಲಿ ನಾನೊಬ್ಬಳೇ ಹೆಣ್ಣುಮಗಳು, ಮಿಕ್ಕವರೆಲ್ಲಾ ನಿಗಿನಿಗಿ ಕೆಂಡದ ಕಣ್ಣುಗಳ ದಲಿತ ಹುಡುಗರು! .... ದಲಿತ ಸಂಘರ್ಷ ಸಮಿತಿಯ ಹುಡುಗರ ಹಾಡುಗಳು ನನ್ನ ಮುಂದೆ ಹೊಸ ಲೋಕವನ್ನೇ ತೆರೆದಿಟ್ಟವು. ಐದಾರು ವರ್ಷಗಳ ಹಿಂದೆ ನನ್ನ 'ಸ್ತ್ರೀಲೋಕ' ಕಾದಂಬರಿಯಲ್ಲಿ ಅದನ್ನು ಬಳಸಿಕೊಳ್ಳಲು ಆ ಹಾಡಿನ ಸಾಹಿತ್ಯಕ್ಕಾಗಿ ತುಂಬಾ ಹುಡುಕಾಡಿದೆ. ಅಂದಿನ ಹುಡುಗರು, ಈಗ, ಅವರಲ್ಲಿ ಅನೇಕರು ನಾಯಕರು... ಹಾಡ ಮರೆತಿದ್ದರು..."(ಪು. ೫೧)

ಇಲ್ಲಿನ ಹಲವು ಲೇಖನಗಳು ಪ್ರಾಸಂಗಿಕ ಬರಹಗಳಾಗಿರುವುದರಿಂದ, ಅವುಗಳಿಗೆ ಕೆಲವು ಮಿತಿಗಳು ತಳುಕು ಹಾಕಿಕೊಳ್ಳುತ್ತವೆ. ಮುಖ್ಯವಾಗಿ ಆತ್ಮಚರಿತ್ರೆಯ ಮಾದರಿಯ ಬರಹಗಳಲ್ಲಿ ಮಂಡನೆಯ ಕ್ರಮ ಪುನರಾವರ್ತನೆಯಾಗುತ್ತವೆ, ಕೆಲವೊಮ್ಮೆ ವಿವರಗಳೂ. ಇಷ್ಟಾಗಿ ಈ ಕೃತಿ ಸವಿತಾರ ಗದ್ಯ ಬರಹದ ಸಾಧ್ಯತೆಯನ್ನು ಅನಾವರಣಗೊಳಿಸಿದೆ ಎಂದೇ ಹೇಳಬೇಕು. ಕವಿತೆಯಂತೆ ಗದ್ಯದ ಕಡೆಗೂ ಸವಿತಾ ಗಂಭೀರ ನೋಟ ಬೀರಬಹುದಾಗಿದೆ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

**-ಡಾ. ಸಬಿತಾ ಬನ್ನಾಡಿ**

**ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ ವಿನೋಬನಗರ ಶಾಖೆಯಲ್ಲಿ *ಸಂಪಾದಕರು:'ಹೊಸ ಮನುಷ್ಯ'* ಹೆಸರಿನಲ್ಲಿ ತೆರೆಯಲಾಗಿರುವ ಚಾಲ್ತಿ ಬ್ಯಾಂಕ್ ಖಾತೆ ಸಂ: ೬೪೧೧೧೦೩೫೮೩೦ ಗೆ ಚಂದಾ/ ಜಾಹೀರಾತು ಶುಲ್ಕ ತುಂಬುವವರು ಪ್ರತ್ಯೇಕವಾಗಿ ಸಂಪಾದಕರಿಗೆ ತಮ್ಮ ಪಾವತಿ ವಿವರ ತಿಳಿಸಬೇಕು. ಇಲ್ಲದಿದ್ದಲ್ಲಿ ನಿಮ್ಮ ಹೆಸರು ಚಂದಾ ಪಟ್ಟಿಗೆ/ ನಮ್ಮಲೆಕ್ಕಕ್ಕೆ ಸೇರದಿರುವ ಸಾಧ್ಯತೆ ಇರುತ್ತದೆ**-ಸಂಪಾದಕ

## ಪತ್ರಿಕೆಗೆ ಹಾರ್ದಿಕ ಶುಭಾಶಯಗಳು!

### ಶ್ರೀ ದೇವಿ ಹೋಂ ಇಂಡಸ್ಟ್ರೀಸ್

ಪ್ರೊ.: ಮಂಜುನಾಥ ಕರ್ಕಿಕೊಪ್ಪ
ಎಡಜಿಗಳೆ ಮನೆ ಅಂಚೆ
ಸಾಗರ (ಶಿವಮೊಗ್ಗ ಜಿಲ್ಲೆ)

**ನಮ್ಮಲ್ಲಿ ಉತ್ತಮ ಗುಣಮಟ್ಟದ**
**ಎಲ್ಲ ರೀತಿಯ ಸ್ಟೀಲ್ ಉಪಕರಣಗಳು ಲಭ್ಯ!**

## 'ಹೊಸ ಮನುಷ್ಯ'ನಿಗೆ
## ಹಾರ್ದಿಕ ಶುಭಾಶಯಗಳು!

### ಮೆ॥ ಬ್ರೈಟ್ ಏಜೆನ್ಸೀಸ್

ಎಲ್.ಎಲ್.ಆರ್. ರಸ್ತೆ
ಶಿವಮೊಗ್ಗ-577 201 (ಕರ್ನಾಟಕ)

ದೂರವಾಣಿ: 08182-290057
ಟೆಲಿಫ್ಯಾಕ್ಸ್: 08182-279850

ಈ ಮೇಲ್ : brightagency@dataone.in
brightagenciessmg@gmail.com

## ವಿವೇಕ ಬ್ಯೂರೋ ಫಾರ್ ಕಾಂಪಿಟೇಟೀವ್ ಎಕ್ಸಾಮ್ಸ್, ಹಾಸನ

ಪ್ರಿಯ ಪೋಷಕರೇ,

ನಮ್ಮ ಮಕ್ಕಳು ಬ್ಯಾಂಕಿನಲ್ಲಿ ಉದ್ಯೋಗ ಮಾಡುವುದನ್ನು ಬಯಸುತ್ತೀರಾ? ಹಾಗಿದ್ದಲ್ಲಿ ಇಲ್ಲಿದೆ ಒಂದು ಸುವರ್ಣ ಅವಕಾಶ, ಯಾರಿಗೂ ಲಂಚ ಕೊಡದೆ, ಯಾರ ಶಿಫಾರಸ್ಸಿಗೂ ಹೆಣಗಾಡದೆ ಉದ್ಯೋಗ ಪಡೆಯುವ ರಾಜಮಾರ್ಗ ಸ್ಪರ್ಧಾತ್ಮಕ ಪರೀಕ್ಷೆ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಹಿಂದೆಂದಿಗಿಂತ ಇಂದು ಅತ್ಯಧಿಕ ಸಂಖ್ಯೆಯ ಹುದ್ದೆಗಳನ್ನು ಕೇಂದ್ರ ಸರ್ಕಾರ **I.B.P.S, SBI & RBI** ಇವುಗಳ ಮೂಲಕ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿ ಪ್ರತಿಭೆಗೆ ತಕ್ಕಂತೆ ಆಯ್ಕೆ ಮಾಡಿಕೊಳ್ಳಲಾಗುತ್ತಿದೆ.

ನಮ್ಮ ಮಕ್ಕಳು ಪಿಯುಸಿಯಲ್ಲಿ ಶೇ 60% ರಷ್ಟು ಅಂಕಗಳಸಿ ಉತ್ತೀರ್ಣರಾಗಿದ್ದರೆ ಅಥವಾ ಡಿಗ್ರಿ ಪರೀಕ್ಷೆಯಲ್ಲಿ ಪಾಸ್ ಮಾಡಿದ್ದು ಕನಿಷ್ಠ 18 ವರ್ಷ ತುಂಬಿದ್ದರೆ ಕ್ಲರಿಕಲ್ ಕೇಡರ್ ಹುದ್ದೆಗಳಿಗೆ ಸ್ಪರ್ಧಿಸಲು ಅವರಿಗೆ ಅರ್ಹತೆ ಇದೆ.

ನಮ್ಮ ಸಂಸ್ಥೆಯು ಇಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕಳೆದ 26 ವರ್ಷಗಳಿಂದ ತರಬೇತಿ ನೀಡುತ್ತಾ ಬಂದಿದ್ದು, ಸಾವಿರಾರು ಜನ ಇದರ ಸದುಪಯೋಗ ಪಡೆದಿದ್ದಾರೆ. ಈ ವರ್ಷ ವಿಶೇಷವಾಗಿ ಬ್ಯಾಂಕಿಂಗ್ ಕ್ಲರಿಕಲ್ ಕೇಡರ್ ಹುದ್ದೆಗಳಿಗೆ ಶೀಘ್ರದಲ್ಲೇ 20 ದಿವಸಗಳ ಊಟ ವಸತಿ ಸಹಿತ (ರೆಸಿಡೆನ್ಷಿಯಲ್) ಕ್ರಾಶ್‌ಕೋರ್ಸ್‌ಅನ್ನು ಹಮ್ಮಿಕೊಂಡಿದೆ. ಆಸಕ್ತಿಯುಳ್ಳ ಪೋಷಕರು ಮತ್ತು ಅಭ್ಯರ್ಥಿಗಳು–



**ಮಾಹಿತಿಗಾಗಿ ಸಂಪರ್ಕಿಸಿ:–**

ನಿರ್ದೇಶಕರು: ಶ್ರೀಮತಿ ರೇಣುಕಾ ಶಿವಕುಮಾರ್

ವಿವೇಕ ಬ್ಯೂರೋ ಫಾರ್ ಕಾಂಪಿಟೇಟೀವ್ ಎಕ್ಸಾಮ್ಸ್

ಎಸ್.ಜೆ.ಪಿ.ಪಾರ್ಕ್ ರಸ್ತೆ, ಕೆ.ಆರ್.ಪುರಂ, **ಹಾಸನ–573201**

**ದೂರವಾಣಿ : 08172-268253 ಮೊಬೈಲ್ : 9448867087**


**ತಿಂಗಳ ಸಾಲುಗಳು...**



ಇಳೆಯಿಂದ ಮೊಳಕೆಯೊಗೆವಂದು ತಮಟೆ ಸದ್ದಿಲ್ಲ
ಫಲಮಾಗುವಂದು ತುತ್ತೂರಿ ದನಿಯಿಲ್ಲ
ಬೆಳಕೀವ ಸೂರ್ಯ ಚಂದ್ರರೊಂದು ಸದ್ದಿಲ್ಲ
ಹೊಳಿ ನನ್ನ ತುಣಗಳನು ಮಂಕುತಿಮ್ಮ

**-ಡಿ.ವಿ. ಗುಂಡಪ್ಪ**


**ಪತ್ರಿಕೆಗೆ ಶುಭವನ್ನು ಕೋರುವ...**

**– ಬಿ.ಸುರೇಶ**

**ಡಾ. ವಿಜಯಾ**



HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Printers, Bengaluru-560 026 Ph. No:080-26757159

**Regd. News Paper** RNI No. KARKAN/2012/47568

Rgd No. KA/SK/SMG-1209/2013-15


ಇವರಿಗೆ \ To


If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extesion. Vinoba Nagara, Shivamogga -577204 (Karnataka)